ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ನಾವು B.A.C. ನಲ್ಲಿ ತೀರ್ಮಾನ ತೆಗೆದು ಕೊಂಡಿದ್ದು ನಿಜ. We are prepared to co-operate and sit even late in the evengings and nights.........

ಅಧ್ಯಕ್ಷರು.—ಪ್ರತಿಯೊಬ್ಬ ಸದಸ್ಯರು ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಇಲ್ಲ. ಕಾಂಗ್ರೆಸ್ ಪಕ್ಷಕ್ಕೆ ಇಂತಿಷ್ಟು ಸಮಯವೆಂದು ನಿಗದಿ ಮಾಡಿದ್ದಾರೆ. ಆ ಸಮಯದಲ್ಲಿ ಅವರ ಪಕ್ಷದವರು ಮಾತನಾಡಿ ಮುಗಿಸಬೇಕು. ಅದೇ ರೀತಿ ಎಲ್ಲಾ ಪಕ್ಷಗಳಿಗೂ ಸಮಯವನ್ನು ನಿಗದಿ ಮಾಡಿ, ಕಾರ್ಯಕಲಾಪಗಳನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ದಯವಿಟ್ಟು ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ನಾನು ನಿನ್ನೆಯ ದಿವಸ ಮಾತನಾಡುವಾಗ ಉಪಾಧ್ಯಕ್ಷರು ಹೇಳಿದರು ನಾಳೆ ದಿವಸ ಮಾತನಾಡಬಹುದೆಂದು.........

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾವು ಅಜೆಂಡಾ ಪ್ರಕಾರ ಕೆಲಸ ಮಾಡ ಬೇಕು. ಅದು ಬಿಟ್ಟು ಕೆಲಸ ಮಾಡುವುದಾದರೆ ಹೇಗೆ?

ಶ್ರೀ ಪಾಟೀಲ್.—ಸ್ವಾಮಿ ನಾನು ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ಕೂಡ ಮಾತನಾಡಿಲ್ಲ.

ಅಧ್ಯಕ್ಷರು.—ಎಲ್ಲಾ ಮಾನ್ಯ ಸದಸ್ಯರು ಒಂದೇ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಸಹಕಾರ ಮಾಡಬೇಕು.

ಡಾ॥ ವಿ.ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ತಾವು ನಿನ್ನೆಯ ದಿವಸ ಸುಮಾರು ಅರ್ಧ ಗಂಟೆ ಕುಳಿತುಕೊಂಡು ಬೇರೆ ಬೇರೆ ಪಕ್ಷದ ನಾಯಕರನ್ನು ಕರೆಸಿ ಚರ್ಚೆ ಮಾಡಿ ಒಂದು ತೀರ್ಮಾನ ವನ್ನು ತೆಗೆದುಕೊಂಡ ಮೇಲೆ ಆ ಪ್ರಕಾರ ಕೆಲಸ ಮಾಡುವುದು ಸೂಕ್ತವೆಂದು ನನಗನಿಸುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಸಹಕಾರ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

MR. SPEAKER.—I hope the senior Members will also co-operate Now the Hon'ble Minister to reply.

FINANCIAL BUSINESS

Discussion and Voting on the demands for grants for the year 1983-84—D. No. 54, 55—Co-operation Regulated Markets.

ಶ್ರೀ ಆರ್ ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ......

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ನಾನು ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಬೇಕು. ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಿಮ್ಮ ನಾಯಕರು ಸಭಾ ನಡವಳಿಕೆಗಳ ಸಮಿತಿಯಲ್ಲಿದ್ದರು, ಅವರು ಒಪ್ಪಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಸ್ವಾಮಿರಾವ್.—ಅವರು ಒಪ್ಪಿದ್ದಾರೆಂದು ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನಿಮ್ಮ ನಾಯಕರಿಗೆ ಹೇಳಿ. ಅವರ ಮಾತನ್ನು ನೀವು ತೆಗೆದುಹಾಕುವುದಾದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಪುಟ್ಟಸ್ವಾಮಿ ಗೌಡ.—ನಾವು ಹೊಸ ಸದಸ್ಯರು, ನಮ್ಮ ಅಭಿಪ್ರಾಯವನ್ನು ಇಲ್ಲಿ ಹೇಳು ವುದಕ್ಕಾಗದಿದ್ದರೆ ನಾವು ಇಲ್ಲಿ ಏತಕ್ಕೆ ಇರಬೇಕು?

MR. SPEAKER.—I would like to here you. But unfortunately time does not permit me. Please co-operate.

ಶ್ರೀ ಎನ್. ಚಿಕ್ಕೇಗೌಡ.—ತಾವು ಈ ರೀತಿ ಸಮಾಧಾನಕರವಾದ ಉತ್ತರವನ್ನು ಕೊಟ್ಟು ಬಿಟ್ಟರೆ ಹೇಗೆ? ಆದರೂ ತಾವು ಹೇಳಿದ ಮೇಲೆ ಅದನ್ನು ಒಪ್ಪಿದ್ದೇನೆ. ಆದರೆ ನನ್ನದೊಂದು ಶರತ್ತು. ನನಗೆ ಹೆಚ್ಚು ಸಮಯ ವಿವರಣೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವೊಂದನ್ನು ಸದನದಲ್ಲಿ ಓದಬೇಕಾಗಿದೆ. ಆದ್ದರಿಂದ ನನಗೆ ವಿವರಣೆಗೆ ಹೆಚ್ಚು ಅವಕಾಶ ಕೊಡಬೇಕು.

ಅಧ್ಯಕ್ಷರು.—ಆಯಿತು ಹೆಚ್ಚು ಸಮಯ ಕೊಡುತ್ತೇನೆ. It is a commitment on the part of the Chair.

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಲ್ಲರೂ ಅವಕಾಶಬೇಕೆಂದು ಕೇಳುತ್ತಿದ್ದಾರೆ. ನಿನ್ನೆ ಸಭಾ ನಡವಳಿಕೆಯ ಸಮಿತಿಯ ತೀರ್ಮಾನವಾದ ಮೇಲೆ, ನಿನ್ನೆಯೇ ಸುಮಾರು ೬ ಗಂಟೆವರೆಗಾದರೂ ಕುಳಿತು ಚರ್ಚೆಯನ್ನು ನಿನ್ನೆಯೇ ಮುಗಿಸಬೇಕೆಂದು ತೀರ್ಮಾನವಾಗಿದ್ದು ನಿಜ. ಆದರೆ ನಿನ್ನೆ ಆಕಸ್ಮಿಕವಾಗಿ ಆದ ಘಟನೆಯಿಂದಾಗಿ ಚರ್ಚೆ ಅಪೂರ್ಣವಾಯಿತು ಆದ್ದರಿಂದ ಇವತ್ತು ಕೆಲವು ಸದಸ್ಯರಿಗೆ ಅವಕಾಶ ಕೊಟ್ಟು ನಂತರ ಉತ್ತರವನ್ನು ಮಂತ್ರಿಗಳು ಕೊಟ್ಟಿದ್ದರೆ ಒಳ್ಳೆಯದಿತ್ತು. ನಾವು ಇದುವರೆವಿಗೂ ಸಹಕಾರ ಕೊಟ್ಟಿದ್ದೇವೆ. ೨೩ನೇ ತಾರೀಖು ಡಿಮ್ಯಾಂಡ್‌ಗಳನ್ನು ಮುಗಿಸುತ್ತೇವೆಂದು ಹೇಳುತ್ತಿದ್ದೇವೆ. ಎಲ್ಲಿ ನಾವು ಸಹಕಾರ ಕೊಟ್ಟಿಲ್ಲ? ಹೀಗೆ ಮಾಡುವುದಾದರೆ, ನಾವೂ ಕೂಡ ಕಾನೂನು ಪ್ರಕಾರ ೧೧ ಗಂಟೆಗೆ ಸಭೆ ಸೇರುವುದು, ೫ ಗಂಟೆಗೆ ಮುಗಿಸಿ ಹೋಗುವುದು ಹೀಗೆ ಮಾಡುತ್ತೇವೆ.

ಅಧ್ಯಕ್ಷರು.—ಅವರಿಗೆ ಸಹಕಾರ ಬೇಕೋ ಬೇಡವೋ ನನಗೆ ಗೊತ್ತಿಲ್ಲ. ಆದರೆ ನನಗಂತೂ ನಿಮ್ಮ ಸಹಕಾರ ಬೇಕು.

ಶ್ರೀ ಬಿ. ಸ್ವಾಮಿರಾವ್.—ಬಹಳ ಕೆಟ್ಟು ಹೋಗಿರತಕ್ಕಂತಹ ಈ ಇಲಾಖೆಯನ್ನು ಸರಿಪಡಿಸುವುದಕ್ಕೆ ಕೆಲವು ಉಪಯುಕ್ತ ಸಲಹೆಗಳನ್ನು ಕೊಡಬೇಕಾಗಿದೆ. ಆದ್ದರಿಂದ ನನಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ನಿಮ್ಮ ನಾಯಕರೂ ಸಭಾ ನಡವಳಿಕೆಗಳ ಸಭೆಯಲ್ಲಿ ಭಾಗವಹಿಸಿದ್ದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸದಸ್ಯರು ಕೇಳಿದಾಗ ನಿಮ್ಮ ನಾಯಕರೂ ಸಭಾ ನಡವಳಿಕೆಗಳ ಸಮಿತಿಯಲ್ಲಿ ಭಾಗವಹಿಸಿದ್ದರು ಅಂತ ಹೇಳಿದರೆ ಹೇಗೆ? ನಿನ್ನೆ ಚರ್ಚೆ ಮೊಟಕು ಆಯಿತು. ಚರ್ಚೆ ಪೂರ್ಣವಾಗಿ ಮುಗಿಯಲಿಲ್ಲ. ಕಾರಣ ತಮಗೂ ಗೊತ್ತಿದೆ. ನಿನ್ನೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಆದಂತಹ ತೀರ್ಮಾನ ಏನು ಎಂದರೆ, ನಿನ್ನೆಯೇ ೬ ಗಂಟೆಯವರೆಗಾದರೂ ಕುಳಿತು ಚರ್ಚೆ ಮುಗಿಯಬೇಕು, ನಾಳೆ ಅಂದರೆ ಇಂದು ಉತ್ತರ ಕೊಡಬೇಕೆಂದು ನಿರ್ಣಯವಾಗಿದ್ದು ನಿಜ ಆದರೆ ನಿನ್ನೆ ಆದಂತಹ ಚರ್ಚೆ ಪೂರ್ಣವಾಗಲಿಲ್ಲ. ಆದ್ದರಿಂದ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕು.

MR. SPEAKER.—I share the concern of the Members. But the time does not permit me. Please co-operate.

ಶ್ರೀ ಪುಟ್ಟಸ್ವಾಮಿ ಗೌಡ.—ತಾವು ಹೇಳುವುದನ್ನೆಲ್ಲಾ ಒಪ್ಪಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ವಿವರಣೆಯನ್ನು ಮಾನ್ಯ ಮಂತ್ರಿಗಳಿಂದ ಕೇಳುವಿರಂತೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪುಟ್ಟಸ್ವಾಮಿ ಗೌಡ.—ಹೊಸ ಸದಸ್ಯರ ಅಭಿಪ್ರಾಯವೇನೆಂಬುದನ್ನು ತಾವು ಗ್ರಹಿಸಲಿಲ್ಲ ಅಂತ ಕಾಣುತ್ತದೆ. ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ೨ ನಿಮಿಷ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. ಸಭೆಯ ನಡವಳಿಕೆಗಳು ನಡೆಯುವುದಕ್ಕೆ ಅನುವು ಮಾಡಿಕೊಡಿ.

ಶ್ರೀ ಆರ್. ಎಲ್. ಜಾಲಪ್ಪ.—೮೯ ಕೋಟಿ ರೂಪಾಯಿಗಳು ಅದರ ಶೇರು ಬಂಡವಾಳ ಇದೆ.

ಶ್ರೀ ಪುಟ್ಟಸ್ವಾಮಿ ಗೌಡ.—ನಾನು ತಮ್ಮನ್ನು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಅಭಿಪ್ರಾಯ ಏನು ಎಂಬುದನ್ನು ಸಭೆಯಲ್ಲಿ ತಿಳಿಸಬೇಕಾಗಿದೆ. ದಯಮಾಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರಿ ಇಲಾಖೆಯಲ್ಲಿ......

ಶ್ರೀ ಪುಟ್ಟಸ್ವಾಮಿಗೌಡ.—ತಾವು ಅವಕಾಶ ಕೊಡದಿದ್ದರೆ ಸದನದಲ್ಲಿ ಕುಳಿತು ಏನು ಮಾಡಬೇಕೆಂದು ವಿಷಾದ ವ್ಯಕ್ತಪಡಿಸಬೇಕಾಗಿದೆ. ಒಂದೇ ಒಂದು ನಿಮಿಷ ಅವಕಾಶ ಕೊಟ್ಟರೆ ನನ್ನ ಅಭಿಪ್ರಾಯವನ್ನು ಹೇಳಿಬಿಡುತ್ತೇನೆ. ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈ ಒಂದು ಇಲಾಖೆಯ ರಿಸರ್ವ್ ಫಂಡ್ ೨೧೩.೧೩ ಕೋಟಿ ರೂಪಾಯಿಗಳು. ವರ್ಕಿಂಗ್ ಕ್ಯಾಪಿಟಲ್ ೧೫೪೬ ಕೋಟಿ ರೂಪಾಯಿಗಳು.

ಶ್ರೀ ಪುಟ್ಟಸ್ವಾಮಿ ಗೌಡ.—ಈ ಒಂದು ನೀತಿಯನ್ನು ವಿರೋಧಿಸಿ ನಾನು ಸಭಾ ತ್ಯಾಗವನ್ನು ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರಗೆ ಹೋದರು)

ಶ್ರೀ ಆರ್. ಎಲ್. ಜಾಲಪ್ಪ.—ಇದರಲ್ಲಿ ೦.೨೬ ಕೋಟಿ ಹಣ ದುರುಪಯೋಗವಾಗಿದೆ. ಇದರಲ್ಲಿ ಭಾಗಿಯಾಗಿರುವವರಲ್ಲಿ ಸುಮಾರು ೩೬೦ ಗೆಜೆಟೆಡ್ ಆಫೀಸರ್ಸ್ ಇದ್ದಾರೆ. ಮತ್ತು ೨೮೬೦ ಜನ ನಾನ್ ಗೆಜೆಟೆಡ್ ಆಫೀಸರ್ಸ್ ಇದ್ದಾರೆ. ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಂಘಗಳ ಸಂಖ್ಯೆ ೨೩,೮೪೪. ಇದರಲ್ಲಿ ಲಿಕ್ವಿಡೇಟ್ ಆಗಿರತಕ್ಕಂತಹ ಸೊಸೈಟಿಗಳು ೪೫೧೨. ಮತ್ತು ಡಿಫಂಕ್ಟ್ ಆಗಿರತಕ್ಕಂತಹ ಸೊಸೈಟಿಗಳು, ಅಂದರೆ ಕೆಲಸ ಮಾಡದೇ ಇರುವ ಸಹಕಾರಿ ಸಂಘಗಳು ೫೦೪೪. ಈ ರೀತಿ ಕೆಲಸ ಮಾಡದಿರುವ ೫೦೪೪ ಡಿಫಂಕ್ಟ್ ಸೊಸೈಟಿಗಳನ್ನು ಕೂಡಲೇ ಲಿಕ್ವಿಡೇಷನ್ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಸೊಸೈಟಿಗಳನ್ನು ಲಿಕ್ವಿಡೇಷನ್ ಮಾಡಿದ ಮೇಲೆ ಅಲ್ಲಿ ಅಧಿಕಾರೇತರರನ್ನು ನೇಮಿಸಿ ಈ ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ ನಾನು ಕಾರ್ಯಕ್ರಮ ಕೈಗೊಳ್ಳುತ್ತಿದ್ದೇನೆ.

ಮತ್ತೆ ಸಹಕಾರಿ ಸೊಸೈಟಿಗಳನ್ನು ಆಡಿಟ್ ಮಾಡಿರುವ ವಿಚಾರವಾಗಿ ಹೇಳುವುದಾದರೆ, ೧೯೮೦–೮೧ರಲ್ಲಿ ೧೬,೫೯೯ ಸೊಸೈಟಿಗಳನ್ನು ಆಡಿಟ್ ಮಾಡಲಾಗಿದೆ. ೧೯೮೧–೮೨ರಲ್ಲಿ ೧೮.೪೦೬ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ. ೧೯೮೨–೮೩ರಲ್ಲಿ ೧೮,೯೯೭ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜೂನ್ ತಿಂಗಳಿಂದ ಜುಲೈ ೩೦ರ ವರೆಗೆ ೧೧,೦೬೦ ಸಹಕಾರಿ ಸಂಘಗಳನ್ನು ಆಡಿಟ್ ಮಾಡಲಾಗಿದೆ.

ಮಾನ್ಯ ರಂಗನಾಥ್‌ರವರು ಈ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತಾ, ಜಿಲ್ಲಾ ಬ್ಯಾಂಕಿನ ಹಾಗೂ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳ ಸ್ಥಿತಿ ಅಷ್ಟೇನೂ ಚೆನ್ನಾಗಿರಲಿಲ್ಲ. ಆದರೆ ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಸ್ವಲ್ಪ ಮಟ್ಟಿಗೆ ಸುಧಾರಣೆಯಾಯಿತು ಎಂಬುದಾಗಿ ಹೇಳಿದರು. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಅವರ ಇಲಾಖೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ನಿರೀಕ್ಷೆ ಮಾಡಿದ್ದೆ, ಆದರೆ ಯಾವುದೇ ಬದಲಾವಣೆ ಆಗಲಿಲ್ಲವೆಂದು ಮಾನ್ಯ ರಂಗನಾಥ್‌ರವರು ಮಾತನಾಡುತ್ತಾ ಹೇಳಿದರು. ಅಧ್ಯಕ್ಷರೇ, ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ರೈತರಿಗೆ ಬಡ್ಡಿ ರಿಯಾಯಿತಿಯನ್ನು ೨೮ ಕೋಟಿ ರೂಪಾಯಿಗಳಷ್ಟು ಕೊಡಲಾಯಿತು.

ಶ್ರೀ ಬಿ. ಶಿವಣ್ಣ.—ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಂದರೆ ಯಾವ ಸರ್ಕಾರ?

ಶ್ರೀ ಆರ್.ಎಲ್. ಜಾಲಪ್ಪ.—ಇನ್ಯಾವ ಸರ್ಕಾರ ಸ್ವಾಮಿ?

ಶ್ರೀ ಬಿ. ಶಿವಣ್ಣ.—ನೀವು ಅಧಿಕಾರಕ್ಕೆ ಬಂದ ಮೇಲೆ ಅಂತ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ.—ಆಯಿತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೨೮ ಕೋಟಿ ರೂಪಾಯಿ ಬಡ್ಡಿ ರಿಯಾಯಿತಿಯನ್ನು ಕೊಡಲಾಯಿತು. ಅನೇಕ ಸಂದರ್ಭಗಳಲ್ಲಿ ಸಾಲ ಮನ್ನಾ ಮಾಡಲಾಯಿತು. ಸರ್ಕಾರದಲ್ಲಿ ಸಾಲ...

ಶ್ರೀ ಬಿ. ಶಿವಣ್ಣ.—ಬಡ್ಡಿಯನ್ನು ಎಷ್ಟು ಸಂದಾಯ ಮಾಡಿದ್ದೀರಿ?

ಶ್ರೀ ಆರ್.ಎಲ್. ಜಾಲಪ್ಪ.—ಎಲ್ಲದಕ್ಕೂ ಉತ್ತರ ಕೊಡಬೇಕೆಂದರೆ ಆಗುವುದಿಲ್ಲ. ಪದೇ ಪದೇ ಮಾತನಾಡಿದರೆ ಹೇಗೆ? ಮಾನ್ಯ ಸದಸ್ಯರು ನೋಟ್ ಮಾಡಿಕೊಳ್ಳಲಿ. ಏನು ಬೇಕಾದರೂ ಕೇಳಿ, ಅವಕ್ಕೆ ಉತ್ತರ ಕೊಡಲು ನಾನು ತಯಾರಾಗಿದ್ದೇನೆ. ಎಲ್ಲರೂ ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನುಮುಂದೆ ಹಣ ಪಡೆದು...

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ರಿಪ್ಲೈ ಕೊಡದಿದ್ದರೂ ಓಟು ಆಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.—ನಾವು ಆ ತರಹ ಮಾಡುವುದಿಲ್ಲ. ಇಲ್ಲದಿದ್ದುದನ್ನು ಕಲ್ಪಿಸಿಕೊಂಡರೆ ಹೇಗೆ? ನೀವು ಏನೇ ಕೇಳಿದರೂ ಉತ್ತರ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಇನ್ನು ಮೇಲೆ ಸರ್ಕಾರದಿಂದ ಸಾಲ ತೆಗೆದುಕೊಂಡು ಸಾಲ ತೀರಿಸುವವರಿಗೆ ನಬಾರ್ಡ್ ಸಂಸ್ಥೆಯವರು ಏನು ಬಡ್ಡಿ ಹಾಕುತ್ತಾರೆ, ಏಳು-ಏಳುವರೆಯಷ್ಟು, ಅದೇ ಬಡ್ಡಿಗೆ ಸಾಲ ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮತ್ತು ಬೆಳೆ ಬೆಳೆಯುವವರು ಸಹಕಾರ ಸಂಘಗಳಲ್ಲಿ ಸಾಲ ಮಾಡಿ ಬೆಳೆ ಬೆಳೆದು ಆ ಸಾಲವನ್ನು ತೀರಿಸುವುದಕ್ಕೆ ಮುಂದೆ ಬಂದರೆ ಮಾರುಕಟ್ಟೆ ಬೆಲೆಗಿಂತ ಶೇಕಡಾ ಐದರಷ್ಟು ಜಾಸ್ತಿ ಹಣ, ಧಾರಣೆಯನ್ನು ಕೊಡುತ್ತೇವೆ ಎಂದು ಸರ್ಕಾರದಿಂದ ಆಜ್ಞೆಯನ್ನು ಹೊರಡಿಸಲಾಗಿದೆ. ೧೯೮೨–೮೩ರಲ್ಲಿ ಜಿಲ್ಲಾ ಬ್ಯಾಂಕುಗಳಿಗೆ ನಬಾರ್ಡ್ ಸಂಸ್ಥೆಯಿಂದ ಕೇವಲ ೪೯ ಕೋಟಿ ಸಾಲ ಪಡೆಯಲು ಸಾಧ್ಯವಾಗಿತ್ತು. ಆದರೆ, ಈ ವರ್ಷ ಹದಿನಾರು ಬ್ಯಾಂಕುಗಳಿಗೆ ನಬಾರ್ಡ್‌ನಿಂದ ಈಗಾಗಲೇ ೫೪ ಕೋಟಿ ೮೫ ಲಕ್ಷ ರೂಪಾಯಿಗಳು ಮಂಜೂರಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಅಲ್ಪಾವಧಿ ಸಾಲದಲ್ಲಿ ೭ ಕೋಟಿ ೩೫ ಲಕ್ಷ ಹೆಚ್ಚು ಹಣವನ್ನು ನಬಾರ್ಡ್ ಸಂಸ್ಥೆಯಿಂದ ಪಡೆದಿದ್ದೇವೆ. ಅಲ್ಲದೆ ಮೂರು ಜಿಲ್ಲಾ ಬ್ಯಾಂಕುಗಳಾದ ಹಾಸನ, ಶಿವಮೊಗ್ಗ, ಕೋಲಾರ ಇಲ್ಲಿ ಬ್ಯಾಂಕುಗಳಿಗೆ ಅಪೆಕ್ಸ್ ಬ್ಯಾಂಕ್ ತನ್ನ ಸ್ವಂತ ಸಂಪನ್ಮೂಲಗಳಿಂದ ೨.೫೫ ಕೋಟಿ ರೂಪಾಯಿಗಳನ್ನು ಒದಗಿಸಿದೆ. ಈ ಮೂರು ಬ್ಯಾಂಕುಗಳಲ್ಲಿ ಸಾಲ ಮರುಪಾವತಿಗೆ ಸಾಲ ಒದಗಿಸಲು ಏರ್ಪಾಡು ಮಾಡಲಾಗಿದೆ. ಅಲ್ಲದೆ ಶಿವಮೊಗ್ಗ, ಕೋಲಾರ ಜಿಲ್ಲೆಗಳಲ್ಲಿ ೧೯೮೧–೮೨ರಲ್ಲಿ ಸಾಲ ಮರುಪಾವತಿ ಮಾಡಿದವರಿಗೆ ಸಾಲ ಒದಗಿಸಲು ಏರ್ಪಾಡು ಮಾಡಿದ್ದೇವೆ. ಈ ರಿಕವರಿಯಲ್ಲಿ ೧೯೮೦–೮೧ರಲ್ಲಿ ೭೨ ಕೋಟಿ ರೂಪಾಯಿಗಳು ಎಕ್ಸ್ಯುಯಲ್ ಕ್ಯಾಷ್ ಇನ್‌ಫ್ಲೋ ಆಗಿದ್ದು, ೧೯೮೧–೮೨ರಲ್ಲಿ ೯೨ ಕೋಟಿ ರೂಪಾಯಿ ಆಯಿತು. ಈ ವರ್ಷ ೧೧೯ ಕೋಟಿಯಷ್ಟು ಇನ್‌ಫ್ಲೋ ಆಗಿದೆ. ಬಡ್ಡಿ ಸೇರಿದರೆ ೧೪೬ ಕೋಟಿ ರೂಪಾಯಿ ಆಗುತ್ತದೆ. ೧೬ ಜಿಲ್ಲೆಗಳಲ್ಲಿ ಕ್ಷಾಮ ಇದ್ದರೂ ಸಹ ಕಳೆದ ವರ್ಷಕ್ಕಿಂತ ಈ ವರ್ಷ ೨೭ ಕೋಟಿ ಹೆಚ್ಚು ಹಣ ವಸೂಲಾಗಿದೆ. ಪ್ರೈಮರಿ ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕ್ ಬಗ್ಗೆ ವಿಚಾರ ಮಾಡಿದಾಗ ೧೯೮೦-೮೧ಕ್ಕೆ ೧೦೫, ೧೯೮೧–೮೨ಕ್ಕೆ ೮೭, ೧೯೮೨–೮೩ಕ್ಕೆ ೧೦೬ ಮತ್ತು ಈ ವರ್ಷ ೧೯೮೩–೮೪ಕ್ಕೆ ೧೬ ಜಿಲ್ಲೆಗಳಲ್ಲಿ ಭೀಕರ ಕ್ಷಾಮ ಇದ್ದರೂ ಸಹ ೧೨೫ ಬ್ಯಾಂಕುಗಳು ಪೂರ್ತಿ ಎಲಿಜಿಬಿಲಿಟಿ ಅಕ್ವೈರ್ ಮಾಡಿಕೊಂಡಿದ್ದಾರೆ. ಇದು ಸಾಧನೆಯಲ್ಲದೆ ಮತ್ತಿನ್ನೇನು? ಹೊಸ ಸರ್ಕಾರ ಬಂದ ಮೇಲೆ ಶೇಕಡಾ ೩೦–೪೦ ರಷ್ಟು ಅನುಕೂಲವಾಗಿದೆ. ಮಿಕ್ಕ ಎಲ್ಲಾ ಅನುಕೂಲಗಳನ್ನು ಜನವರಿ ತಿಂಗಳಿನಲ್ಲಿ ಮುಗಿಸುತ್ತಿದ್ದೇವೆ. ಈ ವರ್ಷ ೫೧೩ ಉಪ ಕೇಂದ್ರಗಳನ್ನು ತೆಗೆದು ಹಳ್ಳಿಗಳಲ್ಲಿ ಮಾರ್ಕೆಟ್ ಫೆಡರೇಷನ್‌ನಲ್ಲಿ ಗೊಬ್ಬರ ವಿತರಣೆ ವ್ಯವಸ್ಥೆ ಸರಿಯಾಗಿಲ್ಲವಾದ್ದರಿಂದ, ಇವುಗಳ ಉಪಯೋಗವನ್ನು ಮಾಡಿಕೊಳ್ಳಲಾಗಿದೆ. ೧೯೮೧–೮೨ರಲ್ಲಿ ೨.೨೮ ಲಕ್ಷ ಮೆಟ್ರಿಕ್ ಟನ್ ಗೊಬ್ಬರ ವ್ಯಾಪಾರ ಮಾಡಿದ್ದರೆ, ೧೯೮೨–೮೩ರಲ್ಲಿ ೨.೩೭ ಲಕ್ಷ ಮೆಟ್ರಿಕ್ ಟನ್ ಗೊಬ್ಬರ ವ್ಯಾಪಾರ ಆಗಿತ್ತು, ಹೋದವರ್ಷ ಜನವರಿಯಿಂದ ಈ ವರ್ಷ ಜನವರಿವರೆಗೆ ೧.೭೪ ಲಕ್ಷ ಟನ್ ಆಗಿದ್ದರೆ, ಈ ವರ್ಷ ೨.೧೭ ಲಕ್ಷ ಟನ್ ಗೊಬ್ಬರ ಮಾರಾಟವಾಗಿದೆ. ಅಂದರೆ ೩೬ ಸಾವಿರ ಮೆಟ್ರಿಕ್ ಟನ್ ಈ ವರ್ಷ ಈ ಒಂದು ವ್ಯವಸ್ಥೆಯಿಂದ ವ್ಯಾಪಾರ ಜಾಸ್ತಿಯಾಗಿದೆ. ಗ್ರಾಮಾಂತರ ಮಟ್ಟದಲ್ಲಿ ಬಡ್ಡಿ ರಹಿತವಾಗಿ ಗೊಬ್ಬರ ಸ್ಟಾಕ್ ಮಾಡಿ ಈ ಸೌಲಭ್ಯವನ್ನು ಸಿಂಡು ಕೊಟ್ಟಿದ್ದೇವೆ. ಮಾರ್ಕೆಟಿಂಗ್ ಫೆಡರೇಶನ್‌ಗಳು ವ್ಯವಸಾಯೋತ್ಪನ್ನಗಳನ್ನು ಸರಿಯಾಗಿ ಗಿದಕೆಒೂಮಾರುತ್ತಿಲ್ಲವೆಂದು ಮಾನ್ಯ ರಂಗನಾಥ್ ಅವರು ಹೇಳಿದರು. ೧೯೮೧–೮೨ಕ್ಕೆ ೮೪ ಲಕ್ಷದಷ್ಟು

ವ್ಯವಸಾಯೋತ್ಪನ್ನಗಳನ್ನು ಮಾರಾಟ ಮಾಡಲಾಗಿತ್ತು. ೧೯೮೨–೮೩ಕ್ಕೆ ೨೬ ಲಕ್ಷ ರೂಪಾಯಿಗಳ ವಹಿವಾಟು ನಡೆಸಿತ್ತು. ೧೯೮೩–೮೪ಕ್ಕೆ ೭೫೪ ಲಕ್ಷ ರೂಪಾಯಿಗಳಷ್ಟು ಈ ಮಾರ್ಕೆಟಿಂಗ್ ಫೆಡರೇಷನ್‌ಗಳು ಹುಣಸೇಹಣ್ಣು, ರಾಗಿ, ಹತ್ತಿ, ತೊಗರಿಬೇಳೆ, ಗೋಧಿ, ಕಡಲೆಕಾಯಿ ಎಣ್ಣೆ ಮುಂತಾದವುಗಳನ್ನು ಕೊಂಡು ದಾಸ್ತಾನು ಇಟ್ಟು ಮಾರಾಟ ಮಾಡಬೇಕೆಂದು ಈ ವರ್ಷ ತೀರ್ಮಾನ ತೆಗೆದುಕೊಂಡಿದ್ದೇವೆ. ಈ ವರ್ಷ ೫.೯೫ ಲಕ್ಷ ಸಾಲಗಾರರಿಗೆ ೨೫೫ ಕೋಟಿ ರೂಪಾಯಿಗಳನ್ನು ಧೀರ್ಘಾವಧಿ ಸಾಲಕ್ಕಾಗಿ ಒದಗಿಸಿದ್ದೇವೆ. ಈ ಪೈಕಿ ೩೩೫ ಸಾವಿರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ೧೩.೪೩ ಕೋಟಿ ರೂಪಾಯಿಗಳನ್ನು ಸಾಲ ಒದಗಿಸಿದ್ದೇವೆ. ಅಲ್ಪಾವಧಿ ಸಾಲಕ್ಕಾಗಿ ೧೨.೫೨ ಲಕ್ಷ ಜನರಿಗೆ, ದೊಡ್ಡ ರೈತರಿಗೆ ೮೮.೬೬ ಕೋಟಿ ರೂಪಾಯಿಗಳನ್ನು, ಮತ್ತು ಸಣ್ಣ ರೈತರಿಗೆ ೪೫.೭೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಮತ್ತು ಸಣ್ಣ ರೈತರಿಗೆ ಮಧ್ಯಾವಧಿ ಸಾಲಕ್ಕಾಗಿ ೧೧.೫೬ ಕೋಟಿ ಮತ್ತು ದೊಡ್ಡ ರೈತರಿಗೆ ೧೮.೮೭ ಕೋಟಿ ರೂಪಾಯಿಗಳನ್ನು ಸಾಲವಾಗಿ ಒದಗಿಸಿದ್ದೇವೆ. ಮಾನ್ಯ ರಂಗನಾಥ್ ಅವರು ವಸೂಲಾತಿಯಲ್ಲಿ ಯಾರ್ಯಾರಿಂದ ಎಷ್ಟೆಷ್ಟು ವಸೂಲಾಗಿದೆಯೆಂದು ಕೇಳಿದ್ದಾರೆ. ಇದರಲ್ಲಿ ಅಲ್ಪಾವಧಿ ಸಾಲ ದೊಡ್ಡ ರೈತರಿಂದ ಬರತಕ್ಕದ್ದು ೮೫.೬೭ ಕೋಟಿ ರೂಪಾಯಿಗಳು. ವಸೂಲಾಗಿರುವುದು ೫೩.೯೫ ಕೋಟಿ ರೂಪಾಯಿಗಳು ಸಣ್ಣ ರೈತರಿಂದ ಡಿಮ್ಯಾಂಡ್ ಇದ್ದದ್ದು ೪೫.೭೮ ಕೋಟಿ ರೂಪಾಯಿಗಳು, ರಿಕವರಿ ಆಗಿರುವುದು ೨೯.೨೮ ಕೋಟಿ ರೂಪಾಯಿಗಳು. ಮಧ್ಯಮಾವಧಿ ಸಾಲ–ದೊಡ್ಡ ರೈತರಿಂದ ಡಿಮ್ಯಾಂಡ್ ಇದ್ದದ್ದು ೧೨.೮೨ ಕೋಟಿ, ಆದರೆ ವಸೂಲಾಗಿರುವುದು ೬.೨೩ ಕೋಟಿ ರೂಪಾಯಿಗಳು.

ಸ್ವಾಮಿ, ಸ್ಮಾಲ್ ಫ್ಮಾರ್ಸ್‌ನಿಂದ ಡಿಮ್ಯಾಂಡ್ ಇದ್ದರು ೧೧.೫೬ ಕೋಟಿ, ವಸೂಲಾಗಿದ್ದು, ೪.೭೨ ಕೋಟಿ ರೂಪಾಯಿಗಳು. ಲಾಂಗ್ ಟರ್ಮ್ ಲೋನ್ ದೊಡ್ಡ ಫಾರ್ಮರ್ಸ್‌ನಿಂದ ಡಿಮ್ಯಾಂಡ್ ೧೮.೫೬ ಕೋಟಿ ರೂಪಾಯಿಗಳಿದ್ದರೆ ರೆಕವರಿ ೧೧.೮೦ ಕೋಟಿ ರೂಪಾಯಿಗಳು. ಸ್ಮಾಲ್ ಫಾರ್ಮರ್ಸ್ ರಿಂದ ಲಾಂಗ್ ಟರ್ಮ್ ಲೋನ್ ಡಿಮ್ಯಾಂಡ್ ಇದ್ದದ್ದು ೨೪.೧೪ ಕೋಟಿ ರೂಪಾಯಿ ವಸೂಲಾತಿ ೧೮.೮೨ ಕೋಟಿ ರೂಪಾಯಿಗಳು. ಅಂದರೆ, ದೊಡ್ಡ ರೈತರಿಂದ ಲಾಂಗ್ ಟರ್ಮ್ ಲೋನ್ ೬೩.೩೫ ಕೋಟಿ ರೂ. ಗಳು ವಸೂಲಾಗಿದ್ದರೆ, ಸಣ್ಣ ರೈತರಿಂದ ೬೫.೫೦ ಕೋಟಿ ರೂಪಾಯಿಗಳು ವಸೂಲಾಗಿದೆ. ಪ್ಲಾನ್‌ನಲ್ಲಿ ಉಳಿತಾಯವಾಗಿದೆ ನೀವು ಹಣ ಖರ್ಚು ಮಾಡಿಲ್ಲವೆಂದು ಸನ್ಮಾನ್ಯ ರಂಗನಾಥ್‌ರವರು ಹೇಳಿದರು. ಸ್ವಾಮಿ, ಇದು ಯಾವ ಜಿಲ್ಲಾ ಬ್ಯಾಂಕ್‌ಗಳಿಂದ ಕೊಡುವಂಥ ಹಣವಲ್ಲ. ನಾವು ನ್ಯಾಷನಲ್ ಗೋಡೌನ್ಸ್ ಏನಿದೆ ಅದಕ್ಕೆ ಎನ್‌ಸಿಡಿಸಿ ಅವರಿಂದ ಹಣ ಬರುತ್ತದೆಯೆಂದು ನಿರೀಕ್ಷೆ ಮಾಡಿ ನಮ್ಮ ರಾಜ್ಯದ ಬೊಕ್ಕಸದಿಂದ ೮೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇದ್ದೆವು. ಆದರೆ ಕಾರಣಾಂತರಗಳಿಂದ ಹೋದ ವರ್ಷ ಎನ್‌ಸಿಡಿಸಿ ಅವರಿಂದ ಹಣ ಬಾರದೆ ಅದರಂತೆ ಖರ್ಚು ಮಾಡಲಾಗಲಿಲ್ಲ. ಆಮೇಲೆ ಇದರಲ್ಲಿ ಸ್ಪಿನ್ನಿಂಗ್ ಮಿಲ್ಸ್, ಇದಕ್ಕೋಸ್ಕರ ೧೪೭ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಕಳೆದ ವರ್ಷ ಒಂದು ಸ್ಪಿನ್ನಿಂಗ್ ಮಿಲ್ಸ್ ಕೂಡ ನಮ್ಮ ರಾಜ್ಯಕ್ಕೆ ಬರಲಿಲ್ಲ. ಆದ್ದರಿಂದ ಹಣ ಕೂಡ ಖರ್ಚು ಮಾಡಲಿಕ್ಕಾಗಿಲ್ಲ. ಆಮೇಲೆ 'ಕ್ಯಾಮ್‌ಕೋ'ಗೆ ಕಳೆದ ವರ್ಷ ಪ್ಲಾನ್ ಸ್ಕೀಮ್‌ನಲ್ಲಿ ೪೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು. ಆದರೆ ಎನ್‌ಸಿಡಿಸಿ ಕ್ಲಿಯರನ್ಸ್ ಬಾರದಿರುವುದರಿಂದ ಈ ಹಣ ಖರ್ಚುಮಾಡಲು ಆಗಿಲ್ಲ. ಈಗ ಮಾನ್ಯ ರಾಮಭಟ್‌ರವರು 'ಕ್ಯಾಮ್‌ಕೋ' ಗೆ ನೀವು ಏನು ಮಾಡುತ್ತಿದ್ದಿರೆಂದು ಹೇಳಿದರು. ಸ್ವಾಮಿ, ಈ ವರ್ಷ ೧.೫೫ ಕೋಟಿ ರೂಪಾಯಿಗಳನ್ನು ನಾವು ಅದಕ್ಕೋಸ್ಕರ ಇಟ್ಟಿದ್ದೇವೆ. ಇದರಲ್ಲಿ ೫೦ ಭಾಗ ನಾವು ಕೊಡುತ್ತೇವೆ, ೫೦ ಭಾಗವನ್ನು ಕೇಂದ್ರಸರ್ಕಾರದವರು ಕೊಡುತ್ತಾರೆ. ಈ ವರ್ಷ ಎರಡು ಸ್ಪಿನ್ನಿಂಗ್ ಮಿಲ್ಸ್‌ಗೆ ೧ ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಎನ್‌ಸಿಡಿಸಿ ಇವೆರಡಕ್ಕೂ ಈ ವರ್ಷ ಏನು ಒಂದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದೇ ರೀತಿ ಈ ಎರಡು ಸ್ಪಿನ್ನಿಂಗ್ ಮಿಲ್ಸ್‌ಗಳಿಗೆ ಹಣ ಕೊಡುವ ಸಂಭವವಿದೆ. ಬಹುಶಃ ನೂರಕ್ಕೆ ನೂರರಷ್ಟು ನಾವು ಹಣವನ್ನು ಪಡೆಯಬಹುದೆಂದು ಧೈರ್ಯ ಸಹ ಇದೆ. ಇನ್ನೂ ೪ ಸ್ಪಿನ್ನಿಂಗ್ ಮಿಲ್ಸ್‌ಗಳಿಗೆ, ಮಾರ್ಕೆಟಿಂಗ್ ಗೋಡೌನ್ಸ್‌ಗಳಿಗೆ ನಾವು ವರ್ಲ್ಡ್‌ಬ್ಯಾಂಕ್ ಸಹಾಯಕ್ಕಾಗಿ ಪ್ರಯತ್ನ ಪಟ್ಟಿದ್ದೇವೆ. ಎನ್‌ಸಿಡಿಸಿಯವರು ಪೂರ್ಣ ಸಹಕಾರ ಕೊಡುತ್ತಾರೆ. ಅದಕ್ಕೆ ಸಾಲ ಕೊಡುತ್ತೇವೆನ್ನುವ ಭರವಸೆ ಕೊಟ್ಟಿದ್ದಾರೆ. ಬಹುಶಃ ಇದು ಮೊಟ್ಟಮೊದಲಬಾರಿಗೆ ವರ್ಲ್ಡ್‌ಬ್ಯಾಂಕ್ ಸಾಲಗಳನ್ನು ಸ್ಪಿನಿಂಗ್ ಮಿಲ್ಸ್‌ಗಳಿಗೆ ಮತ್ತು ರೂರಲ್ ಗೌಡೌನ್ಸ್‌ಗಳಿಗೆ ನಾವು ಪಡೆಯುತ್ತಿದ್ದೇವೆಂದು ಹೇಳಲು ನಾನು ಸಂತೋಷಪಡುತ್ತೇನೆ.

ಇನ್ನೊಂದು ವಿಚಾರ, ಅವರು ಹೇಳಿದರು ಶೇರು ಕ್ಯಾಪಿಟಲ್ ನೂರಕ್ಕೆ ಐದು ಹತ್ತು ಏನು ವಸೂಲ್ಮಾಡುತ್ತಿದ್ದೇವೆ, ಅದಕ್ಕೆ ಕಾನೂನಿಗೆ ತಿದ್ದುಪಡಿ ಮಾಡಿ ಅದನ್ನು ಮಜಾ ಮಾಡುವುದ

ಕ್ಕಾಗುವುದಿಲ್ಲವೇ ? ಎಂದು. ಸ್ವಾಮಿ, ಇದು ಮಾರ್ಟ್‌ಗೇಜ್ ಮನಿ ಇದ್ದ ಹಾಗೆ, ಇದು ಕಮರ್ಶಿಯಲ್ ಬ್ಯಾಂಕ್ ಯಾವುದೇ ಪ್ರಾಜೆಕ್ಟ್‌ಗೆ ಕೊಟ್ಟಾಗ ೧೦ ಪರ್ಸೆಂಟ್ ೨೦ ಪರ್ಸೆಂಟ್ ಅವರ ಹಣ ತೊಡಗಿಸಬೇಕೆಂದು ಇದೆ. ಇದು ಕಾನೂನಿನಲ್ಲಿ ಅಡಕವಾಗಿದೆ. ಅವರು ಯಾರು ಸಾಲ ತೀರಿಸುತ್ತಾರೆಯೋ ಆ ಸಾಲ ತೀರಿಸಿದಾಗ ಅಂತಿಮವಾಗಿ ಶೇರನ್ನು ಆ ಸಾಲಕ್ಕೆ ವಜಾಮಾಡತಕ್ಕಂಥ ಆರ್ಡರ್‌ನ್ನು ಮಾಡಿದ್ದೇವೆ. ಮಾನ್ಯ ಚೌಡಯ್ಯನವರಿಗೆ ಇದು ಗೊತ್ತು, ಆದರೆ ವಿಧಿಯಿಲ್ಲದೆ ಮಾಡಬೇಕಾಗಿದೆ. ಒಂದು ವಿಚಾರವನ್ನು ಹೇಳುತ್ತೇನೆ ಇವೊತ್ತು ಸಹಕಾರ ಸಂಘಗಳಲ್ಲಿ ಸುಮಾರು ೨೦ ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ನಾನ್ ಅಫಿಷಿಯಲ್ಸ್‌ಗಳಾಗಿ. ಈ ಸಹಕಾರಿ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳೇನಲ್ಲ. ಸರ್ಕಾರ ೧೪೦ ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ತೊಡಗಿಸಿದ್ದಾರೆ. ಸರ್ಕಾರದ ಬಂಡವಾಳ ೧೪೦ ಕೋಟಿ ರೂಪಾಯಿಗಳು, ಆದರೆ ಸುಮಾರು ೧೪೮೦ ಕೋಟಿ ರೂಪಾಯಿ ಹಣ ಅವರದ್ದೇ ಸಂಪನ್ಮೂಲಗಳಿಂದ ರೂಡಿಸಿಕೊಂಡು ಈ ಸಹಕಾರಿ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಆದರೆ ಈ ೨೩ ಸಹಕಾರಿ ಸಂಘಗಳಲ್ಲಿ ಪ್ರತಿಯೊಬ್ಬರನ್ನು ನಾವು ನಿಗಾವಹಿಸಿ ಕಾವಲು ಕಾಯುವುದಕ್ಕಾಗುವುದಿಲ್ಲ. ಕೆಲವರ ಅಭಿಪ್ರಾಯವೇನಿದೆಯೆಂದರೇ ಇದು ಸರ್ಕಾರಿ ಸಂಸ್ಥೆಗಳು, ಇದನ್ನು ಸರ್ಕಾರ ಸರಿಯಾಗಿ ನಡೆಸುತ್ತಿಲ್ಲವೆಂದು... ಇದು ಖಂಡಿತವೂ ಸರಿಯಲ್ಲ. ಇವತ್ತು ಸುಮಾರು ೨ ಲಕ್ಷ ಜನ ನಾನ್ ಅಫಿಷಿಯಲ್ಸ್ ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡನೆಯದಾಗಿ, ನನ್ನ ಸ್ನೇಹಿತರು ಕೆಲವರು ಹೇಳಿದರು ಇದರಲ್ಲಿ ಅಭಿವೃದ್ಧಿ ಏನಾಗಿಲ್ಲ, ಈ ಸಹಕಾರಿ ಸಂಸ್ಥೆಗಳು ಯಾವ ರೀತಿಯಲ್ಲಿ ಬೆಳೆಯಬೇಕಾಗಿತ್ತೊ ಆ ರೀತಿಯಲ್ಲಿ ಬೆಳೆದಿಲ್ಲವೆಂದು. ನಾನು ಪೂರ್ಣವಾಗಿ ಅದನ್ನು ಒಪ್ಪಿಕೊಳ್ಳುತ್ತೇನೆ. ನಾವು ಕಳೆದ ೬೦–೭೦ ವರ್ಷದಿಂದ ಅವುಗಳನ್ನು ಬೆಳೆಸಿಕೊಂಡು ಬಂದರೂ ಬಹುಶಃ ಈ ಸಹಕಾರಿ ಸಂಸ್ಥೆಗಳು ತಮ್ಮ ಕಾಲಮೇಲೆ ತಾವು ನಿಂತಿಲ್ಲ, ಕೆಲವು ಕಡೆ ಶೇರು ಬಂಡವಾಳವೂ ಇಲ್ಲ, ಸ್ವಂತ ಡಿಪಾಸಿಟ್ ಕೂಡ ಇಲ್ಲ. ಇವೊತ್ತು ಏನಾದರೂ ಸ್ವಲ್ಪ ಚೆನ್ನಾಗಿ ಕೆಲಸ ಮಾಡುತ್ತಿರುವಂಥ ಸಂಸ್ಥೆಗಳೆಂದರೆ ಅರ್ಬನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳು. ಇವುಗಳು ನೂರಕ್ಕೆ ತೊಂಭತ್ತರಷ್ಟು ತಮ್ಮ ಸ್ವಂತ ಬಂಡವಾಳದ ಮೇಲೆ ನಿಂತಿವೆ. ಆದರೆ ಉತ್ತರ ಕನ್ನಡ, ದಕ್ಷಿಣ ಕನ್ನಡ, ಧಾರವಾಡ ಇನ್ನೂ ಮುಂತಾದ ಪ್ರದೇಶಗಳಲ್ಲಿ ಪ್ರೈಮರಿ ಸೊಸೈಟಿಗಳು ಸಹ ತಮ್ಮ ಕಾಲಮೇಲೆ ತಾವು ನಿಂತಿವೆ. ಇವೊತ್ತು ಡಿಪಾಸಿಟ್ ಇಟ್ಟುಕೊಂಡಿದ್ದಾರೆ. ನಾನು ಕಳೆದ ಸಾರಿ ಮಂಗಳೂರಿಗೆ ಹೋಗಿದ್ದಾಗ, ಅವುಗಳನ್ನು ನೋಡಿದ್ದೇನೆ ಒಬ್ಬರು ೮–೧೦ ಲಕ್ಷ ಬಂಡವಾಳ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ. ನಮ್ಮ ರಾಮಭಟ್ಟರವರು ಮಾತನಾಡುವಾಗ ಹೇಳಿದರು, ಈ ವರ್ಷ ಸಾವಿರ ರೂಪಾಯಿ ಸಾಲ ತೆಗೆದುಕೊಂಡವನು ಬರುವ ವರ್ಷ ಐದನೂರು ರೂಪಾಯಿಗಳನ್ನು ತೆಗೆದುಕೊಳ್ಳಬೇಕು. ಅದು ಬಿಟ್ಟು ಈ ವರ್ಷ ಸಾವಿರ ತೆಗೆದುಕೊಂಡು ಬರುವ ವರ್ಷ ೧,೫೦೦ ರೂಪಾಯಿಗಳನ್ನು ತೆಗೆದುಕೊಂಡರೆ ಅದರ ಅರ್ಥ ರೈತರಿಗೆ ಪ್ರಗತಿಯಾಗಿಲ್ಲವೆಂದು ಹೇಳಬಹುದು. ಇದಕ್ಕೆ ಯಾರು ಕಾರಣರು? ಯಾರದೇ ಸರ್ಕಾರವಾಗಲಿ, ಈ ಸರ್ಕಾರವಾಗಲೀ, ಬೇರೆ ಸರ್ಕಾರವಾಗಲೀ ಸರ್ಕಾರ ನಡೆಸುವವರು ಒಬ್ಬರೇ ಕಾರಣರಲ್ಲ. ಇದರಲ್ಲಿ ಶೇರುದಾರರು ಏನಿದ್ದಾರೆ, ದುರಾದೃಷ್ಟ ವಶಾತ್ ಅವರಲ್ಲಿ ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡಿಲ್ಲವೆಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಆದ್ದರಿಂದ ಮೊಟ್ಟಮೊದಲನೆಯದಾಗಿ ನಾವು ಮಾಡಬೇಕಾದ ಕೆಲಸವೇನೆಂದರೆ. ಅವರಿಗೆ ತಿಳುವಳಿಕೆ ಮೂಡಿಸಬೇಕು ಇದು ಸರ್ಕಾರಿ ಸಂಸ್ಥೆಗಳಲ್ಲ ಅವರ ಸಂಸ್ಥೆಗಳೆಂದು. ಇಲ್ಲಿ ಸರ್ಕಾರ ಕೇವಲ ಸಹಾಯ ಮಾಡಬಹುದಷ್ಟೇ. ಆದರೆ ಇವೊತ್ತು ಸ್ಪಿನ್ನಿಂಗ್ ಮಿಲ್ಸ್‌ಗಳಾಗಲೀ, ಟಿಎಪಿಎಮ್‌ಸಿ ಆಗಲೀ, ಷುಗರ್ ಫ್ಯಾಕ್ಟರಿಸ್‌ಗಳಾಗಲೀ, ಯಾವುದೇ ಆಗಲಿ ಪ್ರತಿಯೊಂದು ಸರ್ಕಾರವನ್ನು ನೋಡುತ್ತಿದ್ದರೆ ಹೇಗೆ ? ಇವು ಸರ್ಕಾರಿ ಸಂಸ್ಥೆಗಳಲ್ಲ, ಆದರೆ ಸಹಕಾರಿ ಸಂಘಗಳಾಗುತ್ತವೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ, ಅದರ ಬಗ್ಗೆ ನನ್ನ ಒಂದು ಅನುಮತಿಯಿದೆ.

ಇನ್ನು ಡಿಫಾಲ್ಟರ್ಸ್ ಬಗ್ಗೆ ನಮ್ಮ ಮಾನ್ಯ ರಂಗನಾಥ್‌ರವರು ಹೇಳಿದರು. ಜಾಲಪ್ಪನವರು ಡಿಫಾಲ್ಟರ್ ಆಗಿದ್ದಾರೆ, ಅವರು ಜಿಲ್ಲಾ ಬ್ಯಾಂಕ್ ಅಧ್ಯಕ್ಷರಾಗಿದ್ದರು, ಇದಕ್ಕೆ ರಿಸರ್ವ್ ಬ್ಯಾಂಕ್ ಸಹ ಆಕ್ಷೇಪಣೆ ಎತ್ತಿದೆಯೆಂದು ಹೇಳಿದರು. ಅದು ನಿಜ. ನಾನು ವ್ಯವಸಾಯಗಾರ. ವ್ಯವಸಾಯಕೋಸ್ಕರವಾಗಿ ಹಣವನ್ನು ನಾನು ತೆಗೆದುಕೊಂಡಿದ್ದು ನಿಜ. ಹಣವನ್ನು ಸಕಾಲದಲ್ಲಿ ಹಿಂತಿರುಗಿಸಲಿಕ್ಕೆ ಆಗಲಿಲ್ಲ, ನಾನು ಒಬ್ಬನೆ ಅಲ್ಲ, ಸುಮಾರು ೧೨೦ ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡದೆ ಬಹಳಷ್ಟು ಜನ ಡಿಫಾಲ್ಟರ್ಸ್ ಆಗಿದ್ದಾರೆ. ಈಗ ನಾನು ಡಿಫಾಲ್ಟರ್ ಆಗದೆ ನಮ್ಮ ತಾತ ಡಿಫಾಲ್ಟರ್ ಆಗುತ್ತಾರೆಯೇ ? ವ್ಯವಸಾಯಗಾರನ ಪರಿಸ್ಥಿತಿ ತಮಗೆಲ್ಲರಿಗೂ

ಗೊತ್ತಿದೆ. ಮಾನ್ಯ ಚಿಕ್ಕೇಗೌಡರಿಗೆ ಸಹ ಗೊತ್ತಿದೆ. ಚಿಕ್ಕೇಗೌಡರು ಸಾಲ ಮಾಡಿದ್ದಾರೆಯೋ ಗೊತ್ತಿಲ್ಲ. ನಾನು ೧೯೭೭ರಲ್ಲಿ ಡಿಫಾಲ್ಟರ್ ಆಗಿದ್ದೆ ಅದನ್ನು ಈ ಸಂದರ್ಭದಲ್ಲಿ ಹೇಳತಕ್ಕಂಥ ಆವಶ್ಯಕತೆಯಿರಲಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ವ್ಯವಸಾಯಗಾರರಲ್ಲದವರೂ ಈ ಬ್ಯಾಂಕ್‌ನಲ್ಲಿ ಸಾಲವನ್ನು ತೆಗೆದು ಕೊಂಡಿದ್ದಾರೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ವ್ಯವಸಾಯಗಾರರಲ್ಲದವರೂ ಇದ್ದಾರೆ, ಅದು ತಮಗೂ ಗೊತ್ತು ನಮಗೂ ಗೊತ್ತು. ಅದನ್ನು ಬೇರೆ ಕೆಲಸಗಳಿಗೆ ಉಪಯೋಗಿಸಿಕೊಳ್ಳತಕ್ಕಂಥ ಕೇಸುಗಳಿವೆ ಆದ್ದರಿಂದ, ಡಿಫಾಲ್ಟರ್ ಎಂದು ನಾನು ಹೇಳಿಕೊಳ್ಳುವುದಕ್ಕೆ ನಾಚಿಕೆಯಿಲ್ಲ.

ಶ್ರೀ ಎಂ. ಮಹದೇವ್.—ಡಿಫಾಲ್ಟರ್ ಆಗಿ ತಾವು ಅಧ್ಯಕ್ಷರಾಗಿ ಮುಂದುವರಿದಿದ್ದೀರಲ್ಲ ಅದೇ ಆಕ್ಷೇಪಣೆ ಅವರದ್ದು.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಮಧ್ಯೆ ಮಧ್ಯೆ ಈ ರೀತಿ ಮಾತನಾಡುತ್ತಾ ಇದ್ದರೆ, ನನಗೆ ತೊಂದರೆಯಾಗುತ್ತದೆ, ನಾನು ಯಿಲ್ಡ್ ಆಗುವುದಿಲ್ಲ.

ಶ್ರೀ ಎಂ. ಮಹದೇವ್.—ತಾವು ಡಿಫಾಲ್ಟರಾಗಿದ್ದು ಅಧಿಕಾರದಲ್ಲಿ ಮುಂದುವರಿದಿದ್ದುದು ತಪ್ಪು ಅಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ.—ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಡಿಫಾಲ್ಟರ್ ಆಗಿದ್ದಾಗ ಸನ್ಮಾನ್ಯ ರಂಗನಾಥ್ ಅವರು ಸ್ಟೇ ಆರ್ಡರ್ ಕೊಟ್ಟಿದ್ದರು.

ಶ್ರೀ ಎಂ. ಮಹದೇವ್.—ತಾವು ಡಿಫಾಲ್ಟರ್ ಆಗಿ ಕಾನೂನು ಭಂಗ ಮಾಡಿ ಅಧಿಕಾರದಲ್ಲಿ ಮುಂದುವರಿಯಲಿಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಕಥೆಯನ್ನು ನಾನು ಬಿಚ್ಚಬಲ್ಲೆ, ಬೇಕಾದಷ್ಟು ಇದೆ. ಅದೆಲ್ಲಾ ಈಗ ಬೇಡ.

ಶ್ರೀ ಎಂ. ಮಹದೇವ್.—ನೀವು ಸಹಕಾರಿ ಮಂತ್ರಿಯಾಗುವುದಕ್ಕೆ ಅನರ್ಹರು, ನನ್ನದೇನು ಇದೆ ? ಅದನ್ನು ಬಿಚ್ಚಿ ಹೇಳಿ ?

ಶ್ರೀ ಆರ್. ಎಲ್. ಜಾಲಪ್ಪ.—ಆಗ ಮಾನ್ಯ ರಂಗನಾಥ್ ಅವರು ಮಂತ್ರಿಗಳಾಗಿದ್ದರು.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಮಂತ್ರಿಗಳು ಒಬ್ಬ ಸದಸ್ಯರ ಬಗ್ಗೆ ನಿಮ್ಮದನ್ನು ಬಿಚ್ಚಿ ಹೇಳುತ್ತೇನೆಂದು ಹೇಳಿದ್ದಕ್ಕೆ ಸದಸ್ಯರು ಬಿಚ್ಚಿ ಹೇಳಿ ಎಂದು ಹೇಳಿದ್ದಾರೆ ಮಾನ್ಯ ಮಂತ್ರಿಗಳು ಅದೇ ನೆಂದು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಬಿ. ಲಕ್ಷ್ಮಯ್ಯ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ ಅವರು ಹೇಳ ತಕ್ಕ ವಿಚಾರವನ್ನು ಅವಲೋಕಿಸಿ ಅದನ್ನು ಪರಿಶೀಲಿಸತಕ್ಕ ಶಕ್ತಿ ಅವರಲ್ಲಿ ಇಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಲಕ್ಷ್ಮಯ್ಯನವರು ಯಾವಾಗಲೂ ವಕಾಲತ್ತು ಮಾಡು ತ್ತಿರುತ್ತಾರೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಲಕ್ಷ್ಮಯ್ಯನವರು ಜಾಲಪ್ಪನವರಿಗೆ ಅಡ್ವೊಕೇಟ್ ಜನ ರಲ್ ಇದ್ದಹಾಗೆ ಎಂದು ಕಾಣುತ್ತದೆ.

ಶ್ರೀ ಎಂ. ಮಹದೇವ್.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾವುಗಳು ಬಹಳ ಕುತೂಹಲ ದಿಂದ ಕೇಳುತ್ತಿದ್ದೇವೆ. ನನ್ನದು ಏನೆಂದು ಬಿಚ್ಚಿ ಹೇಳಿದರೆ ಎಲ್ಲರಿಗೂ ಅದು ಅರ್ಥವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಮಹದೇವ್ ಅವರೂ ನಾನು ಕಳೆದ ಹತ್ತು ವರ್ಷ ಗಳಿಂದ ಒಟ್ಟಿಗೆ ಅಪೆಕ್ಸ್ ಬ್ಯಾಂಕ್‌ನಲ್ಲಿ ಕೆಲಸ ಮಾಡಿದವರು ಆದ್ದರಿಂದ ಸ್ವಲ್ಪ ಸಲೀಸ್ ಆಗಿ ಹೇಳು ತ್ತಿದ್ದೇನೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ನಾನು ಡಿಫಾಲ್ಟರ್ ಆಗಿದ್ದೆ. ಅದಕ್ಕೆ ಸ್ಟೇ ಆರ್ಡರ್

ಕೊಟ್ಟಿದ್ದೆ ಎಂದು ಮಾನ್ಯ ರಂಗನಾಥ್ ಅವರು ಹೇಳಿದರು. ಅದಕ್ಕೆ ವಂದನೆಗಳನ್ನು ನಾನು ಸಲ್ಲಿಸಬೆ ಕಾಗಿದೆ. ಯಾವ ಸಂಸ್ಥೆಯಲ್ಲಿ ನಾನು ಡಿಫಾಲ್ಟರ್ ಆಗಿದ್ದೇನೋ ಅದರಲ್ಲಿ ಕಾನೂನಿನ ಒಂದು ತೊಡಕಿನಿಂದ ಇದು ಆಗಿದೆ. ಇದು ಅನಾವಶ್ಯಕ ಮತ್ತು ನಮ್ಮ ಸಮ್ಮತವಲ್ಲದ ಕಾನೂನು. ಹತ್ತು ಬ್ಯಾಂಕುಗಳಿಂದ ಎಲೆಕ್ಟ್ ಆಗಿ ಬಂದು ಅಕಸ್ಮಾತ್ ಒಂದು ಬ್ಯಾಂಕ್‌ನಲ್ಲಿ ಡಿಫಾಲ್ಟರ್ ಆದರೆ ಇವನಿಗೆ ಯಾವುದಕ್ಕೂ ಅರ್ಹತೆ ಇಲ್ಲವೇ ? ಇದನ್ನು ನಾವು ಮನಗಂಡು ಇದಕ್ಕೆ ಸೂಕ್ತವಾದ ಒಂದು ತಿದ್ದುಪಡಿಯನ್ನು ಈ ಸದನದ ಮುಂದೆ ನಾವು ತರುತ್ತಿದ್ದೇವೆ. ಇದರ ಪ್ರಕಾರ ಎಲೆಕ್ಷನ್‌ಗೆ ನಿಂತುಕೊಳ್ಳುವಾಗ ಮಾತ್ರ ಡಿಫಾಲ್ಟರ್ ಆಗಬಾರದು. ಫೆಡರಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ಒಂದು ಸಂಸ್ಥೆಯಿಂದ ಎಲೆಕ್ಟ್ ಆಗಿ ಬಂದರೆ ಮೂರು ವರ್ಷಗಳವರೆಗೆ ಕಂಟಿನ್ಯೂ ಮಾಡಬೇಕು ಎಂದು ತಿದ್ದುಪಡಿಯನ್ನು ತರುತ್ತಿದ್ದೇವೆ. This will not apply to individuals. If there is individual defaulter, he must go. ಪಿ.ಎಲ್.ಡಿ. ಬ್ಯಾಂಕ್‌ನವರು ಕಳುಹಿಸುತ್ತಾರೆ ಜಿಲ್ಲಾ ಬ್ಯಾಂಕ್‌ನವರು ಕಳುಹಿಸುತ್ತಾರೆ ಕಾರಣಾಂತರಗಳಿಂದ ಅವನು ಡಿಫಾಲ್ಟರ್ ಆದರೆ ಡಿಸ್‌ಕ್ವಾಲಿಫೈ ಆಗಿ ಮನೆಗೆ ಹೋಗಬೇಕಾಗುತ್ತದೆ. ಇದು ಸರಿಯಲ್ಲ. ನಾವು ಇದರ ಬಗ್ಗೆ ಸಹಕಾರಿಗಳನ್ನು ಕರೆಯಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಸೂಕ್ತ ಬದಲಾವಣೆಗಳನ್ನು ಮಾಡುತ್ತಿದ್ದೇವೆ.

ಸ್ವಾಮಿ, ಇನ್ನು ಟಿ.ಎ.ಪಿ.ಸಿ.ಎಂ.ಎಸ್. ಗಳು ಬಹಳ ಲುಕ್ಸಾನಿನಲ್ಲಿ ನಡೆಯುತ್ತಿವೆ. ಮಾನ್ಯ ಸದಸ್ಯರಾದ ಬಣಕಾರ್ ಅವರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರಾದ ಮಹದೇವ್ ಅವರು ಇದರ ಬಗ್ಗೆ ಹೇಳಿದ್ದಾರೆ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಇವುಗಳಿಗೆ ತನ್ನದೇ ಆದ ಬಂಡವಾಳ ಇಲ್ಲ, ಕೆಲವುಗಳಿಗೆ ಕೇವಲ ೨೦–೩೦ ಸಾವಿರ ರೂಪಾಯಿಗಳ ಷೇರು ಬಂಡವಾಳ ಇರುತ್ತದೆ, ಲಕ್ಷಗಟ್ಟಲೆ ಬಂಡವಾಳ ಇರುವವರು ಬಹಳ ಕಡಿಮೆ. ಇವರಲ್ಲಿ ವ್ಯಾಪಾರ ಮಾಡುವವರು ಸಹ ಬಡವರೇ, ಇವರುಗಳು ೧೬ ರಿಂದ ೧೮ ಪರ್ಸೆಂಟ್ ಇಂಟರೆಸ್ಟ್ ಕೊಟ್ಟು ವ್ಯಾಪಾರ ಮಾಡಬೇಕು. ಸೇಲ್ಸ್ ಟ್ಯಾಕ್ಸ್ ಮೊದಲಾದುವುಗಳನ್ನು ಹಸ್ತಾಂತರ ಮಾಡಲಿಕ್ಕಾಗುವುದಿಲ್ಲ. ಪ್ರತಿಯೊಂದಕ್ಕೂ ಲೆಕ್ಕ ಇಡಬೇಕು. ಸೇಲ್ಸ್ ಟ್ಯಾಕ್ಸ್ ಎಲ್ಲವನ್ನೂ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಆ ಮೇಲೆ ದಿನ ಬಳಕೆ ವಸ್ತುಗಳ ವಿತರಣೆ ಮಾಡುವುದನ್ನು ಈ ಸಂಸ್ಥೆಗಳಿಗೆ ಬಹಳ ಕಡೆ ವಹಿಸಿದ್ದಾರೆ. ಇದರಲ್ಲಿಯೂ ಇವರಿಗೆ ಪೂರ್ಣ ಲಾಭವಾಗುವುದಿಲ್ಲ. ದಿನ ಬಳಕೆ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಜಿಲ್ಲಾ ಬ್ಯಾಂಕುಗಳಿಂದ ಸಾಲ ಮಾಡಿಕೊಂಡು ಅದನ್ನು ಮಾರಬೇಕಾಗುತ್ತದೆ. ಸಕ್ಕರೆ ಬಹಳ ದಿವಸಗಳಿಂದ ನಿಂತು ಹೋದರೆ ಲುಕ್ಸಾನು ಆಗುತ್ತದೆ. ಈ ಎಲ್ಲಾ ಕಾರಣಗಳಿಂದ ಇದರ ಜೊತೆಗೆ ಇಲ್ಲಿ ಮಿಸ್‌ಮ್ಯಾನೇಜ್‌ಮೆಂಟ್, ಮಾಲ್ ಅಡ್ಮಿನಿಸ್ಟ್ರೇಷನ್ ಇದೆ, ಡಿಫಾಲ್ಟರ್ ಆಗುವುದು ಇದೆ, ಇದೆಲ್ಲವನ್ನೂ ನಾನು ಮುಚ್ಚಿಕೊಳ್ಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ನಾವು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಮತ್ತು ಸೂಕ್ತ ಬದಲಾವಣೆಗಳನ್ನು ಸಹ ಮಾಡುತ್ತಿದ್ದೇವೆ. ಯಾವುದೇ ಸಂಸ್ಥೆಯಲ್ಲಿ ಲುಕ್ಸಾನು ಆದರೆ ಈ ಲುಕ್ಸಾನುಗೆ ಅಧಿಕಾರಿಗಳು ಎಷ್ಟರ ಮಟ್ಟಿಗೆ ಜವಾಬ್ದಾರರು ? ಅಧಿಕಾರೇತರರು ಎಷ್ಟು ಜವಾಬ್ದಾರರು ? ಎಂದು ನೋಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಇದಕ್ಕೋಸ್ಕರ ನಾವು ಸಿಬ್ಬಂದಿಯನ್ನೂ ಸಹ ಜಾಸ್ತಿ ಮಾಡಬೇಕಾಗಿದೆ. ಕೆಲವು ದಿವಸಗಳಲ್ಲಿ ಇದರ ಬಗ್ಗೆ ಪೂರ್ಣವಾಗಿ ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಲೆವಿ ಪದ್ಧತಿಯ ಬಗ್ಗೆ ನಾನು ಎರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಇಲ್ಲಿ ತಾಲ್ಲೂಕು ಸೊಸೈಟಿಗಳವರು ಬಹಳಷ್ಟು ಹಣವನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ನಾನು ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಹಲ್ ಮಾಡುವಾಗ ಒಂದೆರಡು ಕೆ.ಜಿ. ಜಾಸ್ತಿ ಬರುತ್ತದೆ. ಮಾನ್ಯ ಸದಸ್ಯರಾದ ಮಹದೇವ್ ಅವರಿಗೆ ಇದರಲ್ಲಿ ಸ್ವಲ್ಪ ಅನುಭವ ಇದೆ, ನಮಗೂ ಅನುಭವ ಇದೆ; ಕೆಲವು ಸೊಸೈಟಿಯವರು ಈ ವಿಷಯದಲ್ಲಿ ಎಕ್ಸೆಸ್ ತೋರಿಸಿದ್ದಾರೆ. ಮಳವಳ್ಳಿಯ ಸೊಸೈಟಿಯಲ್ಲಿ ಎಕ್ಸೆಸ್ ತೋರಿಸಿದ್ದಾರೆ. ವರ್ಷದ ಭತ್ತವನ್ನು ಅದೇ ವರ್ಷ ಹಲ್ ಮಾಡಿದರೆ ಇಳುವರಿ ಸ್ವಲ್ಪ ಜಾಸ್ತಿ ಬರುತ್ತದೆ. ಎರಡು ಮೂರು ವರ್ಷದ ನಂತರ ಹಲ್ ಮಾಡಿದರೆ ಇಳುವರಿ ಸ್ವಲ್ಪ ಕಡಿಮೆ ಬರುತ್ತದೆ. ಈ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ಸಹಕಾರ ಸಂಘಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲ. ಇವರ ಹತ್ತಿರ ಮಾಯಿಸ್ಚರ್ ಮೀಟರ್ ಇರುವುದಿಲ್ಲ, ಭತ್ತದ ಕ್ವಾಲಿಟಿಯನ್ನು ಕಂಡುಹಿಡಿಯುವುದಕ್ಕೆ ಸರಿಯಾದ ವ್ಯವಸ್ಥೆಯಿಲ್ಲ. ಕೊನೆಯಪಕ್ಷ ಒಂದು ಬಕೇಟಿನಲ್ಲಿ ೪–೫ ಕೆ.ಜಿ. ಭತ್ತವನ್ನು ಸುರಿದರೆ ಅದರಲ್ಲಿ ಜೊಳ್ಳು ಎಷ್ಟು ಇದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎಂ. ಮಹದೇವ್.—ಪ್ರಕ್ಯೂರ್ ಮಾಡುವಾಗ ಎರಡು ಮೂರು ಕೆ.ಜಿ. ಡ್ರೈಯೇಜ್ ಇಟ್ಟುಕೊಂಡು ಪ್ರಕ್ಯೂರ್ ಮಾಡುತ್ತಾರೆ. ಲಾಸ್ ಆದರೆ ಇದರಿಂದ ಬ್ಯಾಲೆನ್ಸ್ ಆಗುತ್ತದೆ. ಇದರಿಂದಾಗಿ ಹಲ್ ಮಾಡುವುದು ಎರಡು ಮೂರು ವರ್ಷವಾದರೂ ಸಹ ಇಳುವರಿ ಕಡಿಮೆಯಾಗುವುದಿಲ್ಲ. ೫ ಪರ್ಸೆಂಟ್ ಕಡಿಮೆಯಾಗಬಹುದು ಅಷ್ಟೆ.

ಶ್ರೀ ಆರ್. ಎಲ್. ಜಾಲಪ್ಪ.—ಆಮೇಲೆ ಆಹಾರ ಧಾನ್ಯಗಳನ್ನು ಅಲಾಟ್‌ಮೆಂಟ್ ಮಾಡುವಾಗ ಆಗುವಂಥ ತೊಂದರೆಗಳ ಬಗ್ಗೆ ಮಾನ್ಯ ರಾಮಭಟ್ ಅವರು ಹೇಳಿದರು. ಇದರಲ್ಲಿ ೪೦–೫೦ ರೂಪಾಯಿಗಳನ್ನು ಜಾಸ್ತಿ ಕೊಡಬೇಕಾಗುತ್ತದೆ. ಇಲ್ಲಿ ಸಬ್ಸಿಡೈಸ್ಡ್ ರೇಟ್‌ನಲ್ಲಿ ಮಾರಾಟ ಮಾಡಿ ಆಮೇಲೆ ಡಿಫರೆನ್ಸ್‌ನ್ನು ಕ್ಲೇಂ ಮಾಡಬೇಕು. ಇದು ಅನಾವಶ್ಯಕವಾದ ಪದ್ಧತಿ. ಇದರಿಂದ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಲಾಸ್ ಆಗುತ್ತದೆ. ನಾನು ಇಲಾಖೆಯವರನ್ನು ಕರೆಯಿಸಿ ಇದರ ಬಗ್ಗೆ ಮಾತನಾಡಿದ್ದೇನೆ, ಆಹಾರ ಮಂತ್ರಿಗಳು ಮತ್ತು ಸೆಕ್ರೆಟರಿಯವರೊಂದಿಗೂ ಇದರ ಬಗ್ಗೆ ಮಾತನಾಡಿದ್ದೇನೆ. ಜಿಲ್ಲಾಧಿಕಾರಿಗಳು, ಕೋಲಾರ ಮತ್ತು ಬೆಂಗಳೂರು ಇವರೊಂದಿಗೂ ಮಾತನಾಡಿದ್ದೇನೆ ಇದರಿಂದಾಗಿ ಆಕ್ಚುಯಲ್ ಏನು ಇದೆಯೋ ಅದನ್ನು ಕೊಟ್ಟು, ಡಿಫರೆನ್ಸ್‌ನ್ನು ಮೊದಲೇ ತುಂಬಿಕೊಡಬೇಕು ಎಂದು ಹೇಳಿದ್ದೇವೆ. ಈಗ ಏಕದಂ ಕೊಡುವುದಕ್ಕೆ ಆಗದೇ ಹೋದರೆ ಬಿಲ್ ಪ್ರಿಪೇರ್ ಮಾಡಿದ ೨೪ ಗಂಟೆಯೊಳಗೆ ವಾಪಸ್ ಕೊಡಬೇಕು ಎಂದು ಹೇಳಿದ್ದೇವೆ. ಒಂದು ಸಮಯ ಹೆದರಿದ್ದೂ ಉಂಟು. ಈ ರೀತಿ ಲುಕ್ಸಾನು ಆಗುತ್ತಿದೆ, ಸಹಕಾರಿಗಳನ್ನು ನೆಗ್ಲೆಟ್ ಮಾಡುವುದಾದರೆ ಸರ್ಕಾರದಲ್ಲಿ ಹಣವನ್ನು ತುಂಬಿ ಕೊಡದೇ ಹೋದರೆ ತಾಲ್ಲೂಕು ಮಟ್ಟದಲ್ಲಿ ಆಹಾರಧಾನ್ಯ ಎತ್ತುವುದೇ ಬೇಡ ಎಂದು ಹೆದರಿಸಿದ್ದು ಉಂಟು. ಆದ್ದರಿಂದ ಬಹಳಷ್ಟು ಬೇಗ ಹಣವನ್ನು ರೀಎಂಬರ್ಸ್ ಮಾಡುತ್ತಾ ಇದ್ದಾರೆ. ಕೆಲವು ಕಡೆ ಇರತಕ್ಕ ಸಮಸ್ಯೆಯನ್ನು ಸಾಧ್ಯವಾದಷ್ಟು ಬೇಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ರಂಗನಾಥ್‌ರವರು ಮತ್ತು ಮಾನ್ಯ ಬಣಕಾರ್‌ರವರು ಅಪೆಕ್ಸ್ ಬ್ಯಾಂಕ್‌ನ ಲಾಭ ಎಷ್ಟು ಪ್ರೈಮರಿ ಸೊಸೈಟಿಗಳ ನಷ್ಟ ಎಷ್ಟು? ಎಂದು ಕೇಳಿದರು. ೧೯೮೦–೮೧ರಲ್ಲಿ ೩೩.೮೮ ಲಕ್ಷ ಲಾಭ ಸಂಪಾದನೆ, ೧೯೮೧–೮೨ರಲ್ಲಿ ೧೫೦.೪೬ ಲಕ್ಷ ೧೯೮೨–೮೩ರಲ್ಲಿ ಟೆಂಟೆಟೀವ್ ೨೪೦ ಲಕ್ಷ ಸಂಪಾದನೆ ಮಾಡಿದೆ. ನಬಾರ್ಡ್ ಸಂಸ್ಥೆಯಿಂದ ಹಣವನ್ನು ಪಡೆದು ಅಪೆಕ್ಸ್ ಬ್ಯಾಂಕ್‌ಗಳಿಗೆ, ಜಿಲ್ಲಾ ಬ್ಯಾಂಕ್‌ಗಳಿಗೆ ಒದಗಿಸುತ್ತಿದ್ದೇವೆ, ಅದರ ಮಾರ್ಜಿನ್ ಒಂದೂವರೆ ಪರ್ಸೆಂಟ್. ಮಾನ್ಯ ಮಹದೇವ್ ಅವರಿಗೆ ಚೆನ್ನಾಗಿ ಗೊತ್ತು. ಆದರೆ ಇವತ್ತಿನ ದಿವಸ ನಬಾರ್ಡ್‌ನವರಿಂದ ಪೂರ್ತಿಯಾಗಿ ಹಣವನ್ನು ಪಡೆಯುವುದಕ್ಕೆ ಆಗುತ್ತಾ ಇಲ್ಲ. ಅವರು ಕಟ್ಟುಪಾಡುಗಳನ್ನು ಹಾಕಿದ್ದಾರೆ, ಅಂತಹ ಸಮಯದಲ್ಲಿ ಜಿಲ್ಲಾ ಬ್ಯಾಂಕುಗಳಿಗೆ ರೈತರಿಗೆ ಹಣವನ್ನು ಕೊಡುವುದಕ್ಕೋಸ್ಕರ ಏನು ಡಿಪಾಸಿಟ್ ಇಟ್ಟಿರುತ್ತೇವೆ ಅದಕ್ಕೆ ೧೫ ರಿಂದ ೨೦ ಕೋಟಿ ರೂಪಾಯಿಗಳ ಕನ್ಸೇಷನಲ್ ಫೈನಾನ್ಸ್ ಕೊಡುತ್ತಾ ಇದ್ದಾರೆ. ನಬಾರ್ಡ್‌ನವರು ಯಾವ ರೇಟ್ ಆಫ್ ಇಂಟರೆಸ್ಟ್ ಹಾಕಿದ್ದಾರೋ ಅದೇ ರೀತಿ ಇವರು ಹಣವನ್ನು ಒದಗಿಸುತ್ತಿದ್ದಾರೆ. ಎರಡರಿಂದ ಎರಡೂವರೆ ಪರ್ಸೆಂಟ್ ಅಪೆಕ್ಸ್ ಬ್ಯಾಂಕುಗಳಿಗೆ ಲುಕ್ಸಾನು ಆಗುತ್ತದೆ, ಇದರ ಸರಾಸರಿ ಲೆಕ್ಕ ಹಾಕಿದರೆ, ಅಪೆಕ್ಸ್ ಬ್ಯಾಂಕ್ ರೈತರಿಗೆ ಕೊಡುವಂಥ ಹಣದಿಂದ ಹೆಚ್ಚಿನ ಲಾಭ ಏನೂ ಬರುವುದಿಲ್ಲ. ಹಣ ಜಾಸ್ತಿ ಸಂಪಾದನೆಯಾಗಿದೆ, ಲಾಭ ಜಾಸ್ತಿ ಬಂದಿದೆ ಹೇಗೆ ಅಂದರೆ ೮೫ ಕೋಟಿ ರೂಪಾಯಿಗಳ ಡಿಪಾಸಿಟ್ ಅವರ ಹತ್ತಿರ ಇದೆ. ಅದರಲ್ಲಿ ೧೫ ಕೋಟಿ ಕೊಟ್ಟಾಗ ಇನ್ನು ೭೦ ಕೋಟಿ ಇರುತ್ತದೆ. ಈ ಹಣವನ್ನು ಬೇರೆ ಬೇರೆ ಇಂಡಸ್ಟ್ರಿಯಲ್ ಲೋನ್‌ನಲ್ಲಿ ತೊಡಗಿಸಿ ಕೊಟ್ಟು ಅದರಿಂದ ಬಂದಂಥ ಹಣದಿಂದ ಲಾಭಾಂಶ ಮಾಡಿದ್ದಾರೆ. ಈ ಹಣದಲ್ಲಿ ೧೯೮೧–೮೨ಕ್ಕೆ ಪ್ರೈಮರಿ ಅಗ್ರಿಕಲ್ಚರಲ್ ಕೋಆಪರೇಟೀವ್ ಸೊಸೈಟಿಗಳವರ ಖರ್ಚಿಗೋಸ್ಕರ ೪೫ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಆದುದರಿಂದ ನಾವು ಕಡೇಪಕ್ಷ ಅರ್ಧದಷ್ಟಾದರೂ ಹೆಚ್ಚು ಮಾಡಬೇಕು ಎಂದು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಪ್ರೈಮರಿ ಅಗ್ರಿಕಲ್ಚರಲ್ ಕೋಆಪರೇಟೀವ್ ಸೊಸೈಟಿಗಳಲ್ಲಿ ೧೯೮೦–೮೧ರೊಳಗೆ ೨೧೫೧ ಸೊಸೈಟಿಗಳು ೩ ಕೋಟಿ ೬೨ ಲಕ್ಷ ರೂಪಾಯಿಗಳ ಲಾಭ ಸಂಪಾದನೆ ಮಾಡಿತ್ತು; ೨೫೯೩ ಸೊಸೈಟಿಗಳು ಲುಕ್ಸಾನಿನಲ್ಲಿದ್ದುವು. ೧೯೮೧–೮೨ರಲ್ಲಿ ೨೨೬೪ ಸೊಸೈಟಿಗಳು ೩.೯೨ ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿವೆ ಮತ್ತು ೨೦೮೦ ಸೊಸೈಟಿಗಳು ೮ ಕೋಟಿ ೫೪ ಲಕ್ಷ ರೂಪಾಯಿಗಳಷ್ಟು ಕಳೆದುಕೊಂಡಿವೆ. ಬಹುಶಃ ೨೮ ಕೋಟಿ ರೂಪಾಯಿಗಳಷ್ಟು ಸರ್ಕಾರ ತುಂಬಿ ಕೊಡುತ್ತಾ ಇದೆ. ಅದರಲ್ಲಿ ಬಹಳಷ್ಟು ಸೊಸೈಟಿಗಳು ತಮ್ಮ ಲುಕ್ಸಾನನ್ನು ತುಂಬಿಕೊಳ್ಳಬಹುದು ಎಂದು ನಾವು ಭರವಸೆ ಇಟ್ಟುಕೊಂಡಿದ್ದೇವೆ. ಜಿಲ್ಲಾ ಬ್ಯಾಂಕುಗಳ ಹಾಗೂ ಸಹಕಾರ ಸಂಘಗಳ ಒಂದು ಕಾನ್‌ಸ್ಟಿಟ್ಯೂಷನ್ ಏನಿದೆ ಅದು ಬದಲಾವಣೆಯಾಗಬೇಕು ಎಂದು ಮಾನ್ಯ ರಂಗನಾಥ್‌ರವರು

ಹಾಗೂ ಮಹದೇವ್ ಅವರು ಸಲಹೆ ಕೊಟ್ಟಿದ್ದಾರೆ. ಅದಕೋಸ್ಕರ ನಾನು ಅವರಿಗೆ ಖಂಡಿತ ವಾಗಿಯೂ ವಂದಿಸುತ್ತೇನೆ. ಸ್ವಾಮಿ, ನಾನು ಸುಮಾರು ೨೦–೨೫ ವರ್ಷಗಳಿಂದ ಸಹಕಾರ ರಂಗದಲ್ಲಿ ಕೆಲಸ ಮಾಡಿದ್ದೇನೆ, ನಾನೇನು ರಾಜಕಾರಿಣಿ ಅಲ್ಲ, ಅಲ್ಪಸ್ವಲ್ಪ ತಿಳಿದುಕೊಂಡಿದ್ದೇನೆ. ಇದರಲ್ಲಿ ಯಾವ ಯಾವ ರೀತಿ ಏನೇನು ಮಾಡಬಹುದು ಎಂದು ನನಗೆ ಅಲ್ಪಸ್ವಲ್ಪ ಗೊತ್ತಿದೆ. ನಾನು ಬಂದ ತಕ್ಷಣ ಇದರ ಬಗ್ಗೆ ಯೋಚನೆ ಮಾಡಿ ನಮ್ಮ ಅಧಿಕಾರಿಗಳನ್ನು ಕರೆಸಿ ಮಾತನಾಡಿದೆ. ಮೈಸೂರು ಜಿಲ್ಲೆಯೊಳಗೆ ಇಬ್ಬರು ಕೇನ್ ಗ್ರೋಯರ್ಸ್ ಸೊಸೈಟಿ ಎಂದು ಮಾಡಿ ಡೈರೆಕ್ಟರ್ಸ್ ಆಗಿದ್ದಾರೆ.

ಶ್ರೀ ಎಂ. ಮಹದೇವ್.—ಈಗ ತಾವು ಪಕ್ಕಾ ರಾಜಕಾರಿಣಿ.

ಶ್ರೀ ಆರ್.ಎಲ್. ಜಾಲಪ್ಪ.—ನೀವು ಏನಾದರೂ ಬಂದಿದ್ದರೆ.

ಶ್ರೀ ಎಂ. ಮಹದೇವ್.—ನಾನು ರಾಜಕಾರಣಿ ಅಲ್ಲ ಎಂದು ಮೊದಲು ಹೇಳಿದಿರಿ, ಈಗ ರಾಜಕಾರಣಿಯಾಗಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಚಿಕ್ಕೇಗೌಡರ ಜೊತೆಯಲ್ಲಿ ೧೦ ವರ್ಷ ಇದ್ದಮೇಲೆ ಅಲ್ಪಸ್ವಲ್ಪ ಮಾಡದೇ ಹೋದರೆ ಹೇಗೆ? ನಾನು ಉದಾಹರಣೆಗೆ ಹೇಳಿದೆ. ಈಗ ಬೆಂಗಳೂರು ಜಿಲ್ಲಾ ಬ್ಯಾಂಕ್ ಇದೆ, ಒಬ್ಬರೂ ರೈತ ಸಂಘದಿಂದ ಬಂದಿಲ್ಲ, ಎಲ್ಲಾ ಮಿಲ್ಕ್ ಸೊಸೈಟಿಯಿಂದ ಬಂದವರು ೨೦ (ಸಿ) ಪ್ರಕಾರ ಆಗುವುದಿಲ್ಲ. ಮಾರ್ಕೆಟಿಂಗ್ ಫೆಡರೇಷನ್ ಇದೆ, ಅದರಲ್ಲಿ ಫ್ರೂಟ್ಸ್ ಮತ್ತು ವೆಜಿಟೆಬಲ್ಸ್, ಅದೂ ಇದೂ ಮಾಡಿಕೊಂಡು ಬಂದಿದ್ದು ಎಪಿಎಂಸಿಯಲ್ಲಿದ್ದಾರೆ ಷಿಫಿಂಗ್ ಮಾರ್ಕೆಟಿಂಗ್ ಸೊಸೈಟಿ ಎಂದು ಮಾಡಿಕೊಂಡು ಬಂದು ಅಲ್ಲಿ ಮೆಂಬರ್ಸ್ ಆಗಿದ್ದಾರೆ, ಟಿಎಪಿಸಿಎಂಎಸ್‌ನಲ್ಲಿ ಹಲವಾರು ರೀತಿಯ ಸೊಸೈಟೀಸ್ ಇವೆ. ೫೦೦ ಅಥವಾ ೧೦೦೦ ಕೊಟ್ಟು ರಿಜಿಸ್ಟರ್ ಮಾಡಿಕೊಂಡು ಬಂದು ಮೆಂಬರ್ ಆದಂಥವರೂ ಇದ್ದಾರೆ. ಇದನ್ನು ತಪ್ಪಿಸಬೇಕು. ಎಂದು ಅಧಿಕಾರಿಗಳ ಹತ್ತಿರ ಮಾತನಾಡಿ ಸೆಕ್ಷನ್ ೩೦ (ಬಿ) ಒಳಗೆ ಒಂದು ಡೈರೆಕ್ಷನ್ ಕೊಟ್ಟೆವು. ಈ ಒಂದು ಕಾನ್ಸ್ಟಿಟ್ಯೂಷನ್ ಪರ್ವರ್ಸನ್ನು ನಿವೇ ಮಾಡಿ, ಜನರಲ್‌ಬಾಡಿ ಮಿಟಿಂಗ್ ಕರೆದು ಬದಲಾವಣೆ ಮಾಡಿಕೊಳ್ಳಿ ಕಾನ್ಸ್ಟಿಟ್ಯೂಷನ್ ಬೈಲಾ ಅಮೆಂಡ್‌ಮೆಂಟ್ ಮಾಡಿ ಕಳಿಸಿ ಎಂದು ಕೇಳಿಕೊಂಡೆವು. ಇದರಲ್ಲಿ ೪ ಬ್ಯಾಂಕ್‌ನವರು ಒಪ್ಪಲಿಲ್ಲ. ಇದರಲ್ಲಿ ಮೈಸೂರು ಬ್ಯಾಂಕ್, ಬೆಂಗಳೂರು ಬ್ಯಾಂಕ್, ಬೆಳಗಾಂ ಬ್ಯಾಂಕ್ ಇವರನ್ನು ಕರೆದು ಮಾತನಾಡಿದಾಗ ಒಪ್ಪಿಕೊಂಡರು. ನಾವು ಒಪ್ಪಿಕೊಳ್ಳುತ್ತೇವೆ, ರಿಟ್ ಪಿಟಿಷನ್ಸ್ ಹಾಕುವುದಿಲ್ಲ ಎಂದು ಹೇಳಿದರು. ಚಿಕ್ಕಮಗಳೂರು ಅಥವಾ ಶಿವಮೊಗ್ಗ ಮುಂತಾದ ೪ ಬ್ಯಾಂಕ್ಸ್ ಇದನ್ನು ಒಪ್ಪಲಿಲ್ಲ, ಡೈರೆಕ್ಷನ್ಸ್ ಕೊಟ್ಟೆವು, ಅದನ್ನು ಒಪ್ಪಲಿಲ್ಲ. ಅದಕ್ಕೆ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ತರಬೇಕು ಎಂದು ಅದನ್ನು ಸದನದ ಮುಂದೆ ತರುತ್ತಾ ಇದ್ದೇವೆ. ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಬೆಳಗಾಂ ಬ್ಯಾಂಕ್‌ಗಳವರು ನಾವು ಕೊಟ್ಟ ಸಲಹೆಗಳನ್ನು ಒಪ್ಪಲಿಲ್ಲ. ಹಿಂದಿನ ಸರ್ಕಾರದವರು ಅಲ್ಲಿ ಯೂನಿವರ್ಸಲ್ ಮೆಂಬರ್‌ಶಿಪ್ ಎಂದು ಮಾಡಿದರು. ಆಗ ನಾನು ಆ ಪಕ್ಷದೊಳಗೆ ಇದ್ದೆ, ಅದಕ್ಕೆ ನಾನೂ ಸ್ವಲ್ಪ ಜವಾಬ್ದಾರನೇ. ಇವತ್ತು ಪಕ್ಷ ಬಿಟ್ಟೆವು ಎಂದು ಎಲ್ಲಾ ಅವರ ತಲೆ ಮೇಲೆ ಹಾಕುವುದಕ್ಕೆ ತಯಾರಿಲ್ಲ. ಆಗ ಎಮರ್ಜನ್ಸಿ ಇತ್ತು, ಮಾಡಲೇಬೇಕು ಎಂದು ಮಾಡಲಾಯಿತು, ಇದರಿಂದ ಡ್ಯಾಮೇಜ್ ಏನಾಗಿದೆ ಅದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ, ನಾವೆಲ್ಲಾ ಸಹಕಾರಿಗಳು. ಸಹಕಾರಿಗಳು ಯಾರು ಆಗಿದ್ದಾರೆ ಅವರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ನಾನ್ ಬಾರೊಯರ್ ಕಾನ್ಸ್ಟಿಟ್ಯೂಯನ್ಸಿ ಎಂದು ಇದೆ, ಬಾರೊಯರ್ಸ್ ಕಾನ್ಸ್ಟಿಟ್ಯೂಯನ್ಸಿ ಎಂದು ಮಾಡಿದ್ದಾರೆ. ನಾನ್ ಬಾರೊಯರ್ಸ್, ಬಾರೊಯರ್ಸ್‌ಗೆ ಓಟ್ ಮಾಡಬಹುದು. ಎಲೆಕ್ಷನ್ ಸಮಯದಲ್ಲಿ ಒಂದು ಸಾವಿರ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಬಹುದು, ೧೦೦ ರೂಪಾಯಿ ಮೆಂಬರ್‌ಸಿಪ್ ಅವರನ್ನು ಕರೆದುಕೊಂಡು ಬಂದು ಓಟ್ ಮಾಡಿಸಿಕೊಳ್ಳುತ್ತಾರೆ; ಹೀಗೆ ಮಾಡುತ್ತಾ ಇದ್ದಾರೆ. ಇದರಿಂದ ಸಂಸ್ಥೆಗಳಿಗೆ ಏನು ಡ್ಯಾಮೇಜಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ೧೨ ಸಾವಿರ ಜನ ನಾನ್ ಬಾರೋಯರ್ಸ್ ಗೌರಿಬಿದನೂರಿನಲ್ಲಿದ್ದಾರೆ, ನನ್ನ ತಾಲ್ಲೂಕಿನಲ್ಲಿ ೫–೬ ಸಾವಿರ ಜನ ಇದ್ದಾರೆ, ಹೊಸಕೋಟೆಯಲ್ಲಿ ೮ ಸಾವಿರ ಜನ ನಾನ್ ಬಾರೊಯರ್ಸ್ ಇದ್ದಾರೆ. ೧೦ ರೂಪಾಯಿ ಷೇರು ಬಂಡವಾಳ. ಹನ್ನೊಂದುವರೆ ರೂಪಾಯಿ ಮೆಂಬರ್‌ಶಿಪ್. ಒಂದು ಆಡಿಟ್ ರಿಪೋರ್ಟ್ ಕಳಿಸಬೇಕಾದರೆ ೫ ರೂಪಾಯಿ ಆಗುತ್ತದೆ. ಜನರಲ್ ಬಾಡಿಗೆ ಬಂದಾಗ ಅವರಿಗೆ ಸ್ವಲ್ಪ ಉಪಹಾರ ಒದಗಿಸಬೇಕು, ಏಕೆಂದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇರುತ್ತಾರೆ. ಆಡಿಟ್ ರಿಪೋರ್ಟ್

ಕಳಿಸಲು ೫ ರೂಪಾಯಿ ಖರ್ಚು, ಮತ್ತು ಉಪಹಾರದ ಖರ್ಚು ಈ ಎರಡೂ ಸೇರಿದರೆ ಒಂದು ವರ್ಷಕ್ಕೆ ಅವರು ಕೊಟ್ಟ ಷೇರು ಬಂಡವಾಳ ಮುಗಿದು ಹೋಗುತ್ತದೆ. ೫–೧೦ ಸಾವಿರ ಜನ ಇದ್ದರೆ ಪ್ರತಿಯೊಂದು ಜನರಲ್ ಬಾಡಿ ಮೀಟಿಂಗ್‌ಗೂ ಕರೆಸಿ, ೧೦–೧೦ ರೂಪಾಯಿ ಖರ್ಚು ಮಾಡುತ್ತಾ ಹೋದರೆ, ವರ್ಷಕ್ಕೆ ೬೦–೭೦ ಸಾವಿರ ರೂಪಾಯಿ ಒಂದೊಂದು ಸಂಸ್ಥೆಯವರು ಖರ್ಚು ಮಾಡಿದರೆ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಲುಕ್ಸಾನು ಹೊಂದುತ್ತವೆ. ಇದನ್ನು ಸರಿ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಇದರ ಬಗ್ಗೆ ಕೂಡ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಈಗಾಗಲೇ ಟಿ.ಎ.ಪಿ.ಸಿ.ಎಂ. ಸೊಸೈಟಿಗಳಲ್ಲಿ ಮೆಂಬರ್‌ಶಿಪ್ ಮಾಡಿಸುವ ಕೆಲಸ ಶುರುವಾಗಿದೆ. ೧೦೦೦–೧೨೦೦ ಜನ ಮೆಂಬರ್‌ಶಿಪ್ ಮಾಡಿಸು ತ್ತಿದ್ದಾರೆ. ಇದರಿಂದ ಸಂಸ್ಥೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಯೂನಿವರ್ಸಲ್ ಮೆಂಬರ್‌ಶಿಪ್ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದರೆ, ಇನ್ನು ೧೦ ವರ್ಷಗಳೊಳಗೆ ಯಾವ ಸೊಸೈಟಿಗಳೂ ಕೂಡ ಉತ್ತಮವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದನ್ನು ತಪ್ಪಿಸು ವುದಕ್ಕಾಗಿ ಇದೇ ಅಧಿವೇಶನದಲ್ಲಿಯೇ ಕಾನೂನು ತಿದ್ದುಪಡಿ ತರುವುದಕ್ಕೆ ಸೂಚನೆ ಮಾಡಿದ್ದೇವೆ. ಮಾನ್ಯ ಸದಸ್ಯರಾದ ರಂಗನಾಥ್‌ರವರು ಬೇನಾಮಿ ಸಾಲಗಳ ಬಗ್ಗೆ ಹೇಳಿದ್ದಾರೆ. ಇದು ಸುಳ್ಳು ಎಂದು ನಾನು ಹೇಳುವುದಿಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಮ್ಮ ಸರ್ಕಾರ ಬಂದ ಮೇಲೆ ಆಗಿರುವುದಿಲ್ಲ. ಇದಕ್ಕೆ ಎನ್‌ಕ್ರೋಚ್‌ಮೆಂಟ್ ಮಾಡುವುದು ಸರಿಯಲ್ಲ. ನಾನು ಮೊದಲೇ ಹೇಳಿದ ಹಾಗೆ, ಅಧಿಕಾರೇತರ ಜನ ಈ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕೆಲವು ಸೊಸೈಟಿಗಳಲ್ಲಿ ಷೇರುದಾರರಿಂದ ಹೆಬ್ಬೆಟ್ಟು ಗುರುತು ಹಾಕಿಕೊಂಡು ೪–೫ ಸಾವಿರ ರೂಪಾಯಿ ಸಾಲ ಕೊಟ್ಟಿರುವುದಕ್ಕೆ ರಶೀದಿ ಇದೆ ಸಾಲ ಪಡೆದಂಥ ವ್ಯಕ್ತಿ ನನ್ನ ಕೈಗೆ ಕೇವಲ ೫೦೦ ಬಂದಿದೆ ಎಂದು ಹೇಳುತ್ತಾನೆ. ಸಾಲ ತೆಗೆದುಕೊಂಡಿರುವುದನ್ನು ಆತ ಒಪ್ಪಿಕೊಳ್ಳುತ್ತಾನೆ, ಕೋರ್ಟಿಗೆ ಹೋದರೆ ಹೇಗೆ ನಿಲ್ಲುತ್ತೆ? ಹಣ ಹಂಚುವಾಗ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಾಗಲಿ, ಮ್ಯಾನೇಜಿಂಗ್ ಡೈರೆಕ್ಟರ್ ಆಗಲಿ ಏನು ಮಾಡುತ್ತಿದ್ದರು? ಜಿಲ್ಲಾ ಮಟ್ಟದ ಅಧ್ಯಕ್ಷರಿಂದ ಹಿಡಿದು ಕೆಳಮಟ್ಟದಲ್ಲಿ ಕೆಲಸ ಮಾಡುವವರೆಲ್ಲರಿಗೂ ಸರ್‌ಚಾರ್ಜ್ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೋ-ಆಪರೇಟಿವ್ ಜೈಲ್ ಪ್ರಾರಂಭ ಮಾಡುವ ಸೂಚನೆ ಇತ್ತು. ಇದರ ಬಗ್ಗೆ ಆಲೋಚನ ಮಾಡುತ್ತೀರಾ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ತಮ್ಮ ಕಡೆಯವರು ತಯಾರಿದ್ದಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಕಡೆಯವರು ತಯಾರಿರಬೇಕು. ನಿಮ್ಮ ಕಡೆ ಯವರು ತಯಾರಿರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಜೈಲಿಗೆ ಕಳುಹಿಸುವುದಕ್ಕೆ ಸೀನಿಯಾರಿಟಿ ಲಿಸ್ಟ್ ಮಾಡಿ ಅದರಂತೆ ಹೋಗೋಣ.

ಶ್ರೀ ಆರ್.ಎಲ್. ಜಾಲಪ್ಪ.—ಮೋಸ ಮಾಡಿ ಬದುಕುವಂಥ ಜನ ನಮ್ಮ ಪಕ್ಷದಲ್ಲೂ ಇದ್ದಾರೆ, ನಿಮ್ಮ ಪಕ್ಷದಲ್ಲೂ ಇದ್ದಾರೆ. ಮಾನ್ಯ ರಾಮ್‌ಭಟ್‌ರವರು ತಾವು ಹುಷಾರಾಗಿರಿ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತೀರೆಂದು ಹೇಳಿದರು. ಇಂಥ ಜನ ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಆ ಕಡೆ ಇರುತ್ತಾರೆ.

ಶ್ರೀ ಕೆ.ಎಚ್. ರಂಗನಾಥ್.—ಸರ್ಕಾರಿ ಜನ.

ಶ್ರೀ ಆರ್.ಎಲ್. ಜಾಲಪ್ಪ.—ನಾನಂತೂ ಇದಕ್ಕೆ ಅವಕಾಶ ಕೊಡುವುದಿಲ್ಲ. ಈ ವಿಷಯದಲ್ಲಿ ತಾವು ಕಾದು ನೋಡಿ, ಇನ್ನು ಯುಟಿಲೈಸೇಷನ್ ಬಗ್ಗೆ ನೋಡಿದ್ದೀರಾ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಬೇನೆ ಬರುವುದಕ್ಕೆ ಮೂಲಕಾರಣ ಯುಟಿಲೈಸೇಷನ್ ಬಗ್ಗೆ ನೋಡದೇ ಇದ್ದುದೇ ಕಾರಣ. ಈ ವಿಚಾರದಲ್ಲಿ ಸರ್ಕಾರದ ಅಧಿಕಾರಿಗಳು ಸರ್ಕಾರ ಹಾಗೂ ಅಧಿಕಾರೇತರ ಸದಸ್ಯರು ಗಳಾದ ನಾವುಗಳು ಕಾರಣರಾಗಿದ್ದೇವೆ. ವಾಣಿಜ್ಯ ಬ್ಯಾಂಕುಗಳು ಸಾಲ ಕೊಟ್ಟರೆ, ಅವರು ವಾಚ್ ಮಾಡುತ್ತಾರೆ. ೮-೧೦ ದಿವಸಗಳಿಗೆ ಒಂದು ಸಾರಿ ಜಮೀನುಗಳ ಹತ್ತಿರ ಹೋಗಿ ನೋಡಿಕೊಂಡು ಬರುತ್ತಾರೆ. ನಾನು ಕೂಡ ಜಪ್ತಿ ಸಾಲದ ಒತ್ತಡಕ್ಕೆ ತಡೆಯಲಾರದೆ ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿದ್ದೇನೆ. ವಾಣಿಜ್ಯ ಬ್ಯಾಂಕಿನವರು ವಾಚ್ ಮಾಡುತ್ತಾರೆ, ಈ ಕಡೆ ಸುಮ್ಮನೆ ಬಂದೆವು, ನಿಮ್ಮ ಆರೋಗ್ಯ ವಿಚಾರಿಸಿಕೊಂಡು ಹೋಗೋಣವೆಂದು ಬಂದೆವು ಎಂದು ಹೇಳುತ್ತಾರೆ.

ಆ ಒಂದು ವ್ಯವಸ್ಥೆ ಸಹಕಾರಿ ರಂಗದಲ್ಲಿ ಬರಲಿಲ್ಲ, ನಾನು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷನಾಗಿದ್ದಾಗ ಮೊಟ್ಟಮೊದಲಿಗೆ ಯುಟಿಲೈಸೇಷನ್ ವಿಚಾರದಲ್ಲಿ ಗಮನ ಕೊಟ್ಟಿದ್ದೇನೆ. ಆ ಸಂದರ್ಭದಲ್ಲಿ ಹಿರಿಯೂರು, ಹುಣಸೂರಿಗೆ ಹೋಗಿದ್ದೇನೆ, ದೊಡ್ಡಬಳ್ಳಾಪುರದಲ್ಲಿ ಕೂಡ ನೋಡಿದ್ದೇನೆ. ಮೊದಲನೇ ಕಂತು ಬಾವಿ ಸಾಲ ತೆಗೆದುಕೊಂಡಿರುತ್ತಾನೆ, ಎರಡನೇ ಕಂತಿನ ಹಣಕ್ಕೆ ಬರುವುದೇ ಇಲ್ಲ. ಏಕೆ ಬರಲಿಲ್ಲವೆಂದು ಅಧಿಕಾರಿಗಳನ್ನು ಕೇಳಿದರೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸಂಬಂಧಪಟ್ಟ ಬ್ಯಾಂಕಿನವರು ಯಾರು ಕೂಡ ೨ನೇ ಕಂತಿನ ಸಾಲಕ್ಕೆ ಏಕೆ ಬರಲಿಲ್ಲವೆಂಬ ಬಗ್ಗೆ ಚಿಂತನೆ ಮಾಡುವುದಿಲ್ಲ. ಕೆಲವು ಕಡೆ ಪಂಪುಸೆಟ್ಟುಗಳನ್ನು ಮಾಡಿಕೊಂಡಿದ್ದಾರೆ. ಕಳೆದ ೨-೩ ವರ್ಷಗಳಿಂದ ಇದರ ಬಗ್ಗೆ ಸ್ವಲ್ಪಮಟ್ಟಿನ ಬಂದೋಬಸ್ತು ಆಗಿತ್ತು, ಈ ವಿಚಾರದಲ್ಲಿ ಬ್ಯಾಂಕಿನ ಅಧಿಕಾರಿಗಳನ್ನು ಕರೆಸಿ ಕೇಳಿದ್ದೇನೆ, ಕೊಟ್ಟಂತ ಹಣದ ವಿಚಾರದಲ್ಲಿ ಎಚ್ಚರಿಕೆಯಿಂದ ಗಮನಿಸತಕ್ಕದ್ದೆಂದು ಸೂಚನೆ ಕೊಟ್ಟಿದ್ದೇನೆ

ಶ್ರೀ ಜಿ, ಎಚ್. ಅಶ್ವಥ್ ರೆಡ್ಡಿ.—ಬಾವಿ ಸಾಲ ಕೊಟ್ಟಿದ್ದಾರೆ, ಪಂಪುಸೆಟ್ ಸಾಲ ಕೊಟ್ಟಿಲ್ಲ. ಡಿಫಾಲ್ಟರ್ ಲಿಸ್ಟ್‌ನಲ್ಲಿಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಬಾವಿ ಸಾಲ ಕೊಡುತ್ತಾರೆ ರಿಜರ್ವ್ ಬ್ಯಾಂಕ್ ಕಟ್ಟಪ್ಪಣೆ ಪ್ರಕಾರ ೬ ತಿಂಗಳೊಳಗೆ ಮುಗಿಸಬೇಕು, ಕನಿಷ್ಟ ಒಂದು ವರ್ಷದೊಳಗಾದರೂ ಮುಗಿಸಬೇಕು. ೨-೩ ವರ್ಷ ಇಟ್ಟುಕೊಂಡರೇ, ಬ್ಯಾಂಕೇ ಡಿಫಾಲ್ಟರ್ ಆಗುತ್ತದೆ, ಮುಂದಕ್ಕೆ ಹಣ ಸಿಗುವುದಿಲ್ಲ.

ಶ್ರೀ ಜಿ. ಹೆಚ್. ಅಶ್ವಥ್‌ರೆಡ್ಡಿ.—ಹಾಗಾದರೆ ಏನು ಮಾಡಬೇಕು?

ಶ್ರೀ ಆರ್. ಎಲ್ ಜಾಲಪ್ಪ.—ಸಾಲ ತೆಗೆದುಕೊಂಡವರು ಕಾಲಕ್ಕೆ ಸರಿಯಾಗಿ ಬಾವಿ ಮುಗಿಸಬೇಕು. ಈಗ ಬ್ಯಾಂಕ್ ಡಿಫಾಲ್ಟರ್ ಆದರೂ ಕೂಡ ಪಂಪುಸೆಟ್ಟುಗಳಿಗೆ ಸಾಲ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಮಾನ್ಯ ರಂಗನಾಥ್‌ರವರು ನಮ್ಮ ತಾಲ್ಲೂಕಿನ ಸಹಕಾರ ಸಂಘವನ್ನು ಪುನಃ ಜಿಲ್ಲಾ ಬ್ಯಾಂಕಿಗೆ ಕೊಡಬೇಕೆಂದು ಮಾಡಿರಲು ಕಾರಣವೇನು ಎಂದು ಕೇಳಿದರು. ಒಟ್ಟು ೯ ಸೊಸೈಟಿಗಳನ್ನು ಜಿಲ್ಲಾ ಬ್ಯಾಂಕಿಗೆ ಕೊಡಬೇಕೆಂದು ಅಪೆಕ್ಸ್ ಬ್ಯಾಂಕಿನಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆದರೆ ಇನ್ನೂ ಆಗಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಜಿಲ್ಲಾ ಬ್ಯಾಂಕು ಹಣ ಕೊಡುವ ಪರಿಸ್ಥಿತಿಯಲ್ಲಿ ಇದ್ದರೆ ನನ್ನ ಅಭ್ಯಂತರವಿಲ್ಲ. ಹಣ ಕೊಡದೆ ಇರುವ ಪರಿಸ್ಥಿತಿ ಇರುವುದರಿಂದ ಇಂಥದ್ದನ್ನು ಸೇರಿಸಬೇಡಿ, ತೊಂದರೆಯಾಗುತ್ತದೆಂದು ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಮೊದಲು ಅಂಡರ್‌ಸ್ಟ್ಯಾಂಡಿಂಗ್ ಇದ್ದುದ್ದು ಹಾಗೆಯೆ. ಯಾವ್ಯಾವ ಜಿಲ್ಲಾ ಬ್ಯಾಂಕುಗಳು ಹಣ ಕೊಡುವ ಪರಿಸ್ಥಿತಿಯಲ್ಲಿರಲಿಲ್ಲ ಅಂಥ ಕಡೆ ಕಮರ್ಷಿಯಲ್ ಬ್ಯಾಂಕಿಗೆ ಕೆಲವು ಸೊಸೈಟಿಗಳನ್ನು ಕೊಡಬೇಕು, ಜಿಲ್ಲಾ ಬ್ಯಾಂಕುಗಳು ಸುಸ್ಥಿತಿಗೆ ಬಂದಾಗ ವಾಪಸ್ಸು ಬರಬೇಕೆಂದು ಇತ್ತು: ಆ ಪ್ರಕಾರ ೩೨ ಸಹಕಾರ ಸಂಘಗಳನ್ನು ಬೇರೆ ಬ್ಯಾಂಕುಗಳಿಗೆ ಕೊಡಲಾಗಿದೆ. ಅದರಲ್ಲಿ ೯ ಸೊಸೈಟಿಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾಡಲಾಗಿದೆ. ಏಕೆಂದರೆ ಈಗ ಬ್ಯಾಂಕುಗಳಿಗೆ ಹಣ ಕೊಡುವ ಶಕ್ತಿ ಇದೆ ಎಂದು ನಾನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾಡಲಾಗಿದೆ. ಆ ಪ್ರಕಾರ ತುಮಕೂರಿನಲ್ಲಿ ೫, ಚಿಕ್ಕಮಗಳೂರಿನಲ್ಲಿ ೩ ಮತ್ತು ಬೆಂಗಳೂರಿನಲ್ಲಿ ಒಂದು ಸೊಸೈಟಿಯನ್ನು ವಾಪಸ್ಸು ತೆಗೆದುಕೊಂಡು ಜಿಲ್ಲಾ ಬ್ಯಾಂಕುಗಳಿಗೆ ಕೊಡಲಾಗುವುದು, ಕನಕಪುರದ ಎಲ್ಲ ಸೊಸೈಟಿಗಳನ್ನು ಅಪೆಕ್ಸ್ ಬ್ಯಾಂಕಿಗೆ ಕೊಡಬೇಕೆಂದು ಮಾಡಿದ್ದೇವೆ. ಎಲ್.ಎಸ್.ಸಿ.ಎಸ್. ಬಗ್ಗೆ ಏನು ಮಾಡಿದ್ದೇವೆಂದರೆ ಅದಕ್ಕೆ ಯಾವ ಬ್ಯಾಂಕು ಹಣ ಕೊಡುತ್ತದೋ ಅದನ್ನು ಅದೇ ಬ್ಯಾಂಕಿಗೆ ಕೊಡಬೇಕೆಂದು ಮಾಡಿದ್ದೇವೆ. ನಾವು ಏತಕ್ಕೆ ಸುಮ್ಮನೆ ಸಂಬಳ ಕೊಟ್ಟು ಕಳೆದುಕೊಳ್ಳಬೇಕೆಂದು ಜಿಲ್ಲಾ ಬ್ಯಾಂಕುಗಳಿಗೆ ಕೊಡುವುದಕ್ಕೆ ಯೋಜನೆ ಮಾಡಿದ್ದೇವೆ. ತಾವು ಹೇಳಿದ್ದರ ಬಗ್ಗೆ ಇನ್ನೊಂದು ಸಾರಿ ಡೀಟೇಲ್ಸ್ ತರಿಸಿ ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ. ನಾನು ಯಾವುದನ್ನು ಹೇಳಿ ಮಾಡಿಸಿದ್ದು ಅಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನೀವು ಹೇಳಿ ಮಾಡಿಸಿದಿರಿ ಅಂತ ಹೇಳಲಿಲ್ಲ. ಈ ರೀತಿ ತೀರ್ಮಾನ ತೆಗೆದುಕೊಂಡಿದ್ದಾರೆಂದು ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಪಿ.ಎಲ್.ಡಿ. ಬ್ಯಾಂಕಿನಲ್ಲಿ ೩೨ ಸಾವಿರ ಜನರಿಗೆ ಮಾತ್ರ ಸಾಲ ಕೊಟ್ಟಿದ್ದೀರೆಂದು ಹೇಳಿದರು. ತಮಗೆ ಗೊತ್ತಿದ್ದ ಹಾಗೆ ಕಳೆದ ಸಾರಿ ಅನ್‌ಎಲಿಜಬಲ್ ಆಗಿತ್ತು.

ಎಲ್ಲಿ ಯಾವ ಬ್ಯಾಂಕುಗಳಲ್ಲಿ ಎಲಿಜಿಬಿಲಿಟಿ ಇತ್ತು, ಯಾವ ರೈತನಿಗೆ ಬಾರೋಯಿಂಗ್ ಕೆಪಾಸಿಟಿ ಇತ್ತು ಅಂಥ ಅರ್ಜಿಗಳನ್ನು ವಾಪಸ್ಸು ಕಳುಹಿಸಿಲ್ಲ. ಅಂಥದ್ದು ಏನಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ.

ಶ್ರೀ ಕೆ.ಹೆಚ್. ರಂಗನಾಥ್.—ನನ್ನ ಉದ್ದೇಶವೇನೆಂದರೆ ೩೨ ಲಕ್ಷ ವ್ಯವಸಾಯ ಕುಟುಂಬಗಳನ್ನು ಅಳವಡಿಸಿಕೊಂಡು ಸಾಲ ಕೊಡಬೇಕೆಂಬುದು. ಅದು ಸಣ್ಣ ಪ್ರಮಾಣಕ್ಕೆ ಬಂದರೆ ಅವರೆಲ್ಲರಿಗೆ ಸಾಲ ಸಿಕ್ಕಬೇಕಾದರೆ ಇನ್ನು ಎಷ್ಟು ವರ್ಷಗಳು ಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ವಸೂಲಾತಿ ಕಾಲ ಜಾಸ್ತಿಯಾದರೆ ವಸೂಲಾತಿಯಾಗುವುದು ಕಡಿಮೆಯಾಗುತ್ತದೆ. ೧೦ ಲಕ್ಷ ವಸೂಲಾಗುತ್ತಿದ್ದ ಜಾಗದಲ್ಲಿ ೨೫–೩೦ ಲಕ್ಷ ರೂಪಾಯಿ ವಸೂಲಾದರೆ ರಿಕವರಿ ಪರ್ಸೆಂಟೇಜ್ ಜಾಸ್ತಿಯಾಗುತ್ತದೆ. ಆದರೆ ಬೆಳೆಯೇ ಇಲ್ಲದಿರತಕ್ಕ ಸಮಯದಲ್ಲಿ ವಸೂಲಾತಿ ಆಗುವುದಿಲ್ಲ. ಆಗ ತಕ್ಷಣ ರಿಕವರಿ ಪರ್ಸೆಂಟೇಜ್ ಬೀಳುತ್ತದೆ. ಇದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಆರ್.ಎಲ್ ಜಾಲಪ್ಪ.—ಲಾಂಗ್ ಟರ್ಮ್ ಲೋನ್ ಬಗ್ಗೆ ಹೇಳುವುದಾದರೆ, ಎಲಿಜಿಬಿಲಿಟಿ ಇರುವ ಕಡೆ ಪ್ರಚಾರ ಪತ್ರಿಕೆ ಹೊರಡಿಸಿದ್ದಾರೆ. ವರ್ಷಕ್ಕೆ ೩೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೋದ ವರ್ಷ ಮಾತ್ರ ಕೇಳಿದ್ದರು. ಆಚೆ ವರ್ಷದ ಹಣವನ್ನು ಹಾಗೇ ಇಟ್ಟಿದ್ದಾರೆ, ಅಷ್ಟು ಹಣ ಖರ್ಚಾಗಿಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಹಣ ಇದ್ದದ್ದು ೩೦ ಕೋಟಿ, ಅದರಲ್ಲಿ ೨೨ ಕೋಟಿ ರೂಪಾಯಿ ಹೋದ ವರ್ಷ ಖರ್ಚಾಗಿದೆ. ಅದರ ಹಿಂದಿನ ವರ್ಷ ೧೨ ಕೋಟಿ ರೂಪಾಯಿ ಆಗಿದೆ. ಹಣಕ್ಕೆ ಯಾವುದೇ ಕೊರತೆ ಇಲ್ಲ. ಹೆಚ್ಚು ಹೆಚ್ಚಾಗಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ಆಸೆ ನಮಗೆ ಇದೆ. ಷಾರ್ಟ್ ಟರ್ಮ್ ಲೋನ್‌ನ್ನು ೨೨ ಪರ್ಸೆಂಟ್ ಜನರಿಗೆ ಮತ್ತು ಲಾಂಗ್ ಟರ್ಮ್ ಲೋನ್‌ನ್ನು ೧೧ ಪರ್ಸೆಂಟ್ ಜನರಿಗೆ ಕೊಟ್ಟಿದ್ದೇವೆ. ನಾವು ಇನ್ನೂ ಹೆಚ್ಚು ಜನರಿಗೆ ಕೊಡಬೇಕೆಂದು ಮಾಡಿದ್ದೇವೆ. ಅದಕ್ಕೆ ತಮ್ಮ ಸಹಕಾರವನ್ನು ಕೋರುತ್ತೇವೆ. ಇನ್ನೊಂದು ಮಾತನ್ನು ರಂಗನಾಥ್‌ರವರು ಹೇಳಿದರು, ಸಹಕಾರ ಸಂಘಗಳಲ್ಲಿ ಹೆಗ್ಗಣಗಳು ಜಾಸ್ತಿಯಾಗಿವೆ, ಹಾವು ಸುತ್ತಿಕೊಂಡ ಹಾಗೆ ಸುತ್ತಿಕೊಂಡಿವೆ ಎಂದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ೨ ಲಕ್ಷ ಜನ ನಾನ್ ಅಫಿಷಿಯಲ್ಸ್ ಏನಿದ್ದಾರೆ ಅವರೆಲ್ಲರೂ ಹೆಗ್ಗಣಗಳು ಅಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಎಲ್ಲರೂ ಹೆಗ್ಗಣಗಳು ಆಗಿದ್ದರೆ ನಿಮ್ಮ ತಾಲ್ಲೂಕು ಉಳಿಯುತ್ತಿತ್ತೆ ?

ಶ್ರೀ ಆರ್. ಎಲ್. ಜಾಲಪ್ಪ.—ಇಲ್ಲ. ಬಹಳಷ್ಟು ಕಡೆ ಉತ್ತಮವಾಗಿ ಕೆಲಸ ನಡೆದಿದೆ. ೨೪೮ ಕೋಟಿ ರೂಪಾಯಿ ಲಾಂಗ್ ಟರ್ಮ್ ಲೋನ್ ಕೊಟ್ಟಿದ್ದಾರೆ. ಅದರಲ್ಲಿ ೭೫ ಪರ್ಸೆಂಟ್ ಪ್ರಯೋಜನವಾಗಿದೆ. ಅದರಿಂದ ವರ್ಷಕ್ಕೆ ೧೦೦ ಕೋಟಿ ರೂಪಾಯಿ ಲಾಭವಿದೆ. ಯಾವ ಕಮರ್ಷಿಯಲ್ ಬ್ಯಾಂಕುಗಳು ಇಷ್ಟೊಂದು ಹಣವನ್ನು ಕೊಡುವುದಕ್ಕೆ ಸಾಧ್ಯ ? ಇದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಇದೆ, ಇಲ್ಲವೆಂದು ಅಲ್ಲ. ೧೫೪೮ ಕೋಟಿ ರೂಪಾಯಿ ಪೇರು ಬಂಡವಾಳದಲ್ಲಿ ೩ ಕೋಟಿ ೮೦ ಲಕ್ಷ ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಇದರ ಪರ್ಸೆಂಟೇಜನ್ನು ಲೆಕ್ಕ ಹಾಕಿದಾಗ ೦.೨೬ ಪರ್ಸೆಂಟ್ ಬರುತ್ತದೆ. ೩ ಕೋಟಿ ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ಅಂಥ ಹೆಚ್ಚೇನಲ್ಲವೆಂದು ಅನೇಕ ಸದಸ್ಯರು ಹೇಳಿದರು. ನಮ್ಮ ವರ್ಕಿಂಗ್ ಕ್ಯಾಪಿಟಲ್‌ಗೆ ಹೋಲಿಕೆ ಮಾಡಿದಾಗ ಇದೇನು ಅಷ್ಟು ದೊಡ್ಡದಲ್ಲ. ನಮ್ಮಲ್ಲಿ ೧೬೭೦ ಕೋಟಿ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಇರುವಾಗ ಬಹಳಷ್ಟು ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿದ್ದರೂ ಅದನ್ನು ಯಾರೂ ತೋರಿಸಿಸುವುದಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದರಲ್ಲಿ ಗಿದ್ದರೆ ಅದನ್ನು ತೋರಿಸುತ್ತಾರೆ. ಅದಕ್ಕೆ ಇಲ್ಲದ ಬಣ್ಣ ಕಟ್ಟುತ್ತಾರೆ. ದುರುಪಯೋಗವನ್ನು ಜಸ್ಟಿಫೈ ಮಾಡುತ್ತೇವೆಂದು ಅಲ್ಲ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಯೋಚನೆ ಮಾಡಿದ್ದೇವೆ. ಆ ಪ್ರಕಾರ ಕ್ರಮ ಕೈಗೊಳ್ಳುತ್ತೇನೆಂದು ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಹಿಂದಿನ ಸಹಕಾರ ಸಚಿವರಿದ್ದಾರೆ ಗುಯಿಲಾಳ, ಹರಪ್ಪೆ ಮತ್ತು ಹಾರನಕಟ್ಟೆ ಎಂಬ ೩ ಸಹಕಾರ ಸಂಘಗಳಲ್ಲಿ ಸಾವಿರಾರು ರೂಪಾಯಿ ಹಣ ದುರುಪಯೋಗವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್.—ನಾನು ವಸೂಲ್ಮಾಡಬೇಡಿ ಎಂದು ಹೇಳಿದ್ದೇನೆಯೆ ?

ಶ್ರೀ ಆರ್.ಎಲ್. ಜಾಲಪ್ಪ.—ನೀವು ಖಂಡಿತ ಆ ರೀತಿ ಹೇಳುವವರಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ವಸೂಲ್ಮಾಡಿ, ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ನೀವು ಯಾವತ್ತೂ ಇಂಟರ್‌ಫಿಯರ್ ಆಗಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹೆಗ್ಗಣಗಳು ಏನಿವೆ ಇವು ನಮ್ಮ ನಿಮ್ಮ ಮನೆಯಲ್ಲಿ ಇಲ್ಲ. ಫಲವತ್ತಾಗಿರುವ ಕಡೆ ಇವೆ. ಅವನ್ನು ಎರಾಡಿಕೇಟ್ ಮಾಡೋಣ.

ಶ್ರೀ ಕೆ.ಹೆಚ್. ರಂಗನಾಥ್.—ಕೃಷಿ ಮಂತ್ರಿಗಳು ಪಕ್ಕದಲ್ಲಿದ್ದಾರೆ ಕೇಳಿ, ಗುಯಿಲಾಳ ಅವರ ಕ್ಷೇತ್ರಕ್ಕೆ ಬರುತ್ತದೆ. ಹರಪ್ಪೆ ಆಂಧ್ರದ ಬಾರ್ಡರ್‌ನಲ್ಲಿ ಬರತಕ್ಕದ್ದು. ಅಲ್ಲಿ ಮಳೆ ಬಿದ್ದಿರುವುದನ್ನು ನೋಡಿದರೆ ಏನು ಪರಿಸ್ಥಿತಿ ಇದೆ ಎಂಬುದನ್ನು ನೋಡಬಹುದು. ಹಣ ದುರುಪಯೋಗವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಿ.

ಶ್ರೀ ಬಿ.ಎಲ್. ಗೌಡ.—ಹಣ ದುರುಪಯೋಗವಾಗುವುದಕ್ಕೂ ಮಳೆ ಬಾರದೆ ಇರುವುದಕ್ಕೂ ಸಂಬಂಧವಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹಣ ತಿಂದಿರುವುದು ಹೆಗ್ಗಣ ಅಲ್ಲ. ಪಾವಗಡದ **ತೋ**ಳ.

ಶ್ರೀ ಆರ್.ಎಲ್. ಜಾಲಪ್ಪ.—೧೦–೨೦ ಲಕ್ಷ ತಿಂದಿರುವುವು ತೋಳಗಳು, ೫೦೦–೧೦೦೦ ತಿಂದಿರುವುವು ಹೆಗ್ಗಣಗಳು. ಶಿರ್ತಾಡಿ ಸೊಸೈಟಿ ೧೫ ಲಕ್ಷ ರೂಪಾಯಿಗಳನ್ನು......

ಶ್ರೀ ಪಿ. ರಾಮದೇವ್.—ತೋಳದ ವ್ಯಾಪ್ತಿಯಲ್ಲಿ ಅವರೂ ಬರುತ್ತಾರಾ?

ಶ್ರೀ ಮುತ್ತಿನಪೆಂಡಿಮಠ.—ನಾನು ಯಾವ ಸಹಕಾರ ಸಂಘದಲ್ಲೂ ಇಲ್ಲ.

ಶ್ರೀ ಆರ್.ಎಲ್, ಜಾಲಪ್ಪ.—ಶಿರ್ತಾಡಿ ಸೊಸೈಟಿಯಲ್ಲಿ ೫ ವರ್ಷದ ಹಿಂದೆ ೧೫ ಲಕ್ಷ ರೂಪಾಯಿ ದುರುಪಯೋಗ ಆಗಿದೆ; ಪುಸ್ತಕಗಳನ್ನು ಸುಟ್ಟು ಹಾಕಿದ್ದಾರೆ. ಈ ವಿಷಯವನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದಾರೆ. ನಾನು ದಕ್ಷಿಣ ಕನ್ನಡ ಬ್ಯಾಂಕಿನ ಅಧ್ಯಕ್ಷರನ್ನು ಕರೆಸಿಕೊಂಡು ಮಾತನಾಡಿದೆ. ಅವರು ಸಿ.ಓ.ಡಿ. ಯಿಂದ ವರದಿ ಇನ್ನೂ ಬಂದಿಲ್ಲ ಎಂದು ಹೇಳಿದರು. ಪುಸ್ತಕಗಳನ್ನು ಸುಡುವುದು ಸರ್ವೇಸಾಮಾನ್ಯ.

ಒಬ್ಬ ಮಾನ್ಯ ಸದಸ್ಯರು —ಈ ತೋಳಗಳನ್ನು ಹಿಡಿಯುವುದಕ್ಕೆ ಹೆಲಿಕ್ಯಾಪ್ಟರ್ ಉಪಯೋಗಿಸುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ.—ಉಪಯೋಗ ಮಾಡಬೇಕಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಅಂಥವರನ್ನು ಜೈಲಿಗೆ ಹಾಕುವುದಕ್ಕೆ ಕಾನೂನು ತೆಗೆದುಕೊಂಡು ಬನ್ನಿ. ನಾವೆಲ್ಲಾ ಬೆಂಬಲ ಕೊಡುತ್ತೇವೆ. ದುಡ್ಡು ತಿಂದವನು ಯಾರೇ ಆಗಿರಲಿ ಅವನಿಗೆ ಕಠಿಣ ಶಿಕ್ಷೆ ಕೊಡಿ. ಅಂಥ ಕಾನೂನು ತೆಗೆದುಕೊಂಡು ಬನ್ನಿ.

ಶ್ರೀ ಪಿ. ರಾಮದೇವ್.—ತಾವು ಆತ್ಮಸಾಕ್ಷಿಯಾಗಿ ಈ ಮಾತನ್ನು ಹೇಳುತ್ತಿದ್ದೀರಾ?

ಶ್ರೀ ಎನ್.ಜಿ. ನಾಯಕ್.—ಎರಡು ಕಾಲಿನ ತೋಳಗಳು ಚಿತ್ರದುರ್ಗಕ್ಕೆ ಬಂದಿವೆ. ಅದನ್ನು ತಡೆಗಟ್ಟಿ.

ಶ್ರೀ ಆರ್.ಎಲ್. ಜಾಲಪ್ಪ.—ಕೇಳಿದಾಗ ಯಾರು ಪುಸ್ತಕಗಳನ್ನು ಕೊಡುವುದಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಿದ್ದುಪಡಿ ತರುತ್ತಿದ್ದೇವೆ. ಮಾನ್ಯ ನಾರಾಯಣ ಗೌಡರು ಇದನ್ನು ಸ್ಕ್ರ್ಯಾಪ್ ಮಾಡಿ ಎಂದು ಹೇಳಿದರು. ಕಾಮನ್ ಕೇಡರ್ ಅಥಾರಿಟಿ ಮಾಡಿದ್ದು ಮಾನ್ಯ ರಂಗನಾಥ್ ಅವರ ಕಾಲದಲ್ಲಿ. ಅದಕ್ಕೆ ನಾನು ಸಹಭಾಗಿ. ಅದನ್ನು ಮಾಡಿದ ಮೇಲೆ ಒಂದು ವರ್ಷದ ಅನುಭವದ ಮೇಲೆ ಸ್ಕ್ರ್ಯಾಪ್ ಮಾಡಿ ಎಂದು ನಾನೂ ಹೇಳಿದ್ದೆ. ಅಲ್ಲಿ ಅಧ್ಯಕ್ಷರು ಚೆಕ್ ಕೂಡ ಕೊಡುವುದಿಲ್ಲ; ಇಂಥವರಿಗೆ ಸಾಲ ಕೊಡಬಹುದು ಎಂದು ಶಿಫಾರಸು ಮಾಡುವುದಷ್ಟೆ ಅವನ ಕೆಲಸ.

ಸ್ಟಾಫ್ ಮೇಲೆ ಅವರ ಅಧಿಕಾರ ಏನೂ ಇಲ್ಲ. ಕಾರ್ಯದರ್ಶಿ ಮೇಲೆ, ಸೂಪರ್‌ವೈಸರ್ಸ್ ಮೇಲೆ ಏನೂ ಅಧಿಕಾರ ನಡೆಸುವ ಹಾಗಿಲ್ಲ. ಎಲ್ಲಾ ಸೆಂಟ್ರಲೈಸ್ ಆಗಿದೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಮ್ಯಾನೇಜರ್ ಅದಕ್ಕೆ ಕಾರ್ಯದರ್ಶಿ; ರಿಜಿಸ್ಟ್ರಾರ್ ಚೇರ್ಮನ್. ೧೬೦೦–೧೭೦೦ ಜನರನ್ನು ಇವರು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಸುಮ್ಮನೆ ಪ್ರಜಾಪ್ರಭುತ್ವ, ಪ್ರಜಾತಂತ್ರದ ಬಗ್ಗೆ ಎಲ್ಲರೂ ಮಾತನಾಡುತ್ತೇವೆ. ಚುನಾವಣೆಯಲ್ಲಿ ಗೆದ್ದು ಬರತಕ್ಕವರಿಗೆ ಅಧಿಕಾರ ಇರಬೇಕೋ ಬೇಡವೋ? ಒಬ್ಬ ಗುಮಾಸ್ತನನ್ನು ಅಥವಾ ಜವಾನನನ್ನು ಸಸ್ಪೆಂಡ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದರೆ ಇದೆಂಥ ಪ್ರಜಾಪ್ರಭುತ್ವ. ಅಕ್ಟೋಬರ್ ತಿಂಗಳಲ್ಲಿ ಎಲ್ಲ ಅಧ್ಯಕ್ಷರುಗಳ ಸಭೆ ಕರೆದು ಅವರ ಅಭಿಪ್ರಾಯ ಕಾಮನ್ ಕೇಡರ್ ಅಥಾರಿಟಿ ಬಗ್ಗೆ ಏನು, ಆಗಿರಬೇಕೇ ಬೇಡವೇ ಎಂಬುದನ್ನು ತಿಳಿದು ಕೊಂಡು ಇರಬೇಕು ಎಂದರೆ ಯಾವರೀತಿ ಇರಬೇಕು, ಬೇಡ ಎಂದರೆ ಯಾವರೀತಿ ಹೋಗಬೇಕು ಎಂಬ ಬಗ್ಗೆ ತಿಳಿದುಕೊಳ್ಳಬೇಕೆಂದಿದ್ದೇನೆ.

ಶ್ರೀ ಕೆ.ಎಚ್. ರಂಗನಾಥ್.—ಇದರ ಬಗ್ಗೆ ಸರ್ಕಾರದ ನಿಲುವೇನು? ವಿದ್ಯಾವಂತ ಜನಶಕ್ತಿ ಯನ್ನು ಯಾವರೀತಿ ಬಳಸಿಕೊಳ್ಳಬೇಕು, ಅವರಿಗೆ ಸೆಕ್ಯೂರಿಟಿ ಏನಿರಬೇಕು, ಅವರ ನೇಮಕಾತಿ, ಬಡ್ತಿ ಇದರ ಬಗ್ಗೆ ಎಲ್ಲಾ ಯೋಚನೆ ಮಾಡುವುದಿಲ್ಲವೆ? ಅಧ್ಯಕ್ಷರುಗಳನ್ನು ಕರೆದು ಕೇಳುವುದಲ್ಲ, ತಾವು ಸರ್ಕಾರದವರು ನೀತಿ ಹಾಕಿಕೊಳ್ಳಬೇಕು. ಸೇವಾ ನಿಯಮಾವಳಿಗಳೇ ಬೇಡ ಎಂದರೆ ಆ ಮಾತು ಬೇರೆ. ಹಿಂದಿನ ಕಾಲದಲ್ಲಿ ಗುಮಾಸ್ತರಿಗೆ ೧೦೦ ರೂಪಾಯಿ ಕೊಡುತ್ತಿದ್ದರು. ಅದೇ ಈಗಲೂ ಇರಬೇಕಾ? ಸರ್ಕಾರ ವಿಚಾರ ಮಾಡಬೇಕು. ೧೦೦ ರೂಪಾಯಿಗಳಲ್ಲಿ ಜೀವನ ಮಾಡು ವುದಕ್ಕೆ ಸಾಧ್ಯವೆ? ಆದ್ದರಿಂದ ಸರ್ಕಾರದ ನಿಲುವು ಏನು ಎಂಬುದು ಗೊತ್ತಾಗಬೇಕು. ದಿವಂಗತ ದೇವರಾಜ ಅರಸ್ ಅವರ ಹೆಸರನ್ನು ಎಲ್ಲರೂ ಹೇಳುತ್ತಿದ್ದೇವೆ. ಅವರು ಇದರ ಬಗ್ಗೆ ಯೋಚನೆ ಮಾಡಿದ್ದರು. ಅಧ್ಯಕ್ಷರುಗಳನ್ನು ಕರೆದು ಕೇಳುವುದಕ್ಕಿಂತ ಮೊದಲು ಸರ್ಕಾರದ ನಿಲುವು ಏನು ಎಂಬುದು ಸ್ಪಷ್ಟವಾಗಬೇಕು. ಅಧ್ಯಕ್ಷರಿಗೂ ಹತೋಟಿ ಇರುವಂತೆ ವ್ಯವಸ್ಥೆ ಇರಬೇಕು. ಅಪೆಕ್ಸ್ ಬ್ಯಾಂಕಿನಲ್ಲಿ ಅಡಿಷನಲ್ ರಿಜಿಸ್ಟ್ರಾರ್ ಹುದ್ದೆಯಲ್ಲಿರುವವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುತ್ತಾರೆ. ಅವರನ್ನು ವಾಪಸ್ ಕಳುಹಿಸುತ್ತೀರಾ? ಎಷ್ಟೋ ಜಿಲ್ಲಾ ಬ್ಯಾಂಕುಗಳು, ಕನ್‌ಸ್ಯೂಮರ್ಸ್ ಫೆಡರೇಷನ್‌ಗಳು ಮುಂತಾದ ಕಡೆಗಳಲ್ಲಿ ಬೇರೆ ಬೇರೆ ಅಧಿಕಾರಿಗಳಿದ್ದಾರೆ. ಅವರ ಮೇಲೆ ಹಿಡಿತ ಇಲ್ಲ ಎಂದು ಬಿಟ್ಟುಬಿಡುವುದಕ್ಕಾಗುತ್ತದೆಯೇ? ಇದನ್ನೆಲ್ಲಾ ವ್ಯವಸ್ಥಿತವಾಗಿ ವಿಚಾರ ಮಾಡಿ. ಅಧ್ಯಕ್ಷರುಗಳು ಬೇಡ ಎಂದರೆ ಅದನ್ನು ವಿಚಾರ ಮಾಡುತ್ತೇವೆ ಎಂದು ಹೇಳುವುದು ಸರ್ಕಾರದ ನಿಲುವಲ್ಲ. ಯಾವುದಾದರೂ ಒಂದು ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇವತ್ತಿನ ದಿವಸ ರಾಜ್ಯದಲ್ಲಿ ವಿದ್ಯಾವಂತ ಜನಶಕ್ತಿಯನ್ನು ಬಳಸಿಕೊಳ್ಳುವುದರ ಬಗ್ಗೆ ವ್ಯವಸ್ಥಿತವಾದ, ಶಾಸ್ತ್ರೀಯ ವಾದ ನಿಲುವೇನು?

ಶ್ರೀ ಆರ್.ಎಲ್. ಜಾಲಪ್ಪ.—ಕಾಮನ್ ಕೇಡರ್ ಅಥಾರಿಟಿ ಬೇಡ ಎಂದರೆ ಅಲ್ಲಿರತಕ್ಕ ನೌಕರರು ಮನೆಗೆ ಹೋಗುವುದಿಲ್ಲ. ಎಲ್ಲಾ ಇರುತ್ತಾರೆ. ನಮ್ಮ ಆಲೋಚನೆ ಏನಿದೆ ಎಂಬುದನ್ನು ತಮ್ಮ ಮುಂದೆ ಇಟ್ಟೆ. ಯಾರೂ ಸಂಬಳ ಇಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರಿಗೂ ಹೊಟ್ಟೆ ಇದೆ. ಹೊಟ್ಟೆ ತುಂಬ ಊಟ ಕೊಡಬೇಕು. ಆದರೆ ಎಷ್ಟರ ಮಟ್ಟಿಗೆ ಪ್ರಾಥಮಿಕ ಸಹಕಾರ ಸಂಘಗಳಿಗೆ ಹಣ ಕೊಡುವುದಕ್ಕೆ ಶಕ್ತಿ ಇದೆ ಎಂಬುದನ್ನು ನೋಡಬೇಕು. ಸಂಬಳ ಜಾಸ್ತಿ ಮಾಡೋಣ ಐದು ಸಾವಿರ ಬೇಕಾದರೆ ಕೊಡೋಣ. ಆದರೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಎಷ್ಟರ ಮಟ್ಟಿಗೆ ಶಕ್ತಿ ಇದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಶಕ್ತಿ ಬರುವಂತೆ ಕೆಲಸ ಮಾಡುವುದಕ್ಕೆ ಆ ಇಲಾಖೆಯಲ್ಲಿ ಜವಾಬ್ದಾರಿ ಹೊರಬೇಕಾಗುತ್ತದೆ. ಇಲಾಖೆಯವರು ಅದನ್ನು ನೋಡಬೇಕು.

ಶ್ರೀ ಆರ್.ಎಲ್. ಜಾಲಪ್ಪ.—ಅವು ಸ್ವತಂತ್ರ ಸಂಸ್ಥೆಗಳು.

ಶ್ರೀ ಕೆ.ಹೆಚ್. ರಂಗನಾಥ್.—ಹಾಗಾದರೆ ಸ್ಕ್ರ್ಯಾಪ್ ಮಾಡಿ. ನಿರ್ವಹಣೆ ಮಾಡುವುದಕ್ಕೆ ಶಕ್ತಿ ಇಲ್ಲ ಎಂದರೆ ಈ ಕಾನೂನು ಅನಾವಶ್ಯಕ. ಸೊಸೈಟಿಯವರೇ ಒಂದೊಂದು ಕಾನೂನು ಮಾಡಿ ಕೊಳ್ಳಲಿ. ಇದಕ್ಕೆ ಕಾನೂನು ಏತಕ್ಕೆ? ಇಲಾಖೆ ಏತಕ್ಕೆ? ಇಷ್ಟೊಂದು ಅಧಿಕಾರವರ್ಗ ಏತಕ್ಕೆ? ಇದು ಮೂಲಭೂತವಾದ ಪ್ರಶ್ನೆ.

ಶ್ರೀ ಆರ್.ಎಲ್. ಜಾಲಪ್ಪ.—ತೂಕ ಮತ್ತು ಅಳತೆ ಇಲಾಖೆ ಬಗ್ಗೆ ಹೇಳಿದರು. ಅವರು ಸಂತೆಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆ, ಬೇರೆ ಸಮಯದಲ್ಲಿ ಬೇರೆ ಕಡೆ ಕಾಣಿಸುವುದಿಲ್ಲ ಎಂದು ಹೇಳಿದರು. ಇಲಾಖೆಯಲ್ಲಿ ಸಿಬ್ಬಂದಿ ಕಡಿಮೆ. ಇದು ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ.

ಶ್ರೀ ನಾರಾಯಣಗೌಡ ಹೆಚ್.ಎ.—ಇರುವ ಸಿಬ್ಬಂದಿ ಕೂಡ ಕೆಲಸ ಮಾಡುತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಮಾಡುತ್ತಿದ್ದಾರೆ. ಅವರು ೧೯೮೧–೮೨ರಲ್ಲಿ ೧೦,೪೭೭ ಕೇಸ್ ಗಳನ್ನು ಹಾಕಿದ್ದಾರೆ. ೧೯೮೨–೮೩ರಲ್ಲಿ ೧೧,೩೦೯ ಕೇಸ್ ಬುಕ್ ಮಾಡಿದ್ದಾರೆ. ೧೯೮೩ ಜನವರಿಯಿಂದ ಜುಲೈ ೩೧ರವರೆಗೆ ೬,೮೮೨ ಕೇಸ್ ಬುಕ್ ಮಾಡಿದ್ದಾರೆ. ೨೨,೭೮,೬೨೨ ರೂಪಾಯಿ ಫೀಸ್ ಕಲೆಕ್ಟ್ ಮಾಡಿದ್ದಾರೆ. ೫೭,೪೫೯ ರೂಪಾಯಿ ಜುಲ್ಮಾನೆ ಕಲೆಕ್ಟ್ ಮಾಡಿದ್ದಾರೆ. ಇನ್ನೂ ಕೇಸು ಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ. ನಾರಾಯಣಗೌಡರು ಪ್ರಗತಿ ಬಗ್ಗೆ ಮಾತನಾಡುತ್ತಾ ನಾಚಿಕೆ ಪಡಬೇಕಾದ ವಿಷಯ ಎಂದು ಹೇಳಿದರು. ಈಗಾಗಲೇ ನಾನು ಅರಿಕೆ ಮಾಡಿಕೊಂಡಿದ್ದೇನೆ, ಇದು ನಾಚಿಕೆ ಪಡಬೇಕಾದ ವಿಷಯವಲ್ಲ. ಆಗಬೇಕಾದಷ್ಟು ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸಹಕಾರಿ ತತ್ವವನ್ನು ಪೂರ್ಣವಾಗಿ ನಾನು ಅರ್ಥಮಾಡಿಕೊಂಡಿಲ್ಲ. ಜನಗಳಿಗೂ ಹೇಳಿಲ್ಲ, ನಾವೂ ಆಚರಣೆಗೆ ತಂದಿಲ್ಲ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರಗತಿಯಾಗಿದೆ. ಅರ್ಬನ್ ಬ್ಯಾಂಕು ಗಳಲ್ಲಿ ನಾವು ಮೂರನೇ ಸ್ಥಾನದಲ್ಲಿದ್ದೇವೆ. ಗುಜರಾತ್ ಮೊದಲು, ಮಹಾರಾಷ್ಟ್ರ ಎರಡನೆಯದು. ಮೂರನೆಯದು ಕರ್ನಾಟಕ. ಪೂರ್ತಿ ಮುಳುಗಿ ಹೋಗಿದೆ ಎಂದು ಹೇಳುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ವ್ಯಾಪಾರಸ್ಥರು ಬಹಳ ಚೆನ್ನಾಗಿ ಮ್ಯಾನೇಜ್ ಮಾಡುತ್ತಾರೆ. ಹುಷಾರಾಗಿ ಮಾಡುತ್ತಾರೆ. ಇದಕ್ಕೂ ಬೇರೆ ಬ್ಯಾಂಕಿಗೂ ವ್ಯತ್ಯಾಸ ಏನೆಂದರೆ ಇದರಲ್ಲಿ ಸದಸ್ಯರೂ ಅವರೇ, ಹಣ ಬಳಸುವವರೂ ಅವರೇ. ಬಾಕಿ ಕಡೆ ಹಾಗೆ ಆಗುತ್ತಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಸಿ.ಇ.ಒ. ಡ್ಯುಯಲ್ ಕಂಟ್ರೋಲ್ ಎಂದು ಹೇಳುತ್ತಾರೆ. ಕೋ–ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್ ತಾಲ್ಲೂಕ್ ಬೋರ್ಡಿನಲ್ಲಿ ಇರುತ್ತಾರೆ. ಅವರು ಸಂಘಗಳನ್ನು ನೋಡುತ್ತಿಲ್ಲ, ಆದ್ದರಿಂದ ಕೆಳಮಟ್ಟದ ಅಧಿಕಾರಿಗಳನ್ನು ಜಾಸ್ತಿ ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ನಾಲ್ಕೈದು ತಾಲ್ಲೂಕುಗಳನ್ನು ಕೊಟ್ಟಿದ್ದೇವೆ. ಒಂದು ಜೀಪ್ ಕೊಟ್ಟಿದ್ದೇವೆ. ಕೆಲವರಿಗೆ ಜೀಪೂ ಇಲ್ಲ. ಇರು ವುದರಲ್ಲಿ ಅರ್ಧ ಕೆಟ್ಟು ಹೋಗಿದೆ ಅರ್ಧ ಸರಿಯಾಗಿವೆ. ಇದಕ್ಕೆ ನಾನಾ ಯೋಜನೆ ಇದೆ. ಸಹೋದ್ಯೋಗಿಗಳ ಹತ್ತಿರ ಚರ್ಚೆ ಮಾಡಬೇಕಾಗಿದೆ.

ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟಿರುವ ಒಬ್ಬ ಸಿ. ಇ. ಒ. ರವರನ್ನು ವಾಪಸ್ ತೆಗೆದುಕೊಂಡು ಒಂದು ತಾಲ್ಲೂಕಿಗೆ ಒಬ್ಬ ಸಿ.ಇ.ಒ ಹಾಗೂ ೨ ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನೂ ಮಾಡಿ if, within 6 months of the date of commission of this crime, it is not brought to book, the b th the CEO and also the Asst. Registrar of Co-operative Societies should be made responsible and they should be punished. This is my thinking and I am doing some exercise on it. ನಾನು ಅಧಿಕಾರ ವರ್ಗದವರ ಜೊತೆ ಮಾತನಾಡಿದ್ದೇನೆ. ಸಹೋದ್ಯೋಗಿಗಳ ಜೊತೆ ಮಾತನಾಡಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಕೋ–ಆಪರೇಟೀವ್ ಟ್ರಿಬ್ಯೂನಲ್ಸ್ ಬಗ್ಗೆ ಮಾನ್ಯ ನಾರಾಯಣಗೌಡ ಅವರು ಹೇಳಿದರು. ಈ ಬಗ್ಗೆ ಕೆ. ಎಚ್. ಪಾಟೀಲರು ಏನು ರೆಕಮಂಡೇಷನ್ ಮಾಡಿದ್ದಾರೆ ಅದು ಏನಾಯಿತು ಎಂದು ಕೇಳಿದರು. ಅದನ್ನು ಈ ಅಧಿವೇಶನದಲ್ಲಿಯೇ ತರಬೇಕೆಂದು ಮಾಡಿದ್ದೆವು. ಆದರೆ ಅದರಲ್ಲಿ ಕೆಲವನ್ನು ಮಾತ್ರ ತೆಗೆದು ಕೊಂಡು ಮಾಡುತ್ತಿದ್ದೇವೆ. ಇದನ್ನು ತ್ವರಿತವಾಗಿ ತಂದು ಪಾಸ್ ಮಾಡುವ ಮೊದಲು ಇದಕ್ಕೆ ರಾಷ್ಟ್ರಪತಿಗಳ ಸಹಿ ಬೇಕಾಗುತ್ತದೆ. ಇದೆಲ್ಲಾ ಇರುವುದರಿಂದ ವಿಳಂಬ ಆಗಬಹುದು ಎಂದು ಇದನ್ನು ಇನ್ನೊಂದು ಸಾರಿ ತಂದು ಧೀರ್ಘ ಚರ್ಚೆ ಮಾಡೋಣವೆಂದು ನಿಧಾನ ಮಾಡಿದ್ದೇವೆ. ನಂತರ ಇದೇ ಸದಸ್ಯರು ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಅಲ್ಪಾವಧಿ ಸಾಲವನ್ನು ಕೊಡಬೇಕೆಂದು ಹೇಳಿದರು. ಈಗ ಅದಕ್ಕೂ ಅಮೆಂಡ್‌ಮೆಂಟನ್ನು ತರುತ್ತಿದ್ದೇವೆ. ಭೂ ಅಭಿವೃದ್ಧಿ ಬ್ಯಾಂಕ್‌ನವರು ಯಾರಿಗೆ ಈಗ ಸಾಲವನ್ನು ಕೊಟ್ಟಿದ್ದಾರೆ ಅವರಿಗೆ ಸಾಧ್ಯವಾದರೆ ಅಲ್ಪಾವಧಿ ಸಾಲವನ್ನು ಒದಗಿಸಬೇಕೆಂಬ

ಅಂಶವನ್ನು ಸಹಕಾರಿ ತಿದ್ದುಪಡಿಯಲ್ಲಿ ಅಳವಡಿಸುತ್ತಿದ್ದೇವೆ. ಇನ್ನು ಸದಸ್ಯರು ಜನತಾ ಬಜಾರ್ ತಾಲ್ಲೂಕು ಸೊಸೈಟಿಗಳ ಬಗ್ಗೆ ಹೇಳಿದ್ದಾರೆ. ಇವೆಲ್ಲಾ ಬಹಳ ಜಜ್ಜಿಹೋಗಿವೆ. ಇವನ್ನು ರಿಪೇರಿ ಮಾಡಬೇಕಾದರೆ ಮೇಜರ್ ಆಪರೇಷನ್ ಆಗಬೇಕು. ಇದು ಒಂದು ರೀತಿಯ ಕ್ಯಾನ್ಸರ್. ಇದು ಥರ್ಡ್ ಸ್ಟೇಜ್‌ಗೆ ಹೋಗಿದೆ. ಫಸ್ಟ್ ಸ್ಟೇಜ್ ಅಲ್ಲ. ಇವುಗಳಿಂದ ಹಿಂಸೆ ಪಡುವ ಬದಲು ಇವನ್ನು ಲಿಕ್ವಿಡೇಟ್ ಮಾಡುವುದೇ ಮೇಲು. ಈ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಏನೇ ಆಗಲೀ ಇವುಗಳನ್ನು ಉಪಯೋಗಿಸಿಕೊಂಡು ಗ್ರಾಹಕರಿಗೆ ಉಪಕರಣಗಳನ್ನು ಒದಗಿಸಬಹುದಾಗಿದೆ. When compared to private agencies, we can depend upon these institutions however bad they are, This is my opinion. ಇದು ನನ್ನ ಒಂದು ಅಭಿಪ್ರಾಯ. ಇದನ್ನು ಸರಿಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಪುರಾಣದಲ್ಲಿ ಘಟೋತ್ಗಜ ಮಾಯಾಮಂತ್ರ ಮಾಡಿ ಎಲ್ಲಾ ಕೆಲಸವನ್ನು ಮಾಡಿದನಲ್ಲಾ ಆ ರೀತಿಯಾಗಿ ನಾವು ಎಲ್ಲವನ್ನೂ ಒಂದೇಸಾರಿ ಸರಿಪಡಿಸುವುದಕ್ಕಾಗುವುದಿಲ್ಲ. ಕೆಲವು ಸಂಸ್ಥೆಗಳಲ್ಲಿ ಕಳೆದ ೫-೬ ವರ್ಷಗಳ ಹಿಂದೆ ತೆಗೆದುಕೊಂಡ ಬಟ್ಟೆ ಹಾಗೇ ಇದೆ. ಅಷ್ಟು ಸ್ಟಾಕ್ ಇದೆ. ಅದನ್ನು ಬಿಟ್ಟರೆ ೧೦ ಪರ್ಸೆಂಟ್ ೨೦ ಪರ್ಸೆಂಟ್ ರಿಯಲೈಸ್ ಆಗುವುದಿಲ್ಲ. ಇದು ನನ್ನ ಕಾಲದಲ್ಲಿ ಆಗಿದ್ದಲ್ಲ. ಆದರೆ ನನ್ನ ಕಾಲದಲ್ಲೂ ಆಗುವುದಕ್ಕೆ ಸಾಧ್ಯವಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಎಚ್. ಎ. ನಾರಾಯಣಗೌಡ.—ಜನತಾ ಬಜಾರ್‌ನಲ್ಲಿ ಮಾರಾಟ ಆಗದೇ ಇರುವ ಬಟ್ಟೆಗಳನ್ನು ಹರಾಜು ಮಾಡಿದರೂ ಕೂಡ ರಿಯಲೈಸ್ ಆಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಬಟ್ಟೆಯನ್ನು ಯಾವ ಕಮಿಟಿಯವರು ಕೊಂಡು ಕೊಂಡಿದ್ದಾರೆ ಆ ಕಮಿಟಿಯವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ತಾವು ಏನು ಜನತಾ ಬಜಾರ್ ಹಾಗೂ ಜಿಲ್ಲಾ ಬ್ಯಾಂಕ್‌ಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುತ್ತೀರಿ, ಮೇನೇಜಿಂಗ್ ಡೈರೆಕ್ಟರ್ ಹಾಗೂ ಜನರಲ್ ಮೇನೇಜರ್‌ರವರನ್ನು ಏನು ನೇಮಕ ಮಾಡುತ್ತೀರಿ ಅವರಿಗೆ ಆ ಫೀಲ್ಡ್ ಬಗ್ಗೆ ತರಬೇತಿ ಕೊಡುವ ಬಗ್ಗೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಮೊಲನೆಯದಾಗಿ ಈಗಿರುವ ಕಾನೂನು ಪ್ರಕಾರ ಅಧಿಕಾರಿಗಳ ಮೇಲೆ ಛಾರ್ಜಸ್ ಮಾಡಿ ಪ್ರೂವ್ ಮಾಡುವುದು ಅಷ್ಟು ಸುಲಭವಲ್ಲ. ಅದಕ್ಕಾಗಿಯೇ ಕಾನೂನಿನಲ್ಲಿ ತಿದ್ದುಪಡಿ ತರುತ್ತಿದ್ದೇವೆ. ಮತ್ತು ಎರಡನೆಯದಾಗಿ ಸಹಕಾರ ಇಲಾಖೆಯವರು ಏನು ಕೆಲಸ ಬೇಕಾದರೂ ಮಾಡಬಹುದೆಂಬ ಅಭಿಪ್ರಾಯವಿದೆ. ಅವರು ಸಕ್ಕರೆ ಕಾರ್ಖಾನೆಗಳ ಮೇನೇಜಿಂಗ್ ಡೈರೆಕ್ಟರ್ ಆಗಬಹುದು. ನಿಪ್ಪಾಣಿ ಟೊಬ್ಯಾಕೋ ಕಂಪೆನಿಯ ಮೇನೇಜಿಂಗ್ ಡೈರೆಕ್ಟರ್ ಆಗಬಹುದು, ಸ್ಪಿನ್ನಿಂಗ್ ಮಿಲ್ಸ್‌ನ ಮೇನೇಜಿಂಗ್ ಡೈರೆಕ್ಟರ್ ಆಗಬಹುದು, ಹೋಲ್‌ಸೇಲ್ ಸ್ಟೋರ್ಸ್‌ನ ಜನರಲ್ ಮೇನೇಜರ್ ಆಗಬಹುದು. ಆದರೆ our Officers most of them are not trained to hold these posts. ಇವರಿಗೆಲ್ಲಾ ಮೊದಲು ಟ್ರೈನಿಂಗ್ ಕೊಡಬೇಕಾಗಿದೆ. I had discussions with my Officers in this regard .... ಫಿಶರೀಸ್ ಡಿಪಾರ್ಟ್‌ಮೆಂಟ್ ಇದೆ. ಇಲ್ಲಿಗೆ ಹೋಗುವವರಿಗೆ ಆ ಬಗ್ಗೆ ಟ್ರೈನಿಂಗ್ ಅವಶ್ಯಕತೆ ಇದೆ. ಇನ್ನು ಬೀಡಿ ಕಾರ್ಮಿಕರ ಬಗ್ಗೆ ಹೇಳಿದ್ದಾರೆ. ಇವರಿಗೆ ಯಾವ ಸಹಾಯ ಧನ ಸಿಗಬೇಕೋ ಅದು ಸಿಗುತ್ತಾ ಇಲ್ಲ. ಇವರಿಗೆ ಸಹಾಯ ಸಿಗುವ ಪ್ರಯತ್ನಪಡಿ, ಸಿಗದಿದ್ದರೆ ನಮ್ಮ ಬಡ್ಜೆಟ್ಟಿನಲ್ಲಿಯೇ ಸ್ವಲ್ಪ ಕೊಡೋಣವೆಂದು ನಿನ್ನೆ ನಾನೇ ಹೇಳಿದೆ. ನಾವೇನೂ ಸರ್ವಜ್ಞರಲ್ಲ. ಇವತ್ತು ಏನು ಲುಕ್ಸಾನು ಆಗುತ್ತಿದೆ ಅದನ್ನು ತಪ್ಪಿಸಬೇಕಾದರೆ ನಮ್ಮ ಅಧಿಕಾರಿಗಳಿಗೆ ಟ್ರೈನಿಂಗ್ ಅವಶ್ಯಕತೆ ಇದೆ. ಯಾವ ರೀತಿ ಟ್ರೈನಿಂಗ್ ಕೊಡಬೇಕು ಎಂಬ ಬಗ್ಗೆ ಚರ್ಚೆಮಾಡಿ ಕಾರ್ಯಕ್ರಮ ತೆಗದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ, ಇನ್ನು ಆಡಿಟ್ ಇಂಡಿಪೆಂಡೆಂಟ್ ಆಗಬೇಕೆಂದು ಹೇಳಿದ್ದಾರೆ. "ಕಾರ್ಯದರ್ಶಿ ಸರ್ವಶಕ್ತ, ಅಧ್ಯಕ್ಷ ನಿಮಿತ್ತ" ಎಂದು ಸಹಾ ಹೇಳಿದರು.

SRI H. A. NARAYANA GOWDA.—There should be a test audit of 5 percent but it is not obligatory. I want that at least 10 percent check audit should be there.

ಶ್ರೀ ಆರ್. ಎಲ್. ಜಾಲಪ್ಪ.—ಇನ್ನು ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಹೇಳಿದ್ದಾರೆ ಹಾಗೂ ೬ ವರ್ಷದ ಲಿಮಿಟ್ ಹಾಕಿದ್ದಾರೆಂದು ಹೇಳಿದರು. ಅದನ್ನು ಮಾಡಿದ್ದು ಮಾನ್ಯ ರಂಗನಾಥ್ ಅವರ ಕಾಲದಲ್ಲಿಯೇ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಇಲ್ಲಿ ಒಂದು ಏನು ಆಗುತ್ತದೆ ಎಂದರೆ, ಐದುವರೆ ವರ್ಷ ಈತ ಇದ್ದು ನಂತರ ರಾಜೀನಾಮೆ ಕೊಟ್ಟು ನಂತರ ಮುಂದಿನ

ಟರ್ಮ್‌ಗೆ ಮತ್ತೆ ಬರುತ್ತಾರೆ ಎಂದು ಹೇಳಿದರು. ಅದಕ್ಕಾಗಿಯೇ ನಾವು ಇದರಲ್ಲಿ ಒಂದು ಕ್ಲಾಸ್ ಸೇರಿಸಬೇಕೆಂದು ಮಾಡಿದ್ದೇವೆ. We want to add a clause "six years continuously or intermittently". ಇದು ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಪರಿಶೀಲನೆಯಲ್ಲಿ ಇದೆ. ಇನ್ನು ೫೦ ಪರ್ಸೆಂಟ್ ವಸೂಲಿ ಆಗಿದ್ದರೂ ಓಟಿಂಗ್ ಹಕ್ಕು ಕೊಡಿ ಎಂದು ಹೇಳಿದ್ದಾರೆ. ಈಗ ೧೦೦ ಪರ್ಸೆಂಟ್ ಹಣ ವಸೂಲಿ ಆಗಿದ್ದರೆ ಓಟು ಹಾಕಲು ಹಕ್ಕು ಇದ್ದು ಮಿಕ್ಕವರಿಗೆ ಇರುವುದಿಲ್ಲ. ಹೀಗೆ ಮಾಡಿದರೆ ತಾಲ್ಲೂಕು ಸೊಸೈಟಿಗಳಲ್ಲಿ, ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಯಾರೂ ರೆಪ್ರಸೆಂಟ್ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ. those who have paid 50 per-cent of the outstanding before June 30th and paid it to the Federal Institution, Will have a right to vote and also right to contest. This amendment we are bringing before this House. ನಂತರ ೩ ವರ್ಷಕ್ಕೆ ಚುನಾವಣೆ ಆಗಬೇಕೆಂದು ಹೇಳಿದ್ದಾರೆ. ಇದನ್ನು ನಾನು ಆಗಲೇ ತಿದ್ದುಪಡಿಯಲ್ಲಿ ಸೇರಿಸಿದ್ದೇನೆ. ಆಫೀಸ್ ಬೇರರ್ಸ್ ವರ್ಷೇ ವರ್ಷೇ ಬದಲಾವಣೆಯಾಗಬೇಕೆಂದು ಹೇಳಿದ್ದಾರೆ. ಮಾನ್ಯ ರಾಮಭಟ್ ಅವರು ಮಾತನಾಡುತ್ತಾ. ಮಾನ್ಯ ಮಂತ್ರಿಯವರು ಒಂದು ಹೇಳಿಕೆಯನ್ನು ಮಿಸ್ ಅಪ್ರೋಪ್ರಿಯೇಷನ್ ಬಗ್ಗೆ ಕೊಟ್ಟಿರುವುದು ದುರಾದೃಷ್ಟಕರವೆಂದು ಹೇಳಿದರು. ನಾನು ಅದನ್ನು ಆ ಅರ್ಥದಲ್ಲಿ ಹೇಳಿಲ್ಲ. Not to encourage this mis-appropriation ನಾನು ಹೇಳಿದ್ದು ೧೫೪೮ ಕೋಟಿ ರೂಪಾಯಿ ವರ್ಕಿಂಗ್ ಬಂಡವಾಳ ನಮ್ಮಲ್ಲಿ ಇದೆ. ಇದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ೩ ಕೋಟಿ ೮೦ ಲಕ್ಷ ರೂಪಾಯಿಗಳು. ಇದರ ಸರಾಸರಿ ನೋಡಿದರೆ ೦.೨೬ ಪರ್ಸೆಂಟ್ ಬರುತ್ತದೆ. ಎಂದರೆ ಇದನ್ನು ಯಾರೂ ಮ್ಯಾಗ್ನಿಫೈ ಮಾಡುವುದಿಲ್ಲ. ಬರೀ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದನ್ನೇ ಮ್ಯಾಗ್ನಿಫೈ ಮಾಡಿಹೇಳುತ್ತಾರೆಂದು ಹೇಳಿದೆನೆಯೇ ಹೊರತು ಬೇರೆ ಏನೂ ಇಲ್ಲ. So, that does not mean to say that I am encouraging misappropriation. I am not encourging misappropriation. ಅರ್ಬನ್ ಬ್ಯಾಂಕ್‌ನ ಒಂದು ಹೊಸ ಶಾಖೆಯ ಆರಂಭಕ್ಕೆ ಹೋಗಿ ಅಲ್ಲಿ ಆ ಮಾತನ್ನು ಹೇಳಿದೆನೇ ವಿನಃ ಇದನ್ನು ಬೇರೆ ಅರ್ಥದಲ್ಲಿ ನಾನು ಹೇಳಿದ್ದು ಅಲ್ಲ. It is not to encourage mis-aporopriation but the achievements made in the co-operative sector is much more laudable than criticising only about these things. ಇನ್ನು ಉಡುಪಿಯಲ್ಲಿ ಟೀಚರ್ಸ್ ಬ್ಯಾಂಕ್ ಇದೆ. It has done wonderful work. ಇನ್ನು ಈ ಇಲಾಖೆಯಲ್ಲಿ ಹೆಗ್ಗಣಗಳು ಮತ್ತು ಪಾವಗಡದ ತೋಳಗಳು ಇವೆ. ಇವನ್ನೆಲ್ಲಾ ಮುಚ್ಚಿಡಬೇಕಾದ್ದು ಅನಾವಶ್ಯಕ. ಎಲ್ಲೆಲ್ಲಿ ಕಂಟ್ರೋಲ್ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದು ನಮ್ಮ ಕರ್ತವ್ಯ. ಅದರಲ್ಲಿ ನಾವು ಸೋತರೆ ನಾವು ಕೆಲಸ ಮಾಡಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್—ಪ್ರೊಸೆಸಿಂಗ್ ಯೂನಿಟ್ ಸ್ಪಿನ್ನಿಂಗ್‌ಮಿಲ್ ಹೀಗೆ ಪ್ರತಿಯೊಂದನ್ನು ಬೇರೆ ಬೇರೆಯಾಗಿ ತನಿಖೆಮಾಡಿ, ಯಾವ ರೀತಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎನ್ನುವುದನ್ನು ನೋಡಿದರೆ ಪರ್ಸೆಂಟೇಜ್ ಇಷ್ಟು ಎಂದು ಗೊತ್ತಾಗುತ್ತದೆ. ಒಟ್ಟಿಗೆ ಲೆಕ್ಕ ತೆಗೆದುಕೊಂಡರೆ ಸರಿಯಾಗಿ ಗೊತ್ತಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ತಮಗೆ ಮಾಹಿತಿ ಒದಗಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸೊರಬ ಪಿ.ಎಲ್.ಡಿ ಬ್ಯಾಂಕಿನ ಅಧ್ಯಕ್ಷರು, ಎರಡು ಟ್ರಾಕ್ಟರುಗಳನನ್ನು ತೆಗೆದುಕೊಂಡಿದ್ದಾರೆ, ಒಂದು ಟ್ರಾಕ್ಟರಿಗೆ ಬ್ಯಾಂಕಿನ ಹೈಪಾಥಿಕೇಷನ್ನೇ ಆಗಿಲ್ಲ. ಒಂದು ಕಟುಂಬಕ್ಕೆ ಮೂರು ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ ಇದರ ಬಗ್ಗೆ ನಿರ್ದಿಷ್ಟವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ನಾನು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷನಾಗಿದ್ದಾಗ ಈ ಸಂಘದ ಕಾರ್ಯದರ್ಶಿಯವರು ಮಂಜೂ ಮಾಡಿಕೊಂಡು ಇದ್ದಾರೆ. ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆನ್ನುವ ವಿಷಯದ ಬಗ್ಗೆ ಒಂದು ಸ್ಥಳೀಯ ಪತ್ರಿಕೆಯಲ್ಲಿ ಬಂದಿತ್ತು. ನಾನು ಆ ಕೂಡಲೇ ಅದನ್ನು ಅಲ್ಲಿನ ಜಿಲ್ಲಾ ಮ್ಯಾನೇಜರ್‌ರವರಿಗೆ ಕಳುಹಿಸಿ, ತ ವೇ ಸ್ವತಃ ಹೋಗಿ ಬ್ಯಾಂಕ್‌ನ ತನಿಖೆ ಮಾಡಿ ವರದಿ ಕೊಡಬೇಕೆಂದು ಕೇಳಿದ್ದೆ. ೧೫–೨೦ ದಿವಸಗಳಾದರೂ ವರದಿ ಬರಲಿಲ್ಲ. ಅನಂತರ ನಾನು ಆ ಅಧಿಕಾರಿಗಳಿಗೆ ಷೋಕಾಸ್ ನೋಟೀಸ್ ಕೊಟ್ಟು, ಈ ವಿಚಾರ

ದಲ್ಲಿ ನಿಮನ್ನು ವಿತಕ್ಕೆ ಸಸ್ಪೆಷನ್‌ನಲ್ಲಿಡಬಾರದೆಂದು ಕೇಳಿದ್ದೆ, ಅಷ್ಟರಲ್ಲಿ ಪಾರ್ಲಿಮೆಂಟ್ ಚುನಾವಣೆ ಬಂತು. ಇತ್ತೀಚೆಗೆ ನನಗೆ ಗೊತ್ತಾಯಿತು, ನಿಯಮ ೬೪ರ ಪ್ರಕಾರ ವಿಚಾರಣೆ ನಡೆದಿದೆ. ಈ ಬ್ಯಾಂಕಿನಲ್ಲಿ ಸುಮಾರು ೧೭ ಲಕ್ಷ ರೂಪಾಯಿ ದುರ್ ವ್ಯವಹಾರ ನಡೆದಿದೆ ಎಂದು ಸುದ್ದಿ ಇದೆ. ಜಿಲ್ಲಾ ಬ್ಯಾಂಕಿನ ಮ್ಯಾನೇಜರುಗಳು ನೇರವಾಗಿ ಒಳಗಾಗಿಲ್ಲ ಎಂದು ಉತ್ತರ ಬಂದಿದೆ. ನಾನು ಫೈಲ್ ಮೇಲೆ ಎಷ್ಟು ಸಾರಿ ಜಿಲ್ಲಾ ಬ್ಯಾಂಕ್ ಇನ್ಸ್‌ಪೆಕ್ಷನ್ ಆಗಿದೆ. ಇದರಲ್ಲಿ ಯಾರು ಯಾರು ಒಳಗಾಗಿದ್ದಾರೆ ? ಎಂಬುದನ್ನು ಬರೆದಿದ್ದೇನೆ. ಆ ರೀತಿ ಉತ್ತರ ಬಂದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ಅಪ್ಪಣೆ ಪಡೆದು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರಿಯಾದ ರೀತಿಯಲ್ಲಿ ಆ ಫೈಲಿನ ಬಗ್ಗೆ ಅಧ್ಯಯನ ಮಾಡಿದರೆ, ಭ್ರಷ್ಟಾಚಾರ ಮಾಡದೇ ಇರುವವರಿಗೂ ಯಾವ ರೀತಿ ಭ್ರಷ್ಟಚಾರ ಮಾಡಬಹು ದೆಂಬುದನ್ನು ಹೇಳಿಕೊಡಬಹುದು.

ಶ್ರೀ ಕೆ. ಮಲ್ಲಪ್ಪ.—ಸಹಕಾರ ಸಂಘಗಳಲ್ಲಿ ಕೂಡ ಮೀಸಲಾತಿ ಸ್ಥಾನಗಳನ್ನು ಇಡುವಂಥ ವ್ಯವಸ್ಥೆ ಮಾಡುತ್ತೀರಾ ? ರೆಗ್ಯೂಲೇಟೆಡ್ ಮಾರುಕಟ್ಟೆಗಳಲ್ಲಿ ಟ್ರೇಡರ್ಸ್ ಮತ್ತು ಕಮೀಷನ್ ಏಜೆಂಟರುಗಳಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ, ಅದೇ ರೀತಿ ಹಮಾಲಿಗಳಿಗೂ ಪ್ರಾತಿನಿಧ್ಯ ಕೊಟ್ಟು ಅವರವರ ಸವಲತ್ತುಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡೋಣ. ಮೀಸಲಾತಿ ಬಗ್ಗೆ ಕೆ.ಹೆಚ್ ಪಾಟೀಲರ ಸಮಿತಿಯ ವರದಿಯಲ್ಲೂ ಕೂಡ ಹೇಳಿದ್ದಾರೆ. ಪ್ರಾಥಮಿಕ ಮಟ್ಟದಲ್ಲಿ ಹರಿಜನರಿಗೂ ಹಾಗೂ ಮಹಿಳೆಯರಿಗೂ ಪ್ರಾತಿನಿಧ್ಯ ಕೊಡುವ ಬಗ್ಗೆ ಅಮೆಂಡ್‌ಮೆಂಟ್ ತರುತ್ತಿದ್ದೇವೆ, ಕಾನೂನಿನ ಇಲಾಖೆ ಯಲ್ಲಿ ಇದೆ. ಕೆಲವು ದಿವಸಗಳಲ್ಲಿಯೇ ಸದನದ ಮುಂದಿಡುತ್ತೇನೆ, ಇನ್ನು ಕ್ಯಾಮ್ಕೋ ಬಗ್ಗೆ ಮಾನ್ಯ ಸದಸ್ಯರಾದ ರಾಮಭಟ್‌ರವರು ಹೇಳಿದರು. ಇದು ಹನ್ನೊಂದುವರೆ ಕೋಟಿ ರೂಪಾಯಿ ಗಳ ಪ್ರಾಜೆಕ್ಟ್. ಕಳೆದ ವರ್ಷ ಇದಕ್ಕೆ ೫೦ ಲಕ್ಷ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದರೂ ಎನ್.ಸಿ.ಡಿ.ಸಿ.ಯಿಂದ ಹಣ ಬಾರದೇ ಇದ್ದುದರಿಂದ ಹಣ ಕೊಡಲಿಲ್ಲ. ಇಂಥ ಪ್ರಾಜೆಕ್ಟುಗಳಿಗೆ ಹಣ ಕೊಡುವುದಿಲ್ಲವೆಂದು ಹೇಳಿದ್ದರು. ಈಗ ವರ್ಕಿಂಗ್ ಕ್ಯಾಪಿಟಲ್‌ಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ. ೨.೫೫ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಒದಗಿಸ ಬೇಕಾಗಿದೆ. ಈಗಾಗಲೇ ೧.೫೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಲ್ಲಿ ಕೇಂದ್ರದ ಅರ್ಧ ಭಾಗ ಮತ್ತು ರಾಜ್ಯ ಸರ್ಕಾರದ ಅರ್ಧ ಭಾಗದ ಹಣ ಸೇರುತ್ತೆ. ಎನ್.ಸಿ.ಡಿ.ಸಿ.ಯವರ ಜೊತೆ ಮಾತನಾಡಿದ್ದೇವೆ. ಅವರು ನೆರವು ಕೊಡುತ್ತೇವೆಂದು ಹೇಳಿದ್ದಾರೆ. ಇನ್ನು ಬೀಡಿ ವಿಚಾರದಲ್ಲಿ ಹೇಳಿದ್ದೀರಿ; ಇದರ ಬಗ್ಗೆ ಎಲ್ಲರೂ ಒಟ್ಟಿಗೆ ಸೇರಿ ಒಂದು ತೀರ್ಮಾನಕ್ಕೆ ಬರೋಣ. ಗಂಡಾಂತರದಲ್ಲಿ ಬೀಳುತ್ತೀರಿ ಎಚ್ಚರಿಕೆಯಿಂದ ಇರಿ ಎಂದ ಹೇಳಿದ್ದೀರಿ ನನಗೂ ಬೆದರಿಕೆಯ ಫೋನುಗಳು ಬರುತ್ತಿವೆ. ನಾನಂತೂ ಕರಪ್ಷನ್ ವಿಚಾರದಲ್ಲಿ ನನ್ನ ಅಣ್ಣನಾಗಲೀ, ತಮ್ಮನಾಗಲೀ, ನಿಷ್ಠೂರವಾದ ಕ್ರಮ ತೆಗೆದುಕೊಳ್ಳುತ್ತೇನೆ. ಮಂತ್ರಿಯಾಗಿ ಎರಡು ವರ್ಷ ಇರಬಹುದು, ಮೂರು ವರ್ಷ ಇರಬಹುದು, ಇದು ಮುಖ್ಯವಲ್ಲ ನನ್ನ ಚರಿತ್ರೆ ತೆಗೆದು ನೋಡಬಹುದು, ನಾನು ಬಡ ರೈತ ನಾನು ಡಿಫಾಲ್ಟರ್ ಆಗಿದ್ದು ಉಂಟು. ಎರಡು ಬ್ಯಾಂಕ್‌ಗಳಲ್ಲಿ ಕೆಲಸ ಮಾಡಿದ್ದೇನೆ. ತಾಲ್ಲೂಕು ಬ್ಯಾಂಕುಗಳಲ್ಲಿ ಕೆಲಸ ಮಾಡಿದ್ದೇನೆ ನನ್ನ ಮೇಲೆ ಆಡಿಟಿಂಗ್ ಸೆಲ್‌ನವರು ಕಳುಹಿಸಿದ್ದರು, ಮಾನ್ಯ ಸದಸ್ಯರಾದ ಚಿಕ್ಕೇಗೌಡರಿಗೂ ಗೊತ್ತು ಯಾವ ರೀತಿ ಮೋಸ ಮಾಡಿಲ್ಲ ಚೀಟ್ ಮಾಡಿಲ್ಲ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷನಾಗಿ ಟಿ.ಎ. ಡಿ.ಎ. ಎಷ್ಟು ತೆಗೆದುಕೊಂಡಿದ್ದೇನೆ ಎಂಬುದನ್ನು ನೋಡಬಹುದು. ವಾಹನಗಳನ್ನು ಮಿಸ್‌ಯೂಜ್ ಮಾಡಿಲ್ಲ. ನಾನು ಪರಿಶುದ್ಧನಲ್ಲದೇ ಇರ ಬಹುದು, ವೈಯಕ್ತಿಕ ಕೆಲಸಕ್ಕೆ ಟೆಲಿಫೋನ್ ಮಾಡಿದ್ದಕ್ಕೂ ದುಡ್ಡು ಕೊಟ್ಟಿದ್ದೇನೆ. ಟೂರ್ ಹೋದಾಗ ಅಧಿಕಾರಿಗಳ ಹತ್ತಿರ ಊಟ ಮಾಡಿಲ್ಲ. ಯಾರನ್ನೂ ಕೂಡ ಷೀಲ್ಡ್ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಒಂದು ನೂರು ವರ್ಷ ಮಂತ್ರಿತನದಲ್ಲಿ ಇರುತ್ತೇನೆ ಎನ್ನುವುದು ಇಲ್ಲ. ಇವೊತ್ತೆ ಮಂತ್ರಿತನ ಹೋಗಬಹುದು, ನಾಳೆ ಹೋಗಬಹುದು ಈ ಸದನಕ್ಕೆ ಹೇಳುತ್ತಿದ್ದೇನೆ. ಬೇರೆ ಆಟ್ರಿಬ್ಯೂಟ್ ಮಾಡುವುದು ಬೇಡ. ಮಾನ್ಯ ರಂಗನಾಥ್ ಅವರು ಸಹಕಾರ ಎಲ್ಲಾ ಒಂದೇ ಜಾತಿ ಎಂದು ಹೇಳಿದರು. ಒಂದೇ ಜಾತಿ ಎಂದು ಅನ್ಯಾಯ ಮಾಡು ವವರಿಗೆ ಸಪೋರ್ಟ ಮಾಡುತ್ತಾರೆಂದು ತಿಳಿದುಕೊಳ್ಳಬೇಡಿ. ಈಗ ಮಾನ್ಯ ಸದಸ್ಯರಾದ ಮಹದೇವ್ ಅವರು ಹೇಳಿದ್ದಕ್ಕೆ ಉತ್ತರ ಕೊಟ್ಟಿದ್ದೇನೆ. ಅಕ್ಕಿಯಲ್ಲಿ ಜಾಸ್ತಿ ಬರುವ ವಿಚಾರ, ಪಿಎಲ್‌ಡಿ

ಬ್ಯಾಂಕುಗಳ ಬಗ್ಗೆ ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ಪಂಪಾಪತಿಯವರು ಸ್ಪಿನ್ನಿಂಗ್ ಮೆಷಿನ್ ಆಗಬೇಕೆಂದು ಸೂಚನೆ ಕೊಟ್ಟಿದ್ದಾರೆ. ಸಹಕಾರ ಸಕ್ಕರೆ ಕಂಪನಿಯೊಳಗೆ ಸರಿಯಾಗಿ ವೆತನ ಕೊಡುತ್ತಿಲ್ಲ ಎಂದು ಹೇಳಿದ್ದಾರೆ ಅದರ ಬಗ್ಗೆ ಪ್ರಯತ್ನ ಪಡುತ್ತೇನೆ. ಇನ್ನು ಮಾನ್ಯ ಚಿಕ್ಕೇಗೌಡರು ಐದು ನಿಮಿಷ ಮಾತನಾಡಿ ನಮ್ಮ ಪಕ್ಷದವರ ಮೇಲೆ ಕ್ರಮ ಕೈಗೊಂಡಿದ್ದಾರೆಂದು ಹೇಳಿದರು. ನಾವು ಖಂಡಿತ ಆ ರೀತಿ ಮಾಡಿಲ್ಲ. ತಪ್ಪು ಮಾಡಿದವರು ನಿಮ್ಮ ಪಕ್ಷದವರಾದರೆ ಅದು ದುರಾದೃಷ್ಟ. ನಾನೇ ಇದಕ್ಕೆ ಒಂದು ವಿಕ್ಟಿಮ್ ಆಗಿದ್ದೆ ನನಗೆ ಗೊತ್ತಿದ್ದು ನಾನು ಅದೇ ವಿಚಾರ ಮಾಡಿದರೆ ನಾನು ಯಾವ ಸಹಕಾರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗುಲ್ಬರ್ಗ ಡಿಸ್ಟ್ರಿಕ್ ಕೋಆಪರೇಟೀವ್ ಬ್ಯಾಂಕ್ ಇದು ಡಿಫಾಲ್ಟ್, ಚೆನ್ನಾಗಿಲ್ಲ ಎಂದು ಹೇಳಿ, ಸರ್ಕಾರ ಕೇಸ್ ಹಾಕಿ ಸುಪ್ರೀಮ್ ಕೋರ್ಟಿಗೆ ಹೋದ ಕೇಸ್ ವಿತ್‌ಡ್ರಾ ಮಾಡಿಕೊಂಡು ಪುನಃ ನೇಮಕಾತಿ ಮಾಡಿ ಕಳುಹಿಸಿದಲ್ಲ ಇದು ಯಾವುದು ?

ಶ್ರೀ ಬಾಪುಗೌಡ.—ನಾನು ಸಹ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷನಾಗಿ ೭ ವರ್ಷ ಇದ್ದೆ. ಇವರ ಸರ್ಕಾರ ಬಂದಮೇಲೆ ಸೂಪರ್‌ಸೀಡ್ ಮಾಡುತ್ತಾರೆಂದು ನನಗೆ ಗೊತ್ತಾಯಿತು. ೧೫ ದಿವಸದಲ್ಲಿ ಷೋಕಾಸ್ ನೋಟೀಸ್ ಬಂತು ಅದು ಹೈಕೋರ್ಟಿನಲ್ಲಿ ಕೇಸ್ ನಮ್ಮಂತೆ ಆಯಿತು. ಅನಂತರ ಸುಪ್ರೀಮ್ ಕೋರ್ಟಿಗೆ ಹೋದರು, ಮತ್ತೆ ಚುನಾವಣೆ ಆಯಿತು. ನಮ್ಮ ಪರವಾಗಿ ಇದ್ದವರು ಅಧ್ಯಕ್ಷರಾಗಿ ಬಂದರು. ಮೊದಲು ಎರಡು ಸಾರಿ ಸೂಪರ್‌ಸೀಡ್ ಮಾಡಿ ಅದು ಬಿ ಕ್ಲಾಸ್ ಇದ್ದುದು, ಸಿ ಕ್ಲಾಸ್‌ಗೆ......ತಂದಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಪಕ್ಷದವರೇ ಇರಲಿ.........

ಶ್ರೀ ಬಾಪುಗೌಡ.—ಈಗ ಏನಾಗಿದೆ, ೫–೬ ತಿಂಗಳಲ್ಲಿ ಒಳ್ಳೆಯ ರೆಕವರಿ ಮಾಡಿದೆ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಸಾಲ ತುಂಬತಕ್ಕ ಪ್ರಯತ್ನ ಮಾಡಿದೆ. ಗುಲ್ಬರ್ಗ ಬ್ಯಾಂಕಿನಲ್ಲಿ ಯಾವುದೇ ಪಕ್ಷ ರಾಜಕೀಯ ಮಾಡಿಲ್ಲ. ಹತ್ತು ವರ್ಷದ ಅವಧಿಯಲ್ಲಿ ಎಷ್ಟು ಕೊಡಿಸಬೇಕೋ ಅಷ್ಟು ಕೊಡಿಸಿದ್ದೇವೆ.........

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷರೆ, ವಾದ ವಿವಾದ ನೋಡಿದರೆ ಏನಾಗಿದೆ ಎಂದರೆ ನಮ್ಮಲ್ಲಿ ತೆಲುಗಿನಲ್ಲಿ ಒಂದು ಗಾದೆ ಹೇಳುತ್ತಾರೆ ಆ ರೀತಿ ಇದೆ. ಒಬ್ಬ ಆಕೆ ಅಡುಗೆ ಮಾಡಿ ತನ್ನ ಗಂಡ ಬರುವುದನ್ನೇ ನಿರೀಕ್ಷಣೇ ಮಾಡಿಕೊಂಡು ಒಂದು ಪ್ಲೇಟ್‌ನಲ್ಲಿ ಅರ್ಧ ಅನ್ನ ತಿಂದುಬಿಟ್ಟು ಇನ್ನು ಅರ್ಧ ಆ ಪ್ಲೇಟ್‌ನಲ್ಲಿಯೇ ಇಟ್ಟುಕೊಂಡು ಗಂಡ ಬರುವುದನ್ನು ನಿರೀಕ್ಷಣೆ ಮಾಡಿಕೊಂಡು ಕುಳಿತಿದ್ದಾಗ ತನ್ನ ಗಂಡ ಬರುತ್ತಾನೆ, ಆಗ ಆಕೆ ಹೇಳುತ್ತಾಳೆ ನಾನು ಅಡುಗೆ ಮಾಡಿದ್ದು ಇಷ್ಟೇ, ನಿನಗೋಸ್ಕರ ಕಾಯುತ್ತಿದ್ದೆ ಇನ್ನು ಅನ್ನ ಊಟ ಮಾಡಿಲ್ಲ ಎಂದು ಹೇಳಿ ತನ್ನ ಗಂಡನಿಗೆ ಮೋಸ ಮಾಡುತ್ತಿದ್ದಳಂತೆ. ಆಮೇಲೆ ಒಂದು ದಿವಸ ಆತ ಅನ್ನ ಮಾಡಿದ ಮಡಕೆಯನ್ನು ಪರೀಕ್ಷೆ ಮಾಡಿ, ಆಕೆ ಅರ್ಧ ಅನ್ನ ತಿಂದು ಹಾಕಿದ್ದು ಕಂಡುಹಿಡಿದು ಅವಳನ್ನು ಕಳುಹಿಸಿ ಇನ್ನೊಬ್ಬಳನ್ನು ಮದುವೆ ಆದನಂತೆ. ಆಕೆ ಏನು ಮಾಡಿದಳಂತೆ ಅಂದರೆ ತಾನು ಮಾಡಿದ ಅನ್ನ ಪೂರ್ತಿ ತಿಂದು ಹಾಕಿಬಿಟ್ಟು ನಾನು ನಿನಗೋಸ್ಕರ ಕಾಯುತ್ತಾ ಇದ್ದೆ ಎಂದು ಹೇಳಿದಳಂತೆ ಆ ರೀತಿಯಲ್ಲಿ ಜನತಾದವರು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಮಾನ್ಯ ರಂಗನಾಥ್ ಅವರು ಎರಡು ಬಹಳ ಮುಖ್ಯವಾದ ವಿಷಯಗಳನ್ನು ಹೇಳಿದ್ದಾರೆ. ಒಂದು ಜಿಲ್ಲಾ ಬ್ಯಾಂಕಿಗೆ ನೋಟೀಸ್ ಕೊಟ್ಟಿರುವುದು, ಇನ್ನು ಎರಡನೆಯದು ಬ್ಯಾಟರಾಯನಪುರ ಸೊಸೈಟಿ ಸೂಪರ್ ಸೀಡ್ ಮಾಡಿರುವುದು. ಈಗ ನನ್ನಲ್ಲಿ ಇನ್ಸ್‌ಪೆಕ್ಷನ್ ರಿಪೋರ್ಟ್ ಇದೆ ಅದರಲ್ಲಿ ಕೆಲವನ್ನು ಮಾತ್ರ ಓದುತ್ತೇನೆ.

"The audit of the accounts of the society has been completed upto 1981-82. As per the audit report, the amount assessed against the employees and the amount recovered is as follows: Sheshagiri R o—Rs. 22,286, Y. R. Somashekar Rao—Rs. 3,335, N. V. Veerabhadraiah—Rs. 24,291, N. Dasappa—Rs. 1,776, B. Venkatesh—Rs. 33,919,

ಶ್ರೀ ಎನ್ ಚಿಕ್ಕೇಗೌಡ.—ಯಾರು ಇವರೆಲ್ಲಾ ಎಂಪ್ಲಾಯೀಸೇನು?

ಶ್ರೀ ಆರ್. ಎಲ್. ಜಾಲಪ್ಪ.—ಇವರೆಲ್ಲಾ ಎಂಪ್ಲಾಯಿಗಳೆ, ಇದನ್ನು ಕಂಟ್ರೋಲ್ ಮಾಡಲಿಕ್ಕೆ ಯೋಗ್ಯತೆ ಇಲ್ಲದೇ ಇದ್ದರೆ ಡೈರೆಕ್ಟರ್ ಆಗಿ ಏತಕ್ಕೆ ಇರಬೇಕು? ಈ ಇನ್ಸ್‌ಪೆಕ್ಷನ್ ರಿಪೋರ್ಟ್ ಬರೆಯುವಾಗ ನಾನು ಮಂತ್ರಿಯಾಗಿರಲಿಲ್ಲ, ನಾನು ಹೇಳಿ ಬರೆಸಲಿಲ್ಲ. ಅನಂತರ ಹಣ ಕಟ್ಟಿದ್ದಾರೆ ಅಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಪ್ರೂವ್ ಆಯಿತು. ಅಲ್ಲಿ ಬಡ್ಡಿ ಕಟ್ಟಿಲ್ಲ, ಆಡಳಿತ ಮಂಡಲಿಯವರು ಏನೂ ಕ್ರಮ ತೆಗೆದುಕೊಂಡಿಲ್ಲ. ಇವರೇನೇ ಮುಂದೆ ತಿರುಗಿ ಕಂಟಿನ್ಯೂ ಆದರೂ ಮುಂದೆ ಏನು ಏನು ಮಾಡಿದ್ದಾರೆ ಅಂದರೆ ಮಿಸ್‌ಅಪ್ರೋಪ್ರಿಯೇಷನ್ ಜೊತೆಗೆ ೧೧,೩೮೦–೪೩ ಪೈಸೆ ಶಾರ್ಟೇಜ್ ಇನ್ನೂ ರಿಕವರಿ ಆಗಿಲ್ಲ. ಇದು ಆದಮೇಲೆ ಈ ವರ್ಷ ೧ನೇ ಫೆಬ್ರುವರಿ ೧೯೮೩ರಿಂದ ಈಚೆಗೆ ವಿ. ಎಂ. ವೀರಭದ್ರಯ್ಯ ಸೇಲ್ಸ್‌ಕ್ಲಾರ್ಕ್ ಹೋಲ್‌ಸೇಲ್ ಸೆಕ್ಷನ್‌ನಲ್ಲಿದ್ದರು, ಅನಂತರ ಹೆಬ್ಬಾಳ್ ಬ್ಯಾಂಕ್, ಶಿವನಾಯಕನಹಳ್ಳಿ ಬ್ರಾಂಚ್‌ಗೆ ಬಂದರು.

I will read the charge : "As per the Daily Sales Register, Ledger Folio No. 13, dated 31st August 1982, the Sales was not accounted. The total sales of the day was Rs. 60,850, whereas he has remitted Rs. 11,500 only *vide* Receipt No. 893/24th September 1982, the short remittance is Rs. 49,350. He has remitted the amount after 24 days and that too with a shortage of Rs. 49,350.

2) As per daily sales Register LF No. 25 total sales on 12–11–82 was Rs. 18,172–50 whereas the amount remitted by him is only Rs. 15,000/–*vide* R. No. 1545 on 27–11–82 Hence, the difference is Rs. 3,17·250.

3) As per stock book F.L. No. 2, the Sale of 3000 Kgs. of rice sold on 30–9–82 is worth of Rs. 6,900/–is not accouted.

HEBBAL BRANCH :

During the period under report the total sales conducted by him is Rs. 1,85,313.32 but he has remitted only Rs. 73,249–68 towards sales proceeds leaving a balance of Rs. 12,063–34 for which he is responsible and recoverable from him.

CHOLANAYAKANAHALLY BRANCH :

During the period worked in the Cholanayakanahalli Branch the total sales conducted by him is Rs. 1,03,632–46 whereas the sales proceeds remitted is Rs. 96,430–85 only. Hence, short remittance of Rs. 7,201–61 is recoverable from him.

Then, as per stock verification got done there is a shortage of stock worth of Rs. 9,220–47 as on 30–4–1983 recoverable from him.

Total amount recoverable from him comes to Rs. 87,908-22, out of which the amount remitted by him during March and April 1982 is as follows :

R. No.	Date	Amount
(a) 3201	17-3-83	5,000-00
(b) 3345	18-3-82	10,000-00
(c) 3358	19-3-83	3,172-50
(d) 3588	25-3-83	8,840-00
(e) 3629	26-3-83	13,160-00
(f) 3701	2-4-83	6,500-00
(g) 3702	2-4-83	5,850-00
(h) 4014	21-4-83	7,201-65
(i) 4016	22-4-83	12,063-34
(j) 3708	3-4-83	6,900-00
	Total	78,687-49

Further while handing over the charge of wholesale section by him to Sri Y.R. Somashekarachar, Secretary on 26-11-82, the shortage in stock was worth of Rs. 29,688-50, the said amount has been recovered by him as follows :

1) R.No. 3709 dated 4-4-83	25,390-00
2) R.No. 3708 dated 3-4-83	4,300-00
Total Rs.	29,690-00

The amount assessed for recovery from Sri H.S. Lingaraju, Salesmen, Cholanayakanahalli Branch.

During the period he has worked in the above branch, the total sales comes to Rs. 93,445-85 whereas he has remitted Rs. 81,839-90 towards sales proceeds leaving a balance of Rs. 11,605-95. This short remittance is recoverable from him.

The amount recovered from Sri H.S. Lingaraju is as follows :

1) R.No. 4005 dt. 10-4-83	Rs.	6,450-00
3) R.No. 4009 dt. 20-4-83	Rs. .	787-50
3) R.No. 4010 dt. 21-4-83	Rs.	1,562-00
4) R.No. 4079 dt. 29-4-83	Rs.	2,300-00

Hence, the total balance of Rs. 506-45 is due from him.

Further he has handed over the charge to Sri V.N. Veerabhadrappa during February 1983, and while handling over charge he has not handed over the charge of the following stocks.

Name of the Article	Quantity in Kgs.	Value
1) Sugar	40	150-00
2) L.F. Rice	214	513-60
3) Wheat	312	780-00
4) Soji	20	56-60
5) Ragi	18	27-10
	Total.	1,527-30

This is stated as neutral shortages due to heavy quantity of stocks handled. This has to be examined by the Board. Appropriate action should be taken.

SANJEEVANAGARA BRANCH :

Salesmen : K. JAYARAMAIAH

He has worked as Salesman in Sanjeevanagar Branch and he has left the job, during January, 1983, and the said branch was closed during the said month. The closing stock was as follows:

		Rate per Kg.
Rice	134 Kgs.	2.40
Wheat	145 ,,	1.70
Sugar	168 ,,	3.75
Maida	10 ,,	2.83
Soji	164 ,,	2.83
Jowar	4 ,,	1.70
S.F. Rice	1660 ,,	2.55

Out of this the following stocks has been transferred to Sri S. Venkatesh who was in charge of Kodigehalli Branch.

			Value
1) S.F. Rice	1572	Kgs.	3,772-80
2) Wheat	124	,,	210-80
3) Soji	116	,,	328-28
4) Sugar	134	,,	502-50
		Total Rs.	4814-38

The balance of stock as follows which is due from Sri. K. Jayaramaiah.

		Quantity		Value
1)	Rice	134	Kgs.	321–60
2)	Wheat	21	,,	35–70
3)	Sugar	34	,,	127–50
4)	Maida	19	,,	53–57
5)	Soji	38	,,	107–54
6)	Jowar	4	,,	6–80
7)	S.F. Rice	88	,,	224–40
			Total Rs.	877–11

Amount assessed for recovery from Sri Venkatesh, Sales Clerk, of Kodigehally Branch.

The employee has worked in the said branch as Sales Clerk, and has handed over the charge on 31–3–83, and he has left the job. The irregularities committed by him and the amount recoverable from him is as follows :

(*Vide* Bill No. 79534 dt. 13–7–82 of the F&C.S. Corporation, Bangalore purchase has been made is as follows :

1. S.F. Rice 22 quintals, 4 quintals of Godi, etc. etc.

It has not been taken for account at all.

SRI M. MAHADEV.—The inspection report is exactly of which date.

SRI R.L. JALAPPA.—It is up-to-date as on 5–5–1983.

SRI H.D. CHOWDAIAH.—Who is the Secretary? I would like to know from the Hon. Minister, whether he is an employee of the society or Department.

SRI R.L. JALAPPA.—He is an employee of the Society. The Senior Supervisor of the Bank is the Director who is expected to look in to the books. He never did it and no action has been taken against him.

ಸ್ವಾಮಿ, ಅಧಿಕಾರಿಗಳನ್ನು ಹೈಕೋರ್ಟ್ ಮುಂದೆ ಹಾಕಿದ್ದೇವೆ, ಕೇವಿಯಟ್ ಹಾಕಿದ್ದಾರೆ. ತಮಗೆ ಗೊತ್ತು ಏತಕ್ಕೆಂದರೆ ದಾತರ್‌ರವರೇ ಆ ರೀತಿ ಹೇಳಬೇಕಾದರೆ ಅವರು ಏನು, ಅವರಿಗೆ ಏನು ಸಪೋರ್ಟ್ ಇದೆ ಎನ್ನುವುದು ಗೊತ್ತು. ಅಂಥವರನ್ನೇ ಇಟ್ಟಿದ್ದಾರೆ. ನಾನು ಹೈಕೋರ್ಟ್ ಮೇಲೆ ಹೇಳುವುದಕ್ಕೆ ನನಗೆ ಶಕ್ತಿ ಇಲ್ಲ. ಅಷ್ಟು ಅನುಭವವೂ ಕೂಡ ಇಲ್ಲ.

ಇದಾದ ಮೇಲೆ ವೆಂಕಟೇಶ್ ಎಂಬತಕ್ಕಂಥವನು ದಿನಾಂಕ ೧೩–೭–೮೨ರಲ್ಲಿ ೨೨ ಕ್ವಿಂಟಾಲ್ ಅಕ್ಕಿ, ೨ ಕ್ವಿಂಟಾಲ್ ಗೋದಿ ಹಿಟ್ಟು, ನಾಲ್ಕು ಕ್ವಿಂಟಾಲ್ ಗೋದಿ ಇದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಮತ್ತೆ ದಿನಾಂಕ ೧೨–೨–೮೨ರಲ್ಲಿ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಬಿಲ್ ನಂಬರ್ ೩೫೭೫ ಇದರ ಪ್ರಕಾರ ೧೪ ಕ್ವಿಂಟಾಲ್ ಅಕ್ಕಿ ತೆಗೆದುಕೊಂಡು ಬಂದರೂ ಅದನ್ನು ಜಮಾಕ್ಕೆ ತೆಗೆದುಕೊಳ್ಳಲಿಲ್ಲ. ದಿನಾಂಕ ೨೨–೨–೮೩ರಲ್ಲಿ ೧೮೦ ಕೆ.ಜಿ. ಮೈದಾ, ನಾಲ್ಕು ನೂರು ಕೆ.ಜಿ. ಸಕ್ಕರೆ ಕೊಂಡುಕೊಂಡು ಬಂದರೂ ಕೂಡ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅದಕ್ಕೆಲ್ಲ ಹಣವನ್ನು ಕೊಟ್ಟಿದ್ದರೂ ಜಮಾ ತೆಗೆದುಕೊಂಡಿಲ್ಲ. ಕ್ಯಾಷ್ ಬುಕ್‌ನಲ್ಲಿ ಇದ್ದರೂ ಸಹ ಜಮಾ ಬಂದಿಲ್ಲ. ಬಿಲ್ ನಂಬರ್ ೫೭೫೮೦. ದಿನಾಂಕ ೭–೨–೮೩ ಇದರಲ್ಲಿ ಎರಡು ಚೀಲ ಮೈದ, ನಾಲ್ಕು ಚೀಲ ರವೆ, ಮೂರು ಚೀಲ ಗೋದಿ ಇವುಗಳನ್ನು ತೆಗೆದುಕೊಂಡು ಬಂದರೂ ಕೂಡ ಜಮಾ ತೆಗೆದುಕೊಂಡಿರುವುದು ಕಡಿಮೆ ಪ್ರಮಾಣ ದಲ್ಲಿ ತೆಗೆದುಕೊಂಡಿರುತ್ತಾನೆ. There is no question of vindictiveness here. Today, I may be in the ruling party and you may be in the opposite parties. That is a different thing. I have got highest regards for you. ಜೊತೆಗೆ ನಾವು ಷೋಕಾಸ್ ನೋಟೀಸ್ ಕೊಟ್ಟಮೇಲೆ, ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್‌ನವರು ಸೀಸ್ ಮಾಡಿದ್ದಾರೆ. ಅದೆಲ್ಲ ಆದಮೇಲೆ charge sheet has been framed.

ಶ್ರೀ ಕೆ.ಹೆಚ್. ರಂಗನಾಥ್.—ತಕ್ಷಣವೇ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಡಿ ಕ್ರಮ ತೆಗೆದು ಕೊಳ್ಳಬೇಕಾಗಿತ್ತು. ಎಕ್ಸಿಕ್ಯುಟೀವ್ ಕಮಿಟಿಯನ್ನು ಡೈರೆಕ್ಟರನ್ನು ಸೂಪರ್‌ಸೀಡ್ ಮಾಡತಕ್ಕಂಥ ಪರಿಸ್ಥಿತಿ ಬರುತ್ತಿತ್ತು. ಅಧ್ಯಕ್ಷರು ಪ್ರತಿದಿವಸ ಹೋಗತಕ್ಕಂಥ ಪರಿಸ್ಥಿತಿಯೂ ಇರುತ್ತದೆ, ಹೋಗದೆ ಇರತಕ್ಕಂಥ ಪರಿಸ್ಥಿತಿಯೂ ಇರುತ್ತದೆ. ಮಿಸ್ ಅಪ್ರಾಪ್ರಿಯೇಷನ್ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದೆಂದು ಹೇಳಲಿಲ್ಲವಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದು ನನಗೆ ಬಿಟ್ಟಿದ್ದು. ನಾನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಜೆ.ಡಿ. ಸೋಮಪ್ಪ.—ಅಸಿಸ್ಟೆಂಟ್ ರಿಜಿಸ್ಟ್ರಾರ್ ಮೇಲೆ ಏನು ಕ್ರಮ ತೆಗೆದುಕೊಂಡಿರಿ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಮೊಯಿಲಿಯವರೇ ನಿಮ್ಮ ಸೋಮಪ್ಪನವರು ಡಿಫೈನ್ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ಎದ್ದೆದ್ದು ಕೇಳುತ್ತಿದ್ದಾರೆ. ಅವರು ಆಕ್ಸಿಡೆಂಟ್ ಆಗಿ ಸತ್ತುಹೋಗಿರುತ್ತಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ನಾನು ಅಲ್ಲಿಗೆ ಹೋಗಬೇಕಾಗುತ್ತದೆ. ಅಲ್ಲಿ ಹೋಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮ್ಯಾನೇಜ್ ಮೆಂಟ್ ಜವಾಬ್ದಾರರಲ್ಲವೆಂದು ತಾವು ಹೇಳತಕ್ಕಂಥದ್ದು ವಿತಂಡವಾದವಾಗಿರುತ್ತದೆ. ಯಾವರೀತಿ ಜವಾಬ್ದಾರರಾಗುವುದಿಲ್ಲ. ೧೯೮೧–೮೨ರ ಆಡಿಟ್ ರಿಪೋರ್ಟ್ ಬಂದಿದೆ. ೮೨ ಸಾವಿರ ರೂಪಾಯಿ ಗಳು ಮಿಸ್ ಅಪ್ರಾಪ್ರಿಯೇಷನ್ ಬಂದ ಮೇಲೆ ಅವರ ಮೇಲೆ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ. Management have connived with them. They are party to this. How do you say that managing committee is not responsible?

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ ಹಿಂದೆ ಅಪೆಕ್ಸ್ ಬ್ಯಾಂಕ್‌ನಲ್ಲಿ ಮೂರು ಲಕ್ಷ ರೂಪಾಯಿ ಗಳ ಕ್ಯಾಶ್ ಕಳುವಾಯಿತು. ಸ್ಪ್ರಾಂಗ್ ರೂಮ್ ಬೀಗದ ಕೈಯನ್ನು ಯಾರ ಕೈಯಲ್ಲಿ ಕೊಡ ಬೇಕಾಗಿತ್ತೋ ಅವರ ಕೈಗೆ ಕೊಡದೆ ಡ್ರಾನಲ್ಲಿ ಇಟ್ಟು ಹೋಗಿದ್ದ ಎಂದು ಹೇಳಿದರೆ, ಆಡಳಿತ ಮಂಡಲಿಯವರನ್ನು ಸೂಪರ್‌ಸೀಡ್ ಮಾಡಲು ಸಾಧ್ಯವಾಗುತ್ತದೆಯೇ. ನಾನು ನಿಮಗೆ ಮಿಸ್ ಅಪ್ರಾಪ್ರಿಯೇಷನ್ ಮಾಡಿದ್ದಾರೆಂದು ಹೇಳಿದರೆ ದುಡ್ಡು ಬರುತ್ತದೆಯೇ ? ಪ್ರಶ್ನೆ ಏನು ಎಂದರೆ ಸೆಕ್ರೆಟರಿ ಇಲ್ಲವೇ ಎಂದು ಕೇಳಿದರೆ ಸೆಕ್ರೆಟರಿಯವರೂ ಇದ್ದರು, ಜಿಲ್ಲಾ ಬ್ಯಾಂಕ್ ಸೂಪರ್ ವೈಸರ್ ಇದ್ದರೂ, ಅವರು ಏನು ಮಾಡುತ್ತಿದ್ದರೂ ಎಂದರೆ ದಿನನಿತ್ಯ ಸ್ಟಾಕ್ ನೋಡುತ್ತಿದ್ದರು, ಬ್ಯಾಲೆನ್ಸ್ ನೋಡತಕ್ಕಂಥದ್ದು, ಕ್ಯಾಶ್ ನೋಡತಕ್ಕಂಥದನ್ನು ಅವರ ಕರ್ತವ್ಯ ಮಾಡುತ್ತಿದ್ದರು. ಕಾರ್ಯಕಾರಿ ಮಂಡಲಿ ಆಗಲಿ, ಅಧ್ಯಕ್ಷರಾಗಲಿ ಕ್ಯಾಶ್ ಬ್ಯಾಲೆನ್ಸ್ ನೋಡಲು ಸಾಧ್ಯವೇ ?

ಶ್ರೀ ಆರ್.ಎಲ್. ಜಾಲಪ್ಪ.—ನಾನು ಅಧ್ಯಕ್ಷನಾಗಿದ್ದಾಗ ಅದನ್ನೆಲ್ಲ ಮಾಡುತ್ತಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್.—ಕಾರ್ಯಕಾರಿ ಮಂಡಲಿ, ಆಡಳಿತ ಮಂಡಲಿಯನ್ನು ಸೂಪರ್ ಸೀಡ್ ಮಾಡುವುದಕ್ಕೂ, ತಪ್ಪು ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇರೆ ಬೇರೆ ವ್ಯತ್ಯಾಸವಿದೆ. ನಾವು ಯಾರ ಮೇಲೆ ಅಂದರೆ ತಪ್ಪು ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಅಂದರೆ ನೀವು ಅವತ್ತೇ ಕ್ರಿಮಿನಲ್ ಕೇಸ್ ಹಾಕ ಬೇಕಾಗಿತ್ತು. ಡೆಪ್ಯುಟಿ ರಿಜಿಸ್ಟ್ರಾರ್ ಬಹಳ ಒಳ್ಳೆಯ ಅಧಿಕಾರಿಗಳು ಇರುತ್ತಾರೆ, ಅವರ ಬಗ್ಗೆ ನಾನು ಹೇಳುತ್ತಿಲ್ಲ. ಅವರು ಇನ್ಸ್‌ಪೆಕ್ಷನ್ ಮಾಡಿರುವುದು ಏನು ತಪ್ಪು ಎಂದು ಹೇಳಲಿಲ್ಲ. ಅವರು ರಿಪ್ಲೆ ಕೊಡುವಾಗ ಹೇಳಿದ್ದಾರೆ. ತಪ್ಪು ನಮಗೆ ಕಂಡುಬಂದಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಏನೇ ಇರಲಿ, ಅಪೆಕ್ಸ್ ಬ್ಯಾಂಕ್‌ನಲ್ಲಿ ಮೂರು ಲಕ್ಷ ರೂಪಾಯಿಗಳು ಕಳೆದು ಹೋಯಿತಲ್ಲ, ಅದು ಇವತ್ತಿನವರೆಗೂ ಸಿಕ್ಕಿಲ್ಲ. ಸಿಕ್ಕದಿದ್ದರೆ ಅದಕ್ಕೆ ಕಾರ್ಯಕಾರಿ ಮಂಡಲಿಯನ್ನೇ ಸೂಪರ್‌ಸೀಡ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—Analogy is no argument.

ಶ್ರೀ ಕೆ. ಹೆಚ್. ರಂಗನಾಥ್.—ಕಾರ್ಯಕಾರಿ ಮಂಡಲಿಯನ್ನು ಸೂಪರ್‌ಸೀಡ್ ಮಾಡು ವುದಕ್ಕೂ, ತಪ್ಪು ಮಾಡಿದವರನ್ನು ಶಿಕ್ಷೆಗೆ ಒಳಪಡಿಸುವುದಕ್ಕೆ ಬೇರೆ ಬೇರೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ.—ಕಾಮನ್‌ಸೆನ್ಸ್ ಇರತಕ್ಕಂಥವರು ಎಲ್ಲರೂ ಇದನ್ನು ಅರ್ಥ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಕಾಮನ್‌ಸೆನ್ಸ್ ಎಂದರೆ ಏನು ಅರ್ಥ ಸ್ವಾಮಿ ?

ಶ್ರೀ ಕೆ.ಹೆಚ್. ರಂಗನಾಥ್.—ಕಾಮನ್‌ಸೆನ್ಸ್ ನಮಗೆ ಏನು ಅಷ್ಟಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ನಿಮಗೆ ನಾನು ಹೇಳಲಿಲ್ಲ. ನೀವು ಏತಕ್ಕೆ...

ಶ್ರೀ ಕೆ. ಹೆಚ್. ರಂಗನಾಥ್.—ದಿನನಿತ್ಯ ಇಂಥ ಪ್ರಶ್ನೆಗಳು ಬರುತ್ತಿರುತ್ತವೆ. ನಾವು ತೀರ್ಮಾನ ತೆಗೆದುಕೊಳ್ಳುವಾಗ ಕಾರ್ಯಕಾರಿ ಮಂಡಲಿಯೇ ತಪ್ಪು ಮಾಡಿರಲಿ, ಅಧಿಕಾರಿಗಳೇ ತಪ್ಪು ಮಾಡಿರಲಿ, ಉದ್ದೇಶಪೂರ್ವಕವಾಗಿ ಮಾಡಿದ್ದರೆ ಅದನ್ನು ಕೂಡ ತಾವು ಯೋಚನೆ ಮಾಡ ಬೇಕಲ್ಲ. ಆದ್ದರಿಂದ ವೈಯಕ್ತಿಕವಾಗಿ ಏನಾದರೂ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಪ್ರಶ್ನೆ ಕೇಳುತ್ತೇನೆ. ೧೯೮೧–೮೨ರ ಆಡಿಟ್ ಆಗಿದೆ, ಆಡಿಟ್ ರಿಪೋರ್ಟ್ ಇಟ್ಟಿದ್ದರೂ, ೫ ಜನ, ೮೫ ಸಾವಿರ ರೂಪಾಯಿ ಮಿಸ್ ಅಪ್ರಾಪ್ರಿಯೇಷನ್ ಮಾಡಿದ್ದರೂ ಅವರಿಂದ ಏತಕ್ಕೆ ಹಣವನ್ನು ವಸೂಲು ಮಾಡಲಿಲ್ಲ ? ಆಮೇಲೆ ಜಿಲ್ಲಾ ಬ್ಯಾಂಕ್ ಬಗ್ಗೆ ಬಂದರೆ, ನಾಲ್ಕು ವರ್ಷಗಳ ಹಿಂದೆ ನಾನು ಶ್ರೀ ಕೃಷ್ಣಪ್ಪನವರು ಹಾಗೂ ಇನ್ನೂ ಕೆಲವರು ಅವರ ಮನೆಯಲ್ಲಿ ಸೇರುತ್ತಿದ್ದೆವು. ಕೆಲವು ಸಲ ಅವರ ಮನೆಯಲ್ಲಿ ಊಟಕ್ಕೆ ಹಾಕುತ್ತಿದ್ದರು. ಆದ್ದರಿಂದ ಅವರು ನಮಗೆ ಶತ್ರುಗಳೇನೂ ಅಲ್ಲ, ಇದರ ಜೊತೆಗೆ ನನ್ನ ಗಂಟು ಅವರು ತಿಂದಿಲ್ಲ ಮತ್ತು ಅವರ ಗಂಟನ್ನು ನಾನು ತಿಂದಿಲ್ಲವೆಂದು ನಾನು ಮೊಟ್ಟ ಮೊದಲನೆಯದಾಗಿ ಹೇಳಬಯಸುತ್ತೇನೆ. ಮಾನ್ಯ ರಂಗನಾಥ್ ಅವರು ಜಿಲ್ಲಾ ಬ್ಯಾಂಕ್ ಬಗ್ಗೆ ಪ್ರಸ್ತಾಪ ಮಾಡಿ ಅಲ್ಲಿನ ಡಿಫಾಜಿಟ್ಸ್ ಮತ್ತು ಲೆಂಡಿಂಗ್ ಬಗ್ಗೆ ಹೇಳಿದರು. ಅಲ್ಲಿ ಡಿಫಾಜಿಟ್ಸ್ ಮತ್ತು ಲೆಂಡಿಂಗ್‌ನಲ್ಲಿ ಇಂಪ್ರೂ ವ್‌ಮೆಂಟ್ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಓವರ್–ಡ್ಯೂಸ್ ಬಗ್ಗೆ ಹೇಳಲಿಲ್ಲ. ಇದು ಯಾವರೀತಿ ಜಾಸ್ತಿಯಾಗಿದೆ ಎಂಬುದನ್ನು ಎರಡನೇ ಪುಟದಲ್ಲಿದೆ. ಓವರ್–ಡ್ಯೂಸ್ ೧೯೭೫ ರಲ್ಲಿ ೧೬೨ ಲಕ್ಷ ಇದ್ದರೆ, ೧೯೭೭ರಲ್ಲಿ ೧೬೫ ಲಕ್ಷಕ್ಕೆ ಹೋಗಿದೆ. ೧೯೮೦ರಲ್ಲಿ ೧೮೮ ಲಕ್ಷವಿದ್ದರೆ ೧೯೮೨ರಲ್ಲಿ ೨೨೩ ಲಕ್ಷಕ್ಕೆ ಹೋಗಿದೆ. ಅದೇರೀತಿ ೧೯೮೩ರಲ್ಲಿ ೩೯೨ ಲಕ್ಷಕ್ಕೆ ಹೋಗಿದೆ. ಓವರ್–ಡ್ಯೂಸ್ ಈ ರೀತಿ ಜಾಸ್ತಿಯಾಗಿದ್ದರೆ ವಸೂಲಿ ಯಾವರೀತಿ ಆಗಿದೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಈ ಜಿಲ್ಲಾ ಬ್ಯಾಂಕ್‌ಗೆ ಕರ್ನಾಟಕ ಸ್ಟೇಟ್ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್‌ನವರು ಒಂದು ಕಾಗದ ಬರೆದು ೧೯೮೦–೮೧ರಲ್ಲಿ ವಸೂಲಿ ಸರಿಯಾಗಿ ಆಗಿಲ್ಲ, ನಿಮ್ಮ ಅಕೌಂಟ್ಸ್ ಸರಿಯಾಗಿಲ್ಲ, ಮತ್ತು ತಪ್ಪು ಲೆಕ್ಕಗಳನ್ನು ಕೊಟ್ಟಿದ್ದೀರಿ ಎಂದು ತಿಳಿಸಿದ್ದಾರೆ. ಇವರು 'ಬಿ' ಕಾಂಪೋನೆಂಟ್ ಗೊಬ್ಬರವನ್ನು ಹಂಚಬೇಕಾಗಿತ್ತು. ಅದಕ್ಕಾಗಿ ಏನು ಮಾಡಿದ್ದಾರೆಂದರೆ, ವಿನಾಯಕ ಡಿಪೋ ಎಂಬ

ಹೆಸರಿನ ಖಾಸಗಿ ಡಿಪೋ ಇಲ್ಲದಿದ್ದರೂ ಸಹ ಅದರ ಹೆಸರಿನಲ್ಲಿ ಬಿಲ್ ಹಾಕಿಸಿ ಲೆಕ್ಕದಲ್ಲಿ ತೋರಿಸಿದ್ದಾರೆ. ಬಿಲ್ ಹಾಕಿಸಿಕೊಂಡು ಬರಲು ೫ ರೂಪಾಯಿಗಳನ್ನು ಕೊಡುವುದು, ಈ ರೀತಿ ಅಡ್ಜೆಸ್ಟ್ ಮಾಡಿದ್ದಾರೆ, ಬೂದಿಗೆರೆಯ ಶ್ರೀ ಶ್ರೀನಿವಾಸ್ ಎಂಬುವರು ಈ ಬಗ್ಗೆ ರಿಜರ್ವ್ ಬ್ಯಾಂಕ್‌ಗೆ ತನಿಖೆ ಮಾಡಬೇಕೆಂದು ಒಂದು ಪತ್ರ ಬರೆದಿದ್ದಾರೆ. ಇದರ ಆಧಾರದ ಮೇಲೆ ಅವರು ತನಿಖೆ ಮಾಡಬೇಕೆಂದು ನಮಗೆ ತಿಳಿಸಿದ ಮೇಲೆ ತನಿಖೆ ಮಾಡಲಾಯಿತು. ಇದರ ಒಂದು ವರದಿ ಸಹ ಇದೆ. ಅಡ್ಜೆಸ್ಟ್‌ಮೆಂಟ್ ಮೂಲಕ ೪೦ ಲಕ್ಷ ರೂಪಾಯಿಗಳ ವಸೂಲಿಯಾಗಿದೆ ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೆ ಅವರು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಇದು ಒಂದಾಯಿತು. ಇನ್ನು...

ಶ್ರೀ ಕೆ.ಹೆಚ್. ರಂಗನಾಥ್.— ಷೋಕಾಸ್ ನೋಟೀಸ್‌ನಲ್ಲಿ ಇದನ್ನೆಲ್ಲಾ ಎಲ್ಲಿ ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ.— ಈ ಮೊದಲು ತಾವೂ ಸಹ ಮಂತ್ರಿಗಳಾಗಿದ್ದವರು, ಆದರೆ ನಾನು ಹೊಸಬ. ಆದರೆ ತಾವು ಹಳಬರು. ಆದ್ದರಿಂದ ತಮಗೆ ಗೊತ್ತಿರುವಂತೆ ಇದನ್ನೆಲ್ಲಾ ಅದರಲ್ಲಿ ತೋರಿಸುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.— ತಾವು ಮಂತ್ರಿ ಪದವಿಗೆ ಹೊಸಬರಿದ್ದರೂ ಸಹ ಈ ಸೊಸೈಟಿಗೆ ಹಳಬರು ಆದ್ದರಿಂದ ನಾನು ತಮ್ಮಲ್ಲಿ ಕೇಳುವುದೇನೆಂದರೆ, ಷೋಕಾಸ್ ನೋಟೀಸ್‌ನಲ್ಲಿ ಇದನ್ನೆಲ್ಲಾ ಎಲ್ಲಿ ಹೇಳಿದ್ದಾರೆ ಎಂದು?

ಶ್ರೀ ಆರ್. ಎಲ್. ಜಾಲಪ್ಪ.— ಅಪೆಕ್ಸ್ ಬ್ಯಾಂಕ್‌ನವರು ಬರೆದಿರುವ ಪತ್ರದ ಬಗ್ಗೆ ನಾನು ಹೇಳುತ್ತಿದ್ದೇನೆ. ಇದನ್ನೆಲ್ಲಾ ಷೋಕಾಸ್ ನೋಟೀಸ್‌ನಲ್ಲಿ ಕೊಡುತ್ತಾರೆಯೋ? ಆಡಿಟ್ ರಿಪೋರ್ಟ್‌ನಲ್ಲಿ ಹೇಳಿರುವ ಬಗ್ಗೆ ನಾನು ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ನೆಲಮಂಗಲ ಬ್ರಾಂಚ್‌ಗೆ ಸಂಬಂಧಪಟ್ಟಂತೆ ಎಸ್. ಟಿ. ಲೋನ್ ೩೨ ಲಕ್ಷ ಬಾಕಿ ಇದ್ದರೂ ಸಹ ಎಂ. ಟಿ. ಲೋನ್ ಕೊಟ್ಟಿದ್ದಾರೆ. ಇಲ್ಲಿ ಎಸ್.ಟಿ. ಲೋನ್ ವಸೂಲಿಯಾಗಿರುವುದು ಮತ್ತು ಎಂ.ಟಿ. ಲೋನ್ ಕೊಟ್ಟಿರುವುದು ಒಂದೇ ದಿನ. ಇದನ್ನು ಸಹಕಾರಿಗಳು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಇದು ಬೇರೆಯವರಿಗೆ ಅಷ್ಟಾಗಿ ಅರ್ಥವಾಗುವುದಿಲ್ಲ. ನೆಲಮಂಗಲ ತಾಲ್ಲೂಕ್‌ನ ಬಿನ್ನಿನ್‌ಕೋಟೆಯ ೭ ಜನರಿಂದ ಎಸ್.ಟಿ. ಲೋನ್ ಬಾಕಿಯಿದ್ದರೂ ಸಹ ತಾ|| ೧೭-೪-೧೯೮೨ರಂದು ಎಂ. ಟಿ. ಲೋನ್ ಹಂಚಿದ್ದಾರೆ. ಇದನ್ನು ಕೊಟ್ಟನಂತರ ತಾ|| ೨೨-೬-೧೯೮೨ರಂದು ಎಸ್. ಟಿ. ಲೋನ್ ವಾಪಸ್ ಬಂದಿದೆ ಎಂದು ಲೆಕ್ಕದಲ್ಲಿ ತೋರಿಸಿದ್ದಾರೆ. ಇಲ್ಲಿ ಅಡ್ಜೆಸ್ಟ್ ಮಾಡಿದ್ದಾರೆಂದು ಅರ್ಥವಾಗುದಿಲ್ಲವೇ?

ಇದೇರೀತಿ ಹಾರೋಹಳ್ಳಿ ಬ್ರಾಂಚ್‌ಗೂ ಸಹ ಹೊಸ ಸಾಲವನ್ನು ಕೊಟ್ಟಿದ್ದಾರೆ. ಸುಸ್ತಿ ಬಾಕಿ ಇದ್ದರೂ ಸಹ ಹೊಸದಾಗಿ ಸಾಲವನ್ನು ಕೊಟ್ಟು ಅನಂತರ ತಾ|| ೩೧-೬-೧೯೮೨ರಂದು ಸುಸ್ತಿ ಬಾಕಿಯನ್ನು ವಸೂಲಿ ಮಾಡಿದ್ದಾರೆ. ಇದು ಏನನ್ನು ತೋರಿಸುತ್ತದೆ?

ಶ್ರೀ ಕೆ ಹೆಚ್. ರಂಗನಾಥ್.— ಷೋಕಾಸ್ ನೋಟೀಸ್‌ನಲ್ಲಿ ಇದನ್ನೆಲ್ಲಾ ಕೊಟ್ಟಿಲ್ಲ,

ಶ್ರೀ ಆರ್.ಎಲ್. ಜಾಲಪ್ಪ.— ಪಂಚಾಂಗ ಹೋದರೆ ನಕ್ಷತ್ರ ಹೋಗುತ್ತದೆಯೋ?

ಶ್ರೀ ಕೆ. ಹೆಚ್. ರಂಗನಾಥ್.— ಷೋಕಾಸ್ ನೋಟೀಸ್‌ನಲ್ಲಿ ಇದೆಲ್ಲದರ ಬಗ್ಗೆಯೂ ಸಮಜಾಯಿಷಿ ಕೇಳಬೇಕಾಗಿತ್ತು?

ಶ್ರೀ ಆರ್. ಎಲ್. ಜಾಲಪ್ಪ. —ನಾನೇನೂ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಲಿಲ್ಲ. ಷೋಕಾಸ್ ನೋಟೀಸ್ ಕೊಟ್ಟಿದ್ದಕ್ಕೇ ಇಷ್ಟೊಂದು ಒತ್ತಡ ಬಂತು.

ಶ್ರೀ ಕೆ.ಹೆಚ್. ರಂಗನಾಥ್.— ಒತ್ತಡದ ಪ್ರಶ್ನೆಯಲ್ಲ. ಇದು ಅನುಮಾನ ಬರುವ ರೀತಿಯಲ್ಲಿದೆ ಎಂದು ನಾನು ಹೇಳಿದ್ದು.

ಶ್ರೀ ಆರ್. ಎಲ್. ಜಾಲಪ್ಪ.— ಆಡಿಟ್ ವರದಿಯ ಪ್ರಕಾರ ಇದೇ ಹಾರೋಹಳ್ಳಿ ಬ್ರಾಂಚ್‌ನಿಂದ ೫,೭೬,೯೨೮ ರೂಪಾಯಿಗಳು ವಸೂಲಾಗಬೇಕಿತ್ತು. ಆದರೆ ವಸೂಲಾಗಿರುವುದು ಕೇವಲ ೧

ಲಕ್ಷದ ೯೧ ಸಾವಿರ ರೂಪಾಯಿಗಳು ಮಾತ್ರ. ಇಲ್ಲಿ ೩೦ ಪರ್ಸೆಂಟ್ ಕೂಡ ವಸೂಲಿಯಾಗಿಲ್ಲ. ಆದರೂ ಸಹ ಹೊಸ ಸಾಲ ಕೊಟ್ಟಿದ್ದಾರೆ. ಈ ಬಗ್ಗೆ ಒಂದು ಅಬ್‌ಸರ್‌ವೇಷನ್ ಮಾಡಿದ್ದಾರೆ. ಅದು ಈರೀತಿ ಇದೆ.—

> "If proper investigation conducted and the enquiry taken up on all the above points noted, some more light will be thrown regarding the way how recovery of loans were affected. If collection of short term loans were really achieved there was no reason to show very poor percentage of recovery of loans under M. T. which are more secure and the reasons behind this low recovery in M.T. loan were due to the fact that M.T. once paid cannot be renewed, But in case of short term loan, there is provision for renewal and progress on collection can be shown by effecting adjustments."

ಸ್ವಾಮಿ, ಇದಕ್ಕೆ ನಾನು ಪ್ರೂವ್ ಮಾಡುತ್ತೇನೆ. ನಾನು ೧೯೭೮ರ ನವೆಂಬರ್‌ನಲ್ಲಿ ಜಿಲ್ಲಾ ಬ್ಯಾಂಕ್‌ಗೆ ರಾಜೀನಾಮೆ ಕೊಟ್ಟಮೇಲೆ ತಾ|| ೩೦-೬-೧೯೮೦ರಲ್ಲಿ ಹಳೆಯ ಸಾಲಗಳ ಡಿಮ್ಯಾಂಡ್ ಇದ್ದದ್ದು ೫೦.೮೬ ಲಕ್ಷವಾದರೆ ಕಲೆಕ್ಟ್ ಆಗಿರುವುದು ೨೧ ಸಾವಿರ ರೂಪಾಯಿಗಳು ಮಾತ್ರ. ತಾ|| ೩೦-೬-೧೯೮೧ರಲ್ಲಿ ಡಿಮ್ಯಾಂಡ್ ಇದ್ದದ್ದು ೩೮ ಲಕ್ಷವಾದರೆ ವಸೂಲಿಯಾದದ್ದು ೯ ಲಕ್ಷದ ೨೭ ಸಾವಿರ ರೂಪಾಯಿಗಳು ತಾ|| ೩೦-೬-೧೯೮೨ರಲ್ಲಿ ಡಿಮ್ಯಾಂಡ್ ಇದ್ದದ್ದು ೫೯ ಲಕ್ಷವಾದರೆ ೨೩ ಸಾವಿರ ರೂಪಾಯಿಗಳು ವಸೂಲಿಯಾಗಿದೆ. ತಾ|| ೩೦-೬-೧೯೮೩ರಂದು ೭೫ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಇದ್ದರೆ, ೩೫ ಲಕ್ಷ ರೂಪಾಯಿಗಳು ವಸೂಲಿಯಾಗಿದೆ. ಎಂ.ಟಿ. ಲೋನ್ ೧೯೮೦ರಲ್ಲಿ ೪೮ ಲಕ್ಷ ಬಾಕಿ ಇದ್ದರೆ ೧೨ ಲಕ್ಷ ವಸೂಲಿಯಾಗಿದೆ. ತಾ|| ೩೦-೬-೧೯೮೧ರಲ್ಲಿ ೪೦ ಲಕ್ಷ ಬಾಕಿ ಇದ್ದರೆ ೪ ಲಕ್ಷದ ೯೬ ಸಾವಿರ ರೂಪಾಯಿಗಳು ವಸೂಲಿಯಾಗಿದೆ. ತಾ|| ೩೦-೬-೧೯೮೨ರಲ್ಲಿ ೪೨ ಲಕ್ಷದ ೮೨ ಸಾವಿರ ಬಾಕಿ ಇದ್ದರೆ ವಸೂಲಿಯಾಗಿರುವುದು ೭ ಲಕ್ಷ ರೂಪಾಯಿಗಳು. ತಾ|| ೩೦-೬-೧೯೮೩ರಲ್ಲಿ ೪೯ ಲಕ್ಷ ಬಾಕಿ ಇದ್ದರೆ ವಸೂಲಿಯಾಗಿರುವುದು ೧೧ ಲಕ್ಷ ರೂಪಾಯಿಗಳು. ಎಂ. ಟಿ. ಕನ್‌ವರ್ಷನ್ ೧೯೮೦ರಲ್ಲಿ ೨೨ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಇದ್ದರೆ ೭ ಲಕ್ಷ ವಸೂಲಿಯಾಗಿದೆ. ತಾ|| ೩೦-೬-೧೯೮೧ರಲ್ಲಿ ಡಿಮ್ಯಾಂಡ್ ೧೯ ಲಕ್ಷದ ೨೭ ಸಾವಿರ ವಿದ್ದರೆ ೩ ಲಕ್ಷದ ೫೯ ಸಾವಿರ ರೂಪಾಯಿಗಳು ವಸೂಲಿಯಾಗಿದೆ. ತಾ|| ೩೦-೬-೧೯೮೨ರಲ್ಲಿ ೨೪ ಲಕ್ಷ ಡಿಮ್ಯಾಂಡ್ ಇದ್ದರೆ ೩.೨೩ ಲಕ್ಷ ರೂಪಾಯಿಗಳು ವಸೂಲಿಯಾಗಿದೆ. ತಾ|| ೩೦-೬-೧೯೮೩ರಂದು ೨೦.೯೫ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಇದ್ದರೆ ೧.೩೫ ಲಕ್ಷ ರೂಪಾಯಿಗಳು ವಸೂಲಿಯಾಗಿದೆ. ಇದು ಏನನ್ನು ತೋರಿಸುತ್ತದೆ? ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಒಂದು ಪ್ರಶ್ನೆ ಕೇಳಿದರು. ಜನವರಿ ೧೯೮೩ರ ೩೧ನೇ ತಾರೀಖು ರಾತ್ರಿ ಕಾರು ಆಕ್ಸಿಡೆಂಟ್ ಆಗಿದೆ. ಫೆಬ್ರುವರಿ ೧ನೇ ತಾರೀಖು ಡ್ರೈವರ್‌ನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಏನಾಯಿತು ಎಂಬುದರ ಬಗ್ಗೆ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಅಧ್ಯಕ್ಷರು ದೊಡ್ಡಬಳ್ಳಾಪುರಪಲ್ಲಿ ಇದ್ದಾರೆಯೇ ಎಂದು ನೋಡಿಕೊಂಡು ದೊಡ್ಡಬಳ್ಳಾಪುರದಿಂದ ವಾಪಸ್ಸು ಬರುವಾಗ ಕಾರು ಆಕ್ಸಿಡೆಂಟ್ ಆಗಿದೆ. ೩೧ನೇ ತಾರೀಖು ಜನವರಿ ತಿಂಗಳು ಕಾರು ದೊಡ್ಡಬಳ್ಳಾಪುರಕ್ಕೆ ಹೋಗಿದೆ. ಚುನಾವಣಾ ಸಮಯದಲ್ಲಿ ಬ್ಯಾಂಕಿನ ಕಾರು ಹೊರಗಡೆ ತೆಗೆದುಕೊಂಡು ಹೋಗಬಾರದೆಂದು ನಿಯಮವಿದೆ. ಅಧ್ಯಕ್ಷರು ದೊಡ್ಡಬಳ್ಳಾಪುರದಲ್ಲಿ ಇದ್ದಾರೆಯೇ ಇಲ್ಲವೇ ಎಂಬುದನ್ನು ಫೋನ್ ಮಾಡಿ ತಿಳಿದುಕೊಳ್ಳಬಹುದಾಗಿತ್ತು. ಫೋನ್ ಮಾಡಿ ತಿಳಿದುಕೊಳ್ಳುವುದಕ್ಕೆ ನಿಮಗೆ ಆಗಿಲ್ಲ ಕಾರು ೧೭೮ ಕಿಲೋ ಮೀಟರ್ ಮೈಲೇಜ್ ಓಡಿದೆ. ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ೪೦ ಕಿಲೋಮೀಟರ್ ಮಾತ್ರ. ಬೆಂಗಳೂರಿನಿಂದ ದೊಡ್ಡಬಳ್ಳಾಪುರಕ್ಕೆ, ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ಹೋಗುತ್ತಾ ಬರುತ್ತಾ ೮೦ ಕಿಲೋ ಮೀಟರ್ ಮಾತ್ರ ಆಗುತ್ತದೆ. ೧೭೮ ಕಿಲೋ ಮೀಟರ್ ಮೈಲೇಜ್ ಹೇಗಾಗುತ್ತದೆ? ಇಲ್ಲಿ ಲಾಗ್ ಬುಕ್ ಇದೆ. I assume that this was misused for election work.

SRI M. VEERAPPA MOILY.—I have a Point of Order.

ಉಪಾಧ್ಯಕ್ಷರು.—ಮಂತ್ರಿಗಳು ಉತ್ತರ ಕೊಡುವಾಗ ಯಾವ ಪಾಯಿಂಟ್ ಆಫ್ ಆರ್ಡರ್ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಷೋಕಾಸ್ ನೋಟೀಸನ್ನು ಜಾಯಿಂಟ್ ರಿಜಿಸ್ಟ್ರಾರ್ ರವರು ಬ್ಯಾಂಕಿನ ಬಗ್ಗೆ ಕೊಟ್ಟಿದ್ದಾರೆ. ಷೋಕಾಸ್ ನೋಟೀಸ್ ಜಾರಿ ಮಾಡಿದ್ದೀರಿ. ಮಾನ್ಯ ರಂಗನಾಥ್‌ರವರು ಈ ವಿಷಯವನ್ನು ಎತ್ತಿದ್ದಾರೆ, ಅದು ತಮ್ಮ ಮುಂದೆ ಇದೆ. ಮಾನ್ಯ ಸಚಿವರು ಉತ್ತರ ಕೊಡತಕ್ಕ ದಾಟಿ ಏನಿದೆ, ಅವರು ಉತ್ತರ ಕೊಡುವುದಕ್ಕೆ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ಇಲ್ಲಿ ಎತ್ತದೆ ಇರತಕ್ಕ ವಿಚಾರಗಳು ಮತ್ತು ಎತ್ತಿದಂತಹ ವಿಚಾರಗಳು ಎರಡೂ ವಿಚಾರದಲ್ಲಿ ಒಂದು ರೀತಿಯಾಗಿದೆ. ಎನ್‌ಕ್ವಾಯರಿ ಮಾಡತಕ್ಕ ಅಧಿಕಾರಿಗಳು ಅವರಿಗೆ ಅಧೀನವಾಗಿರತಕ್ಕ ಅಧಿಕಾರಿಗಳು. ಮಂತ್ರಿಗಳಿಗೆ ಅಧೀನವಾಗಿರತಕ್ಕ ಅಧಿಕಾರಿಗಳನ್ನು ಎನ್‌ಕ್ವಾಯರಿ ಮಾಡಲಿಕ್ಕೆ ಏತಕ್ಕೆ ನೇಮಕಮಾಡಬೇಕು ? ಸೂಪರ್‌ಸೀಡ್ ಮಾಡುವ ರೀತಿಯಲ್ಲಿ ಮಾತನಾಡಿದ್ದೀರಿ, ನೀವೇ ತೀರ್ಮಾನ ಕೊಟ್ಟುಬಿಡಿ. ಈ ಸದನದಲ್ಲಿ ಎತ್ತದೇ ಇರತಕ್ಕ ವಿಚಾರಗಳಿಗೆ ಮಂತ್ರಿಗಳು ಉತ್ತರ ಕೊಟ್ಟರೆ ಏನು ಅನ್ನಬೇಕು. ಇದಕ್ಕೆ ಏನನ್ನಬೇಕು, ರಾಜಕೀಯ ಮಾಡಬೇಡಿ. ನೀವೇ ಸೂಪರ್‌ಸೀಡ್ ಮಾಡಿ. ಅಧಿಕಾರಿಗಳನ್ನು ಏತಕ್ಕೆ ನೇಮಕ ಮಾಡುತ್ತಿದ್ದೀರಿ. ನೀವು ರಾಜಕೀಯವಾಗಿ, ಯಾವುದೋ ಉದ್ದೇಶದಿಂದ ಈ ಸದನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ದಯಮಾಡಿ ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಆರ್. ಎಲ್. ಜಾಲಪ್ಪ.—ನೀವು ಜೋರಾಗಿ ಮಾತನಾಡಿ ಸಾಧಿಸುವುದೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧಪಕ್ಷದ ನಾಯಕರು ಒಂದು ಪಾಯಿಂಟ್ ಆರ್ಡರ್ ಎತ್ತಿದ್ದಾರೆ ಒಂದು ಸೊಸೈಟಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಸರ್ಕಾರಿ ಅಧಿಕಾರಿಗಳು ಎನ್‌ಕ್ವಾಯರಿ ಕಂಡೆಕ್ಟ್ ಮಾಡುವ ರೀತಿಯಲ್ಲಿ ಒಬ್ಬ ಹಿರಿಯ ಸದಸ್ಯರು ಈಗ ಮಾತನಾಡಿದ್ದರಿಂದ ಅದರ ಪರಿಣಾಮ ಸರಿಯಾದ ಉತ್ತರ ಕೊಡಬೇಕಾಗುತ್ತದೆ. ಎನ್‌ಕ್ವಾಯರಿ ಮಾಡಲಿ ಎನ್ನುವ ರೀತಿಯಲ್ಲಿ ಮಾತನಾಡತಕ್ಕಂತಹದು ರಾಜಕೀಯ ಅಲ್ಲವೆ ? ಆ ತರಹ ಮಾತನಾಡಿದರೆ ಒಂದು ರೀತಿಯ ಪರಿಣಾಮವಾಗುವುದಿಲ್ಲವೇ ಎನ್ನುವುದನ್ನು ತಾವೇ ಅರ್ಥಮಾಡಿಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ. Hon. Minister for Co-Operation is meddling with Co-operatives. ಇಂತಹ ಸೊಸೈಟಿಗಳಿಗೆ ನಾವು ಮೆಡಲ್ ಮಾಡಬೇಕು, ಮತ್ತೆ ಇನ್ನೇನನ್ನು ಮಾಡಬೇಕು ? ಗೋಲ್ಡ್ ಮೆಡಲ್ ಕೊಡುವುದಕ್ಕೆ ಆಗುತ್ತದೆಯೆ ?

ಶ್ರೀ ಕೆ. ಎಚ್. ರಂಗನಾಥ್.—ಚುನಾವಣೆಗೆ ಬಳಸಿರಬಹುದು ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಷೋಕಾಸ್ ನೋಟಿಸ್‌ಗೆ ೧೨–೮–೫೩ರಂದು ಉತ್ತರ ಕೊಟ್ಟಿದ್ದಾರೆ. ಆರ್ಡರ್ ಮಾಡಿರತಕ್ಕದ್ದು ಯಾವಾಗ ?

SRI R. L. JALAPPA.—There was no show-cause notice issued. Under section 64 inquiry has been ordered.

SRI K.H. RANGANATH.—Whereas it has come to the notice of the undersigned that there are several grave defacts, irregularities in the functioning of the Bangalore District Central Co-operative Bank, Bangalore as they have been observed by the Assistant Chief Auditor and 441 Auditor attached it, who audited the accounts of the bank. Following are some of the irregularities, disclosing the audit as well as from other reports. ಇಲ್ಲಿ ನೀವು ಹೇಳಿದ್ದು ಯಾವುದೂ ಇಲ್ಲ. ೧೫ ಐಟಂಗಳನ್ನು ಏನು ಹೇಳಿದ್ದೀರಿ, ಅದು ತಮ್ಮ ಹತ್ತಿರವಿದೆ, ಉತ್ತರದಲ್ಲಿ ಹೇಳಿದ್ದೀರಿ. ಅದು ಇದರಲ್ಲಿ ಇದೆಯೇ ? ೧೨–೮–೮೩ರಂದು ಆರ್ಡರ್ ಬಂತು ೧೨–೮–೮೩ರಂದು ಷೋಕಾಸ್ ನೋಟಿಸ್‌ಗೆ ಉತ್ತರ ಕೊಟ್ಟಿದ್ದಾರೆಂದು ಇದೆ, ಇದಕ್ಕೆ ಏನು ಹೇಳಬೇಕು ?

ಉಪಾಧ್ಯಕ್ಷರು.—ಮಂತ್ರಿಗಳು ಅದಕ್ಕೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದರಲ್ಲಿ ಯಾರನ್ನೂ ಡಿಪೆಂಡ್ ಮಾಡತಕ್ಕ ಪ್ರಶ್ನೆಯಿಲ್ಲ.

ಶ್ರೀ ಪಿ. ರಾಂದ್ಯೇವ್.—ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಹೇಳಿದ ಮೇಲೆ ಮಾನ್ಯ ಸದಸ್ಯರು ಮಾತನಾಡಲಿ, I am substanting my point of Order. ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಅದಕ್ಕೆ ಸಮಜಾಯಿಸಿ ಹೇಳುತ್ತೇನೆ. In corroboration of my Point of Order. ಸಹಕಾರ ಇಲಾಖೆಯ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವುದಕ್ಕೆ ನಾವು ಸಹಾಯ ಮಾಡುತ್ತಿದ್ದೇವೆ. ಈಗ ಏನಾಗಿದೆ ಅಂದರೆ ಸಹಕಾರ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. ಈ ಸದನದಲ್ಲಿ ತಾವು ಏನು ಚಾರ್ಜಸ್ ಫ್ರೇಮ್ ಮಾಡಿದ್ದೀರಿ, ಪ್ರಭಾವವಾಗಿರತಕ್ಕದ್ದು ಇದ್ದರೂ ಕೂಡ ಇಂತಹ ಹೇಳಿಕೆಗಳು ರಕ್ಷಣೆ ಕೊಡತಕ್ಕವುಗಳು ಆಗಿವೆ. ಆ ಕೆಲಸವನ್ನು ತಾವು ಮಾಡುತ್ತಿದ್ದೀರಿ. ರಕ್ಷಣೆ ಕೊಡುವ ತೀರ್ಮಾನವನ್ನು ಕೊಡುತಿದ್ದೀರಿ. ಸರ್ಕಾರದ ಅಭಿಪ್ರಾಯವನ್ನು ಮಂತ್ರಿಗಳಾಗಿ ಕೊಡುತ್ತಿದ್ದೀರಿ. ಇದರ ಮೇಲೆ ಪ್ರಭಾವ ಬೀಳುತ್ತದೆ. If you become an interested party the entire enquiry will become superfluous. ಈ ಕೆಲಸ ಮಾಡಿದರೆ, ತಾವು ಅಪ್ರತ್ಯಕ್ಷವಾಗಿ ಅವರಿಗೆ ರಕ್ಷಣೆ ಕೊಡತಕ್ಕ ಕೆಲಸವನ್ನು ತಾವು ಮಾಡುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಡೆಯ ಸದಸ್ಯರು ಎನ್‌ಕ್ವಾಯರಿ ಮಾಡುತ್ತಿರುವಾಗ ರಕ್ಷಣೆ ಕೊಡತಕ್ಕ ರೀತಿಯಲ್ಲಿ ಹೇಳಬಾರದು. ಹಿಂದಿನ ಸಹಕಾರ ಮಂತ್ರಿಗಳು ಆ ರೀತಿ ಹೇಳಿದಾಗ ಇಂದಿನ ಸಹಕಾರ ಮಂತ್ರಿಗಳು ಈ ರೀತಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ವೈ. ಕೆ. ರಾಮಯ್ಯ.—ಯಾವುದೇ ಸೊಸೈಟಿಯಾಗಲಿ ನಿಯಮ ೬೪ರ ಪ್ರಕಾರ ಸರ್ಕಾರೀ ಅಧಿಕಾರಿಯೊಬ್ಬರು ಒಂದು ನೋಟೀಸ್ ಕೊಟ್ಟಿದ್ದಾರೆ ನೋಟೀಸ್‌ಗೆ ಸೊಸೈಟಿಯವರು ಉತ್ತರ ಕೊಡುತ್ತಾರೆ. ಉತ್ತರ ಬಂದ ಮೇಲೆ ಅಧಿಕಾರಿಗಳು ಅದಕ್ಕೆ ಒಂದು ಆರ್ಡರ್ ಮಾಡುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳುವ ತರಹ ಸ್ಟ್ಯಾಚುಟರಿ ಪವರ್ ಇರುವಂತಹ ಅಧಿಕಾರಿ ಕಾನೂನಿನ ಚೌಕಟ್ಟಿನೊಳಗೆ ತೀರ್ಮಾನ ಮಾಡುವಾಗ ಅವರಿಗೆ ಯಾವುದೇ ರೀತಿಯ ಭಯವಾಗಲಿ, ಅಂಜಾಗಲಿ ಬರಬಾರದು ಅವರು ಹೇಳುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ವಿಷಯವನ್ನು ಇಲ್ಲಿ ಎತ್ತರಬಾರದಾಗಿತ್ತು ಅದು ಮೊದಲನೆಯ ತಪ್ಪು, ಎತ್ತಿದಾಗ ಅದಕ್ಕೆ ಉತ್ತರ ಕೊಡಲೇ ಬೇಕಾಗುತ್ತದೆ, ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬಂತು ? ೬೪ನೇ ನಿಯಮದ ಕೆಳಗಡೆ ಎನ್‌ಕ್ವಾಯರಿ ಮಾಡುತ್ತಾರೆ, ಆ ಮೇಲೆ ಕಾನೂನು ಪ್ರಕಾರ ಆರ್ಡರ್ ಮಾಡುತ್ತಾರೆ. ಎನ್‌ಕ್ವಾಯರಿ ಮಾಡಿದಾಗ ರಿಕವರಿ ಆಗುತ್ತದೆ ಅಥವಾ ಶಿಕ್ಷೆಯಾಗುತ್ತದೆ. ೬೪ರ ಕೆಳಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಮತ್ತು ಜಾಯಿಂಟ್ ರಿಜಿಸ್ಟ್ರಾರ್‌ರವರು ತೀರ್ಮಾನ ಮಾಡುತ್ತಾರೆ. ಅವರಿಗೆ ಸಮಾಧಾನವಾಗದಿದ್ದರೆ ಹೈಕೋರ್ಟ್‌ನಲ್ಲಿ ರಿಟ್ ಹಾಕಿ ಕೊಶ್ಚನ್ ಮಾಡಬಹುದು. ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕು ಕೊಟ್ಟಿದ್ದಾರೆ. ಪದೇ ಪದೇ ಕೆಲವರು ಎದ್ದು ಎದ್ದು ಪ್ರಶ್ನೆ ಕೇಳುವುದಾದರೆ ಈ ಸದನ ಕೆಲವೇ ಜನರ ಸ್ವತ್ತೇ ಎನ್ನುವ ಅಭಿಪ್ರಾಯ ಬರುತ್ತದೆ. ನಾವು ಮಾತನಾಡುವವರು ಬಹಳ ಜನ ಇದ್ದೇವೆ. ನಾವು ಬಾಯಿ ಮುಚ್ಚಿಕೊಂಡು ಕಾನೂನಿಗೆ ಒಳಪಟ್ಟು ಸುಮ್ಮನೆ ಇದ್ದೇವೆ. ನಮಗೂ ಗಲಾಟೆ ಮಾಡುವುದಕ್ಕೆ ಬರುತ್ತದೆ. ಕಾನೂನಿನ ಚೌಕಟ್ಟಿನೊಳಗೆ ಸುಮ್ಮನೆ ಕುಳಿತಿದ್ದೇವೆ ಇನ್ನು ಮುಂದೆ ಇಂತಹದ್ದಕ್ಕೆ ಅವಕಾಶ ಕೊಡಬಾರದೆಂದು ನನ್ನ ಕೋರಿಕೆ.

ಉಪಾಧ್ಯಕ್ಷರು.—ಆಯಿತು, ಇಲ್ಲಿಗೆ ಆ ವಿಷಯವನ್ನು ಬಿಡಿ.

(ಗೊಂದಲ)

ಉಪಾಧ್ಯಕ್ಷರು.—ಯಾರಿಗೆ ಅವಕಾಶ ಕೊಡಬೇಕು, ಯಾವ ರೀತಿಯಲ್ಲಿ ಈ ಸದನವನ್ನು ನಡೆಸಬೇಕು ಎನ್ನುವ ಬಗ್ಗೆ ನನಗೆ ಗೊತ್ತಿದೆ. ಆದ್ದರಿಂದ ನನಗೆ ಯಾರು ಹೇಳಿಕೊಡುವ ಅಗತ್ಯವಿಲ್ಲ. ಮತ್ತು ನನಗೆ ಯಾರ ಸಲಹೆ ಕೂಡ ಬೇಕಾಗಿಲ್ಲ.

(ಗೊಂದಲ)

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ ನಾನು ಈ ಇಲಾಖೆಯ ಬಗ್ಗೆ ಮಾತನಾಡ ಲಿಲ್ಲ. ಮೈಸೂರು ಜಿಲ್ಲೆಯಲ್ಲಿರುವಂಥ ಯಾವುದೇ ಸೊಸೈಟಿಗಳು ಕೂಡ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೆಂದು ನಾನು ಕೇಳಿದ್ದೇನೆ...

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಎಲ್ಲರು ಒಂದೇ ಸಮನೆ ಮಾತನಾಡಿದರೆ ಹೇಗೆ ?

ಶ್ರೀ ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ ನಾನು ಕೂಡ ಈ ಡಿಮ್ಯಾಂಡ್ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಶ್ರೀ ಪಿ. ರಾಂದೇವ್.—ಸ್ವಾಮಿ ನನ್ನದೊಂದು ಕ್ರಿಯಾಲೋಪವಿದೆ. ಈ ಸದನದ ಕಾಲ ವನ್ನು ನಾವು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ. ಮತ್ತು ಸರ್ಕಾರದವರು ಈಗಾಗಲೇ ಕೋ-ಅಪರೇಟೀವ್ ಅಕ್ಟ್ ಪ್ರಕಾರವಾಗಿ ನೋಟೀಸ್ ಕೊಟ್ಟಿದ್ದಾರೆ. ಅದು ಎನ್‌ಕ್ವೈರಿ ನಡೆಯು ತ್ತಿದೆ.

ಶ್ರೀ ಎಂ. ಮಹದೇವ್.—ಸ್ವಾಮಿ ರಾಜಕೀಯವನ್ನು ಬೆರಸಿ ಇವರು ತಮಗೆ ಬೇಡದ ಬ್ಯಾಂಕ್‌ಗಳಿಗೆ ಮಾತ್ರ ನೋಟೀಸ್ ಕೊಟ್ಟು ಎನ್‌ಕ್ವೈರಿ ಮಾಡಿಸುತ್ತಿದ್ದಾರೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ ನಂಜನಗೂಡು ಕೋ-ಅಪರೇಟೀವ್ ಸೊಸೈಟಿ ಯಲ್ಲಿ ಒಬ್ಬ ನೌಕರ ಆತ್ಮಹತ್ಯೆ ಮಾಡಿಕೊಂಡದ್ದು ತಮಗೆ ಗೊತ್ತಿಲ್ಲವೇ ?

(ಗೊಂದಲ)

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ಈ ಸಹಕಾರ ಇಲಾಖೆಯ ಬಗ್ಗೆ ಏತಕ್ಕೆ ಇಷ್ಟೊಂದು ಅಸಹಕಾರ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರ ವಾದ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಆತ್ಮಸಾಕ್ಷಿಯಾಗಿ ಆ ಮಾತನ್ನು ಹೇಳು ತ್ತಿದ್ದಾರಾ ? ಬೆಳಗಾಂ ಕೋ-ಅಪರೇಟಿವ್ ಸೊಸೈಟಿಯಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೂ ಕೂಡ ಅಲ್ಲಿ ರಾಜಕೀಯವನ್ನು ಮಾಡಿದ್ದೀರಿ. ಕಾರಣ ಅಲ್ಲಿ ಕಾಂಗ್ರೆಸ್ ಪಕ್ಷದವರು ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ತಾವು ಅಲ್ಲಿ ಸೆಕ್ಷನ್ ೬೪ರ ಪ್ರಕಾರ ನೋಟೀಸ್ ಕೊಟ್ಟು ಎನ್‌ಕ್ವೈರಿ ನಡೆಸುತ್ತಿದ್ದೀರಿ. ಆದರೆ ಬೇರೆ ಸೊಸೈಟಿಗಳು ಅದ್ವಾನದಲ್ಲಿ ನಡೆ ಯುತ್ತಿದ್ದರೂ ಕೂಡ ಅವರಿಗೆ ತಾವು ರಕ್ಷಣೆಯನ್ನು ಕೊಟ್ಟುಕೊಂಡು ಬರುತ್ತಿದ್ದೀರಿ ?

(ಗೊಂದಲ)

ಅದೇ ರೀತಿಯಲ್ಲಿ ಹೇಳುವುದಾದರೆ ಮೈಸೂರು, ಚಿತ್ರದುರ್ಗ, ಬೆಂಗಳೂರು ಈ ಜಿಲ್ಲೆಯ ಕೋ-ಅಪರೇಟಿವ್ ಸೊಸೈಟಿಗಳು ಯಾವ ರೀತಿ ನಡೆಯುತ್ತಿವೆ ಎಂದು ನನಗೆ ಚೆನ್ನಾಗಿ ಗೊತ್ತು.

ಉಪಾಧ್ಯಕ್ಷರು.—ಆರ್ಡರ್, ಆರ್ಡರ್...

ಶ್ರೀ ಎಂ. ಮಹದೇವ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲಾ ಬ್ಯಾಂಕ್ ಯಾವರೀತಿ ನಡೆಯುತ್ತಿದೆ ಎಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯಾ?

ಉಪಾಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಆರ್. ಎಲ್. ಜಾಲಪ್ಪ—ಮಾನ್ಯ ಅಧ್ಯಕ್ಷರೇ ನಾನು ಮುಗಿಸುತ್ತೇನೆ. ಸ್ವಾಮಿ, ಮಾನ್ಯ ಸದಸ್ಯರು ಹೇಳಿದ ಹಾಗೆ ರಾಜಕೀಯವನ್ನು ಉಪಯೋಗಿಸಿ ಅಂಥ ಅಲ್ಪ ಕೆಲಸ ಮಾಡುವ ವನು ನಾನಲ್ಲ. ನಾವು ಇವತ್ತು ಬಳ್ಳಾರಿ, ಹಾಸನ, ಚಿಕ್ಕಮಗಳೂರು; ಮುಂತಾದ ಬ್ಯಾಂಕ್ ಗಳಿಗೂ ಕೂಡ ನೋಟೀಸ್ ಕೊಟ್ಟಿದ್ದೇವೆ. ಎಲ್ಲಿ ಯಾವ ಬ್ಯಾಂಕ್ ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಆ ಬ್ಯಾಂಕಿನಿಂದ ವರದಿ ತರಿಸಿಕೊಂಡು ನಾವು ನೋಟೀಸ್ ಕೊಟ್ಟಿದ್ದೇವೆ. ಯಾರನ್ನು ಸಹ ಬಿಟ್ಟಿಲ್ಲ. ಮಾನ್ಯ ಸದಸ್ಯರೊಬ್ಬರೇ ಸತ್ಯಹರಿಶ್ಚಂದ್ರನೆಂದು ತಿಳಿದುಕೊಂಡಿದ್ದಾರೆ. ಬೆಳಗಾಂ ಬ್ಯಾಂಕ್‌ಗೆ ನೋಟೀಸ್ ಕೊಟ್ಟಿದ್ದೇವೆ. ಸಾಕು ಕುಳಿತುಕೊಳ್ಳಿರಿ ಅಲ್ಲಿ...

SRI K. H. RANGANATH.— I am on a point of oreer. It is the Chair that has to ask the Hon'ble Members to resume their seats. It is not the Honarable Minister.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಯಾವುದನ್ನು ಮಾತನಾಡಿದರೂ ಕೂಡ ತಮ್ಮ ಮೂಲಕ ಮಾತನಾಡಿದ್ದು...

SRI K. H. RANGANATH—. Whe has to order? It is the Chair or the Honarable Minister or the Honarable Members of this August House? I insist for a ruling.

MR. DEPUTY SPEAKER—. I also know, you also know it and every body knows it.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸುಮ್ಮನೆ ಕುಳಿತು ಕೊಳ್ಳಿ ಎಂದು ಯಾರಿಗೆ ಹೇಳಿದ್ದು. ಆ ರೀತಿ ಹೇಳಬಹುದೇ. ಆದ್ದರಿಂದ ಇದು ಈ ಸದನದ ಸಂಪ್ರದಾಯವಲ್ಲ. ಆದ್ದರಿಂದ ತಾವು ಇದರ ಬಗ್ಗೆ ಒಂದು ರೂಲಿಂಗ್ ಕೊಡಬೇಕು.

ಶ್ರೀ ಬಿ. ಎಲ್. ಗೌಡ.— ಸ್ವಾಮಿ, ಮಾನ್ಯ ಸದಸ್ಯರು ಅಥವಾ ಮಂತ್ರಿಗಳು ಯಾರೇ ಏನೇ ಮಾತನಾಡಿದರೂ ಕೂಡ ತಮ್ಮ ಮುಖೇನ ಮಾತನಾಡುತ್ತಿದ್ದೇನೆಂದು ಮಾನ್ಯ ಸದಸ್ಯರು ತಿಳಿದು ಕೊಳ್ಳಬೇಕು.

ಶ್ರೀ ಕೆ. ಹೆಚ್ ರಂಗನಾಥ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಆ ರೀತಿ ಹೇಳಬಹುದೇ? The Hon'ble Minister is coming to the rescue of his own colleague.

MR. DUPUTY SPEAKER.— Please resume your seats. of course you also know, I also know and everv member knows it Here-afterwards I will instruct the Minister.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀಮಾನ್ ಕರಿರವರು ಈ ಸದನದ ಅಧ್ಯಕ್ಷರಾಗಿದ್ದರು. ಆಗ ಇಂಥ ಒಂದ ಘಟನೆ ನಡೆದಾಗ ಅವರು ಒಂದು ರೂಲಿಂಗ್ ಕೊಟ್ಟಿದ್ದಾರೆ. ಅದು ಬೇಕಾದರೆ ತಮ್ಮ ವರದಿಯಲ್ಲಿ ಇದೆ. ಬೇಕಾದರೆ ನೋಡಿ. Hon'ble Members No Member has got any right to ask the other member to sit. It is only the Speaker who has got rights and powers to say that.

SRI MANIK RAO PATIL.— I request the Hon. Minister through you sir, that he must have certain amount of decency how to conduct himself...

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಸದಸ್ಯರು ಡೀಸೆನ್ಸ್ ಬಗ್ಗೆ ನನಗೆ ಹೇಳಿಕೊಡಬೇಕಾಗಿಲ್ಲ. ನಾನು ಕುಳಿತುಕೊಳ್ಳಿ ಎಂದು ತಮ್ಮ ಮುಖಾಂತರ ಹೇಳಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು.— ನಾನು ಆಗಲೇ ಹೇಳಿದ್ದೇನೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಮಾತನಾಡುವಾಗ ಆ ದಾಟಿಯಲ್ಲಿ ಉತ್ತರ ಹೇಳಿರಬಹುದು: ಅವರು ಕೆಟ್ಟ ಅಭಿಪ್ರಾಯವನ್ನು ಇಟ್ಟುಕೊಂಡು ಆ ರೀತಿ ಹೇಳಿರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ಅದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಮತ್ತೆ ನಾನು ಈಗಾಗಲೇ ಅವರಿಗೆ ತಿಳಿಸಿದ್ದೇನೆ. ಇನ್ನು ಮುಂದೆ ಆ ರೀತಿ ಮಾತನಾಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಚೇರ್‌ಗೆ ಇದೇ ರೀತಿ ಮಾಡಬೇಕೆಂದು ಹೇಳುವುದಕ್ಕೆ ತಮಗೆ ಅಧಿಕಾರ ವಿಲ್ಲ. ಶ್ರೀ ಭಾರ್ಗೆಯವರಿಗಾಗಲೀ, ಸೋಮಪ್ಪನವರಿಗಾಗಲೀ ಇದೇ ರೀತಿ ಮಾಡಬೇಕೆಂದು ಒತ್ತಾಯ ಮಾಡುವುದಕ್ಕೆ ಅಧಿಕಾರವಿಲ್ಲ. ಆ ರೀತಿ ಮಾತನಾಡಬಾರದು. ಈ ವಿಷಯಗಳನ್ನು ಇಲ್ಲಿ ಮರೆತು ಪುನಃ ಉತ್ತರಕ್ಕೆ ಹೋಗೋಣ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ಅಧ್ಯಕ್ಷರೇ, the Government has a right and prerogative to issue show-cause notice and institute an enquiry. They can take action against the society. But the Opposition has also got equal rights to scrutinise why the Government is doing so. Their entire ommissions and commissions...

ಶ್ರೀ ಜಿ. ನಾರಾಯಣಕುಮಾರ್.—ಕನ್ನಡದಲ್ಲಿ ಮಾತನಾಡಿ ಸ್ವಾಮಿ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ಇವೊತ್ತು ನಾವು ಇಲ್ಲಿ ಬಂದಿರುವುದು ನಮ್ಮ ಕರ್ತವ್ಯ ವನ್ನು ಮಾಡುವುದಕ್ಕೆ. ನಮ್ಮ ಕರ್ತವ್ಯವೆ ನೆಂದರೆ, ಈ ಆಡಳಿತ ನಡೆಸತಕ್ಕಂಥ ಸರ್ಕಾರ ಜವಾಬ್ದಾರಿಯಿಂದ ಕೆಲಸ ಮಾಡುವುದರಲ್ಲಿ ಏನಾದರೂ ವಿಫಲತೆ ಕಂಡುಬಂದರೆ ಅದನ್ನು ಎತ್ತಿಹಿಡಿಯ ತಕ್ಕದ್ದು. ಅವರು ಏನು ಮಾಡುತ್ತಾರೆ ಅದನ್ನು ಸ್ಕ್ರೂಟಿನಿ ಮಾಡಿ ತಪ್ಪುಗಳನ್ನು ಎತ್ತಿ ತೋರಿಸ ತಕ್ಕ ಅಧಿಕಾರ ನಮಗೆ ಇದೆ. ಆದರೆ ಈ ಅಧಿಕಾರವನ್ನು ಅವರು ವಿರೋಧ ಪಕ್ಷದಿಂದ ಕಿತ್ತು ಕೊಳ್ಳುವುದಕ್ಕಾಗುವುದಿಲ್ಲ. ಆದರೆ ಯಾರು ಮಂತ್ರಿಗಳಾಗಿ ಉತ್ತರ ಕೊಡುತ್ತಾರೆ ಅವರು ಬಹಳ ಜವಾಬ್ದಾರಿಯಿಂದ ಉತ್ತರವನ್ನು ಕೊಡಬೇಕಾಗುತ್ತದೆ. ಸೀನಿಯರ್ ಮಿನಿಸ್ಟರ್ ಲೈಕ್ ರಂಗನಾಥ್ who is known for his decency and soberness ಅವರನ್ನು ಕಾಮನ್ ಸೆನ್ಸ್‌ನಿಂದ ಮಾತನಾಡಬೇಕೆಂದು ಹೇಳುವುದು ಸರಿಯಲ್ಲ. ಆಮೇಲೆ ಶ್ರೀಮಾನ್ ಸೋಮಪ್ಪನವರು ಮಾತನಾಡಲು ಎದ್ದಾಗ ಕುಳಿತುಕೊಳ್ಳಿ ಎಂದು ಹೇಳುವುದು ಸರಿಯೇ ? ದಯವಿಟ್ಟು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ರೀತಿಯ ವರ್ತನೆ ಮಾಡುವುದಕ್ಕೆ ಅವಕಾಶ ಕೊಡ ಬಾರದೆಂದು. If they continue this attitude then we will have to re-consider our stand and take whatever action we deem fit.

MR. DY. SPEAKER.—Let us close this matter here.

ಶ್ರೀ ಜೆ.ಡಿ. ಸೋಮಪ್ಪ.—ಇದನ್ನು ಸೊಸೈಟಿ ಮೀಟಿಂಗ್ ಎಂದು ತಿಳಿದುಕೊಳ್ಳಬಾರದು. ಇದು ವಿಧಾನ ಸಭೆ.

ಉಪಾಧ್ಯಕ್ಷರು.—ಎಲ್ಲರೂ ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ನನ್ನ ಸ್ನೇಹಿತರು ಕುಳಿತುಕೊಳ್ಳಿ ಎಂದು ಹೇಳಿದ್ದನ್ನು ಸರಿಯಲ್ಲವೆಂದು ಹೇಳಿದರು. ಆದರೆ ಕುಳಿತುಕೊಳ್ಳಿ ಎಂದು ಕನ್ನಡದಲ್ಲಿ ಮಾತನಾಡುವಾಗ ಹೇಳಿದರೆ ಅದು ದೊಡ್ಡ ತಪ್ಪಲ್ಲ ಅದು ಕನ್ನಡದ ದಾಟಿ. ಕೆಟ್ಟ ಮಾತಲ್ಲ. ಹಿಂದಿನ ವಿಧಾನ ಸಭೆಯಲ್ಲಿ ನಾನು ಶಾಸಕನಾಗಿರಲಿಲ್ಲ.

(ಗಲಾಟೆ)

ಹಿಂದೆ ಇದ್ದಂಥ ಮುಖ್ಯಮಂತ್ರಿ ಶ್ರೀಮಾನ್ ಗುಂಡೂರಾಯರು ಈಗ ಹಾಲಿ ಮಂತ್ರಿಯಾಗಿರುವ ಜೆ.ಹೆಚ್. ಪಟೇಲ್‌ರಿಗೆ ಕೈಮೇಲಕ್ಕೆ ಮಾಡಿ ಹೊಡೆಯುವುದಕ್ಕೆ ಹೋಗಿರುವುದು ನಿಮಗೆಲ್ಲರಿಗೂ ಗೊತ್ತಿರಬಹುದು. ಇದು ಸಂಸ್ಕೃತಿಯೇ ?

(ಗಲಾಟೆ)

ಇಡೀ ರಾಜ್ಯದ ಜನತೆ ಜನತಾ ಸರ್ಕಾರವನ್ನು ಆಡಳಿತ ನಡೆಸಲು ಆರಿಸಿ ಕಳುಹಿಸಿದೆ ಸ್ವಲ್ಪ ತಾಳ್ಮೆಯಿಂದಿರಿ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಶ್ರೀ ರಂಗನಾಥ್‌ರವರು ಎತ್ತಿದಂಥ ಕ್ರಿಯಾಲೋಪದ ಬಗ್ಗೆ ತಾವು ತಮ್ಮ ತೀರ್ಪನ್ನು ಕೊಟ್ಟಿದ್ದೀರಿ. ಅದರ ಪ್ರಸ್ತಾಪವನ್ನು ಮಾಡುವ ಅವಶ್ಯಕತೆಯಿಲ್ಲ. ಆದರೆ ಕರಾರುವಕ್ಕಾಗಿ ರೂಲ್ಸ್ ಪ್ರಕಾರ ಪ್ರತಿಯೊಂದನ್ನು ನಡೆಸುವುದಕ್ಕೆ ಇಲ್ಲಿ ಸಾಧ್ಯವಾಗುವುದಿಲ್ಲ. ಅದು ಮಾನ್ಯ ರಂಗನಾಥ್‌ರವರಿಗೂ ತಿಳಿದೇ ಇದೆ. ಅದು ಎಲ್ಲರಿಗೂ ಗೊತ್ತು.

SRI K.H. RANGANATH.—He should not become habitual offender.

ಶ್ರೀ ಜೆ.ಹೆಚ್. ಪಟೇಲ್.—ಆದರೆ ನಿಂತುಕೊಂಡರೆ ಕುಳಿತುಕೊಳ್ಳಿ ಎಂದು ಹೇಳುವುದಕ್ಕಾಗುತ್ತದೆಯೇ ಹೊರತು ಮಲಗಿಕೊಳ್ಳಿ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್.—ಆದರೆ ಪಟೇಲರು ಎದ್ದ ತಕ್ಷಣ ತಾವೆಲ್ಲರೂ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳೋಣವೇ? ತಮ್ಮ ರೂಲಿಂಗ್‌ಗೆ ತಲೆ ಬಾಗುತ್ತೇನೆ. ಆದರೆ ಮಂತ್ರಿಯವರು ಎಲ್ಲರೂ ಎದ್ದ ತಕ್ಷಣ ತಾವು ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳಿದರೆ ಸರಿ ಹೋಗುತ್ತದೆಯೇ

ಶ್ರೀ ಆರ್.ಎಲ್. ಜಾಲಪ್ಪ.—ಇದೆಲ್ಲ ನೋಡಿದರೆ ನನಗೆ ಜ್ಞಾಪಕ ಬರುತ್ತದೆ. ಅವರೆಲ್ಲ ನನ್ನ ಸ್ನೇಹಿತರು, ಡಾಕ್ಟರ್ ಜಾನ್‌ಸನ್ ಒಂದು ಕಡೆ ಈ ರೀತಿ ಹೇಳಿದ್ದಾರೆ.........''Shoot him with gun. If it fails, beat him with the butt of the gun''.

ಸ್ವಾಮಿ, ಈಗ ರಂಗನಾಥ್‌ರವರನ್ನು ನಾನು ಹೊಸದಾಗೇನೂ ನೋಡಿಲ್ಲ. ಬಹಳ ವರ್ಷದಿಂದ ನೋಡಿದ್ದೇನೆ.

ಘೂಳಪ್ಪ ಫಕೀರಪ್ಪ.—ಅಧ್ಯಕ್ಷರೇ, ಈಗ ಯಾವುದೇ ಸರ್ಕಾರ ಬರಲಿ ನಾವು ಕೇಳಿಕೊಳ್ಳುವುದೇನೆಂದರೆ, ಇದರಲ್ಲಿ ರಾಜಕೀಯ ಮಾಡುವುದು ಬೇಡ. ೧೯೭೬ನೇ ಇಸವಿಯಲ್ಲಿ ಮಾನ್ಯ ರಂಗನಾಥ್‌ರವರು ಮಂತ್ರಿಯಾಗಿದ್ದಾಗ ನಮ್ಮ ಕಡೆ ಬಹಳ ಸಹಾಯವನ್ನು ಮಾಡಿದ್ದಾರೆ ಆದ್ದರಿಂದ ಇದರಲ್ಲಿ ಯಾವ ಪಕ್ಷ ಬೇದವಿಲ್ಲದೆ ಯಾವುವು ಚೆನ್ನಾಗಿ ಕೆಲಸ ಮಾಡುತ್ತವೆ. ಅವುಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಾಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ ರಾಜಕೀಯ ಆಧಾರದ ಮೇಲೆ ಸೂಪರ್‌ಸಿಷನ್ ಮಾಡಬೇಡಿ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಬ್ಯಾಂಕಿನ ಅಧ್ಯಕ್ಷರು ಒಂದು ಕಾರು ಉಪಯೋಗಿಸುತ್ತಿದ್ದಾರೆ. ಅವರು ಅಲ್ಲಿ ಜವಾಬ್ದಾರಿ ಸ್ಥಾನದಲ್ಲಿದ್ದ ಜನ. ಒಬ್ಬ ಮಂತ್ರಿ ಸಹ ಇವೊತ್ತು ಲಾಗ್ ಬುಕ್ ಮೈನ್‌ಟೇನ್ ಮಾಡಬೇಕು. ಬಹುಶಃ ಚೀಫ್ ಮಿನಿಸ್ಟರ್, ಪ್ರೈಮ್ ಮಿನಿಸ್ಟರ್ ಸಹ ಮಾಡುತ್ತಾರೆಂದು ಕಾಣುತ್ತದೆ. ಇದು ಸಹಕಾರಿ ರಂಗದ ಹಣ ಇದರಲ್ಲಿ ೨೫–೨–೧೯೮೦ರಲ್ಲಿ ಒಂದು ರೆಸಲ್ಯೂಷನ್ ಮಾಡಿದ್ದಾರೆ. ಜಿಲ್ಲಾ ಬ್ಯಾಂಕಿನ ಅಧ್ಯಕ್ಷರು ಉಪಯೋಗಿಸುವಂತಹ ವಾಹನಕ್ಕೆ ಲಾಗ್ ಬುಕ್ ಮೇನ್‌ಟೇನ್ ಮಾಡಬೇಕಾಗಿಲ್ಲವೆಂದು. ಸ್ವಾಮಿ, ಇದು ಯಾರ ದುಡ್ಡು? ಇದು ಬಹಳ ಜನರ ಸಾಮಾನು ಸರಂಜಾಮು ಎಲ್ಲಾ ಹರಾಜು ಮಾಡಿ ಪಾತ್ರೆ ಪದಾರ್ಥಗಳನ್ನು ಮಾರಿ ಬರತಕ್ಕಂಥ ದುಡ್ಡನ್ನು ಇಲ್ಲಿ ಉಪಯೋಗಿಸುತ್ತಿದ್ದಾರೆ. ಇದನ್ನು ಈ ರೀತಿ ಮಾಡಿದರೆ ಹೇಗೆ?

ಶ್ರೀ ವೀರಪ್ಪ ಮೊಯಿಲಿ.—ಪ್ರೈಮ್ ಮಿನಿಸ್ಟರ್ ಲಾಗ್ ಬುಕ್ ಇಡುತ್ತಾರೊ, ಇಲ್ಲವೊ ಎಂದು ಹೇಳುವುದು ಸರಿಯಲ್ಲ. ಅನಾವಶ್ಯಕವಾಗಿ ಪ್ರೈಮ್ ಮಿನಿಸ್ಟರ್ ಹೆಸರು ಇಲ್ಲಿ ತರುವುದು ಅಗತ್ಯವಿಲ್ಲ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ಅಧ್ಯಕ್ಷರೇ, ಮಾನ್ಯ ಮಂತ್ರಿಯವರಿಗೆ ಸರಿಯಾದ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ.—ನಾನು ಲಾಗ್ ಬುಕ್‌ನ ಬಗ್ಗೆ ಹೇಳಿದೆ ಮತ್ತೇನೂ ಬೇರೆ ಅಲ್ಲ. ನೀವೆಲ್ಲಾ ಪಟ್ಟಣಗಳಲ್ಲಿ ವಾಸ ಮಾಡಿದ್ದೀರಿ. I am a roughian. Can you not tolerate me... I am an agriculturist...

ಶ್ರೀ ಎಂ. ವೀರಪ್ಪಮೊಯಿಲಿ.— ಮಂತ್ರಿಗಳು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ರಫಿಯನ್ ಅಂತ ಹೇಳುತ್ತಿದ್ದಾರೆ. Out Minister cannot be a roughiant It is an insult to the House. I therefore appeal to the Hon'ble Speaker to expunge those words or let the Hon'ble Minister take back those words...

ಶ್ರೀ ಬಿ. ಎಸ್. ಎಡಿಯೂರಪ್ಪ.— ಅಧ್ಯಕ್ಷರೇ. ಅನಾವಶ್ಯಕವಾಗಿ ಚರ್ಚೆಗೆ ಏಕೆ ಅವಕಾಶ ಕೊಡುತ್ತೀರಿ? ಅವರು ನೇರವಾಗಿ ಏನು ಹೇಳಬೇಕೋ ಹೇಳಲಿ.

ಶ್ರೀ ಆರ್.ಎಲ್. ಜಾಲಪ್ಪ.— ತಾವು ಅವಕಾಶ ಕೊಡಿ.

ಉಪಾಧ್ಯಕ್ಷರು.— ಜಾಲಪ್ಪನವರೇ, ನಿಮ್ಮ ಉತ್ತರವನ್ನು ಆದಷ್ಟು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.— ಆಗಬಹುದು ಸ್ವಾಮಿ. ಅಲ್ಲಿ ಅಧ್ಯಕ್ಷರ ವಾಹನಕ್ಕೆ ತಿಂಗಳಿಗೆ ಎಂಟು ಸಾವಿರ ರೂಪಾಯಿ ಖರ್ಚು ಬರುತ್ತಿದೆ. ಇದನ್ನು ಮಾನ್ಯ ಮಾಜಿ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದು ಸರಿಯೋ ತಪ್ಪೋ ತಾವು ಯೋಚನೆ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.— ತಾವು ಲಾಗ್‌ಬುಕ್ ಬಗ್ಗೆ ಪ್ರಸ್ತಾಪ ಮಾಡಿದಿರಿ. Further an Ambassador Car has been used by the President of the Bank as per the Board's resolution dated 25-8-... wherein it has been resolved that the day to day local trips need not be recorded in the Log Book...

(ಗೊಂದಲ)

ಶ್ರೀ ಹೆಚ್. ಎ. ನಾರಾಯಣಗೌಡ.... ಕಾನೂನಿಗೆ, ಬೈಲಾಗಳಿಗೆ ಒಳಪಟ್ಟು ನಿರ್ಣಯ ಮಾಡಬೇಕು. ಮಾಡಿದ ಎಲ್ಲಾ ನಿರ್ಣಯಗಳೂ ಸಿಂಧು ಆಗುವುದಿಲ್ಲ...

ಶ್ರೀ ಆರ್. ಎಲ್. ಜಾಲಪ್ಪ.— ಇನ್ನು ಸಣ್ಣಪುಟ್ಟದ್ದು ಬಹಳ ಇವೆ. ಅದರ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಎರಡು-ಮೂರು ದೂರುಗಳು ಬಂದಿದ್ದವು... ಯಶವಂತಪುರದಲ್ಲಿ ಒಂದು.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರಕ್ಕೆ ಜಾಯಿಂಟ್ ರಿಜಿಸ್ಟ್ರಾರ್ ಕೊಟ್ಟಿರುವ ವರದಿಯಲ್ಲಿ ಅದು ಇದೆ. ಐಟಮ್ ನಂಬರ್ ೩೦...

ಶ್ರೀ ಆರ್. ಎಲ್. ಜಾಲಪ್ಪ.— ಯಶವಂತಪುರದಲ್ಲಿ ಒಂದು ಬಿಲ್ಡಿಂಗ್‌ನ್ನು ಬಾಡಿಗೆಗೆ ತೆಗೆದು ಕೊಂಡಿದ್ದಾರೆ. ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾಡುಗೋಡಿಯಲ್ಲಿ ಲಕ್ಷಗಟ್ಟಲೆ ಹಣ ಖರ್ಚುಮಾಡಿ ಶಾಖೆಯನ್ನು ಪ್ರಾರಂಭಿಸಬೇಕೆಂದು ಹದಿನೆಂಟು ತಿಂಗಳ ಮೇಲೆ ಶಾಖೆಯನ್ನು ಪ್ರಾರಂಭಿಸಿದರು. ಯಲಹಂಕದಲ್ಲಿ ಎರಡು ವರ್ಷಗಳಿಂದ ಖರ್ಚು ಮಾಡಲಾಗಿದೆ. ಈಚೆಗೆ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಸಾಕಷ್ಟು ಹಣ ವ್ಯಯವಾಯಿತು ಎಂದು ಹೇಳಿ ಆಡಿಟ್ ವರದಿಯೊಳಗೆ ಇದೆ. ಆಮೇಲೆ, ಟೆಲಿಫೋನ್ ಖರ್ಚು-ಅದು ಬರುವುದು ಬೇಡ ಎಂದು ಹೇಳಿದ್ದಾರೆ. ಅದನ್ನು ಬಿಟ್ಟುಬಿಡುತ್ತೇನೆ. ಬ್ಯಾಟರಾಯನಪುರ ಸೊಸೈಟಿಯೊಳಗೆ ಎಷ್ಟೆಲ್ಲಾ ಅನಾಹುತ ಆಗಿದೆ. ಆದರೆ ಬೋರ್ಡಿನಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ-ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದು ಅನಾವಶ್ಯಕ ಅಂತ. ಇಲಾಖೆಯಿಂದ ಡೆಪ್ಯುಟಿ ರಿಜಿಸ್ಟ್ರಾರ್‌ಗೆ ಕಾಗದ ಬರೆದು ನಿಮ್ಮ ಅಭಿಪ್ರಾಯ ತಿಳಿಸಿ ಎಂದರೆ 'this need not be superseded' ಅಂತ ರೆಸೊಲ್ಯೂಶನ್ ಮಾಡಿದ್ದಾರೆ. I do not know how far it is justified. I leave it to you Sir. He is an individual auditor. ಆಡಿಟರ್ ಗೈರುಹಾಜರಿ ಬಗ್ಗೆ ತಾವು ಹೇಳಿದ್ದೀರಿ. ಆತ ಆಡಿಟರ್ ಆಗಲಿಕ್ಕೆ ಲಾಯಕ್ಕಿಲ್ಲ ಅಂತ ತಾವು ಹೇಳಿ, He is unfit to be an auditor ಎಂದು ತಿಳಿಸಿದ್ದೀರಿ. ಹೋದವರ್ಷ 'ಬಿ' ಕ್ಲಾಸ್ ಮಾಡಿ, ಈ ವರ್ಷ 'ಸಿ' ಕ್ಲಾಸ್ ಅಂತ ಮಾಡಿದ್ದಾರೆ. ಸ್ವಾಮಿ, ರಿಜರ್ವ್‌ಬ್ಯಾಂಕ್ ಬಗ್ಗೆ ಕೆಲವು ರಿಮಾರ್ಕ್ಸ್ ಇವೆ. ಅವರು ರಿಮಾರ್ಕ್ಸ್ ಕೊಡಬೇಕು.

ಯಾವ್ಯಾವುದಕ್ಕೆ ಎಷ್ಟೆಷ್ಟು ಮಾರ್ಕ್ಸ್ ಅಂತ ಕೊಡಲಾಗುತ್ತದೆ. ಹೋದವರ್ಷ ೪೭ ಮಾರ್ಕ್ಸ್ ಕೊಟ್ಟರು. ಈ ವರ್ಷ ೩೭ ಬಂದಿದೆ. ನಾನು ಹೇಳಿಕೊಟ್ಟು ಮಾಡಿಸಿದ್ದು ಎನ್ನುವ ಅಭಿಪ್ರಾಯಕ್ಕೆ ಬರಬೇಡಿ.

ಶ್ರೀ ಕೆ. ಹೆಚ್. ರಂಗನಾಥ್.— ನಾನು ಆ ಅಭಿಪ್ರಾಯ ಇಟ್ಟುಕೊಂಡಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಬೇಗನೇ ಮುಗಿಸಿಬಿಡುತ್ತೇನೆ. ಇನ್ನು, ಕೆಲಸಗಾರರಿಗೆ ಅರ್ಜಿ ಕರೆದರು. ಮಾನ್ಯ ರಂಗನಾಥ್ ಅವರು ಇದನ್ನು ಗಮನಿಸಬೇಕು. ನಾಲ್ಕನೇ ದರ್ಜೆ ನೌಕರರು ಎಂಟು ಜನ ಬೇಕಾಗಿದ್ದರು. ಆದರೆ ಹತ್ತು ಜನರನ್ನು ತೆಗೆದುಕೊಂಡಿದ್ದಾರೆ. ಈ ನಾಲ್ಕನೇ ದರ್ಜೆ ಹುದ್ದೆಗೆ ನೂರು ಜನರು ಸಂದರ್ಶನಕ್ಕೆ ಬಂದಿದ್ದರು. ಅವರಲ್ಲಿ ಒಬ್ಬನೂ ಹರಿಜನ ಆಯ್ಕೆಯಾಗಲಿಲ್ಲ. ಒಬ್ಬ ಹರಿಜನನಿಗೂ ಆ ಯೋಗ್ಯತೆ ಇರಲಿಲ್ಲವೇ? ಇದರ ಬಗ್ಗೆ ಒಂದು ನಿರ್ಣಯ ಮಾಡಿದ್ದಾರೆ 'ಯಾರೂ ಸರಿಯಾದ ಯೋಗ್ಯತೆ ಇರುವವರು ಸಿಕ್ಕದೇ ಇದ್ದುದರಿಂದ, ಕೊನೆಯದಾಗಿ ಇರುವವರಲ್ಲಿ ಬಿಸಿಎಂ ಗ್ರೂಪ್‌ನಿಂದ ಒಂಬತ್ತು ಜನರನ್ನೂ ಜನರಲ್ ಮೆರಿಟ್‌ನಿಂದ ಒಬ್ಬನನ್ನು ತೆಗೆದುಕೊಂಡಿದ್ದೇವೆ' ಎಂದು. ನಾಲ್ಕನೇದರ್ಜೆ ಹುದ್ದೆಗೆ ಒಬ್ಬ ಹರಿಜನ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಆಗಲಿಲ್ಲವೇ? ಸೂಪರ್‌ವೈಸರ್ ಹುದ್ದೆಗೆ ಅರವತ್ತೊಂದು ಜನರನ್ನು ಆಯ್ಕೆ ಮಾಡಿದರು. ಇದರಲ್ಲಿ ಹರಿಜನರಿಗೆ ಒಂಭತ್ತು ಸ್ಥಾನಗಳನ್ನು ಕೊಡಬೇಕು. ಸುಮಾರು ನೂರು-ನೂರೈವತ್ತು ಹರಿಜನ ಪದವೀಧರರು ಸಂದರ್ಶನಕ್ಕೆ ಬಂದಿದ್ದರೂ, ಅವರನ್ನು ತೆಗೆದುಕೊಳ್ಳುವ ಜಾಗದಲ್ಲಿ ನಾಲ್ಕು ಜನರನ್ನು ಮಾತ್ರ ತೆಗೆದುಕೊಂಡಿದ್ದಾರೆ.

ಶ್ರೀ.ಎಂ. ಮಹದೇವ್.— ಬೇರೆ ಬ್ಯಾಂಕುಗಳಲ್ಲಿ ಹೇಗೆ ತೆಗೆದುಕೊಂಡಿದ್ದಾರೆ?

ಶ್ರೀ ಆರ್. ಎಲ್. ಜಾಲಪ್ಪ.— ನನ್ನ ಕೈಗೆ ಕೊಡಿ ನಾನು ನೋಡುತ್ತೇನೆ. ಸಮಯ ಬಂದರೆ ನಾನು ರಾಜೀನಾಮೆ ಕೊಡಲು ಕೂಡ ಹಿಂದುಮುಂದೆ ನೋಡುವುದಿಲ್ಲ. ಇದರಲ್ಲಿ ಗಿರಿಜನರಿಗೆ ಎರಡು ಹುದ್ದೆಗಳು ಮೀಸಲಾಗಿದ್ದರೂ ಒಬ್ಬನನ್ನು ಮಾತ್ರ ತೆಗೆದುಕೊಂಡರು. ಹಿಂದುಳಿದ ಗುಂಪಿನವರಿಗೆ ಆರು ಜನರಿಗೆ ಹುದ್ದೆ ಕೊಡಬೇಕಾಗಿದ್ದರೂ ಒಬ್ಬರನ್ನೂ ತೆಗೆದುಕೊಂಡಿಲ್ಲ, ಬಿ. ಟಿ. ಗ್ರೂಪ್‌ನಲ್ಲಿ ಮೂರು ಜನರನ್ನು ತೆಗೆದುಕೊಳ್ಳಬೇಕಾಗಿದ್ದರೂ ಒಬ್ಬರಿಗೂ ಕೊಟ್ಟಿಲ್ಲ. ಈ ಗುಂಪುಗಳಿಗೆ ಸೇರಿದ ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಿದ್ದರು. ಸಂದರ್ಶನಕ್ಕೆ ಬಾರದೇ ಇದ್ದಿದ್ದರೆ ಬೇರೆಯವರಿಗೆ ಕೊಡ ಬಹುದು. ಬಿಸಿಎಂ ಗ್ರೂಪ್‌ನಲ್ಲಿ ಏಳು ಹುದ್ದೆಗಳು ಮೀಸಲಾಗಿದ್ದರೂ ಇಪ್ಪತ್ತು ಜನರನ್ನು ತೆಗೆದು ಕೊಂಡರು. ಜನರಲ್ ಮೆರಿಟ್‌ನಲ್ಲಿ ೨೨ ಇತ್ತು, ೭ ಜನರನ್ನು ಮಾತ್ರ ತೆಗೆದುಕೊಂಡಿದ್ದಾರೆ. ನನಗೆ ಸರಿಯಾದ ಮಾಹಿತಿ ಸಿಕ್ಕಿಲ್ಲ. ರೋಸ್ಟರ್ ಸಿಸ್ಟಮ್ ಏನಾಯಿತು? ಇದು ಅನ್ಯಾಯ ಎಂದು ನಿಮಗೆ ಅನ್ನಿಸುವುದಿಲ್ಲವೇ?

SRI GOVIND P. VODEYARAJ.— Whether Co-operation Department has strictly instructed that every institution should follow the roster system. Whether vour Co-operation Department has strictly asked the Co-operative institutions to follow roster system. If so please give us the date.

ಶ್ರೀ ಆರ್.ಎಲ್. ಜಾಲಪ್ಪ.— ಅವರು ನೋಟ್‌ನಲ್ಲಿ ಬರೆದಿದ್ದಾರೆ...

ಉಪಾಧ್ಯಕ್ಷರು.— ಸೂಚನೆಗಳ ಪ್ರಶ್ನೆ ಬರುವುದಿಲ್ಲ ಇಲ್ಲಿ...

SRI GOVIND P. VODEYARAJ.— Sir, With due respect I submit that this matter has been raised when I initiated the discussion on the PWD Department. I have brought specific instances to the notice of the Chief Minister, that the other departments are not following the instructions issued by the DPAR.

SRI G. P. VODEYARAJ.—Inspite of instructions issued by the DPAR, other departments of the Government have not followed the roster system strictly in principle. Whether the Co-ope-

ration Department has followed the roster system and if any instructions are issued from your department, kindly tell us when you have issued instructions.

SRI R. L. JALAPPA.—I was also the President of an institution and roster system was strictly followed in my institution I don't know about all other co-operative institutions. All co-operative institutions receiving aid from the Government will have to follow the reservation system. I will get you the date.

ಶ್ರೀ ಕೆ. ಎಚ್. ರಂಗನಾಥ್.—ತಾವು ಹೇಳಿದಂತಹ ನೇಮಕಾತಿಗಳನ್ನು ಮಾಡಿದಂತಹ ಸಮಯದಲ್ಲಿ ಇವರೇ ಅದರ ಅಧ್ಯಕ್ಷರಾಗಿ ಮಾಡಿದ್ದಾರೆಯೇ ? ಅದಕ್ಕೆ ರಿಕ್ರೂಟ್‌ಮೆಂಟ್ ಅಥಾರಿಟಿ ಅಂತ ಇರುತ್ತದೆ. ಅದರ ಅಧ್ಯಕ್ಷರು ಯಾರು ಆಗಿದ್ದರು ? ಹರಿಜನ–ಗಿರಿಜನರಿಗೆ ಕೊಡಬಾರದು ಅಂತ ನಾನು ಹೇಳುತ್ತಿಲ್ಲ. ಕೊಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ.

SRI R. L. JALAPPA.—ತಮ್ಮ ಗಮನಕ್ಕೆ ಏನು ನಡೆದಿದೆ ಎಂಬುದನ್ನು ಹೇಳಿದ್ದೇನೆ. If you justify this, I agree and I have no objection.......

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮಂತ್ರಿಗಳು, ಕಾನೂನು ಉಲ್ಲಂಘನೆ ಮಾಡಿದ್ದಾರೆಂದು ಹೇಳಿದ್ದಾರೆ. ಈ ಒಂದು ನೇಮಕಾತಿ ಸಮಿತಿಯಲ್ಲಿ ಯಾರು ಅದರ ಅಧ್ಯಕ್ಷರಾಗಿದ್ದರು ? ಅದರ ಸದಸ್ಯರು ಯಾರು ? ಇಲಾಖೆಯ ಅಧಿಕಾರಿಗಳು ಅದರಲ್ಲಿ ಇಲ್ಲವೇ ? ಅವರೂ ಇದ್ದೂ ಈ ರೀತಿಯಾಗಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಯಾರ್ಯಾರು ಇದ್ದರು ? ಅದನ್ನು ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.—ಡಿ. ಸಿ. ಸಿ. ಬ್ಯಾಂಕಿನ ಅಧ್ಯಕ್ಷರೇ ನೇಮಕಾತಿ ಸಮಿತಿಯ ಅಧ್ಯಕ್ಷರು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಎಲ್ಲ ಸಹಕಾರಿ ಸಂಘ–ಸಂಸ್ಥೆಗಳಿಗೂ ಈ ರೋಸ್ಟರ್ ಸಿಸ್ಟಂನ್ನು ಕಡ್ಡಾಯವಾಗಿ ಮಾಡಲೇಬೇಕೆಂದು ಸೂಚನೆಯನ್ನು ತಾವು ಕೊಟ್ಟಿದ್ದೀರಾ ? ಆ ರೀತಿಯ ಸೂಚನೆಯನ್ನು ಕೊಟ್ಟಿದ್ದರೆ ಯಾವಾಗ ಅದರ ದಿನಾಂಕ ? ಅದನ್ನು ತಾವು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳ ಉತ್ತರ ಪೂರ್ಣವಾದ ಮೇಲೆ ಏನಾದರೂ ವಿವರಣೆಯನ್ನು ಕೇಳಬೇಕೆ ಹೊರತು, ಈ ರೀತಿ ಮಧ್ಯೆ ಮಧ್ಯೆ ವಿವರಗಳನ್ನು ಕೇಳುತ್ತಾ ಹೋದರೆ ಹೇಗೆ ?

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಮಂತ್ರಿಗಳು ನೇಮಕಾತಿಯಲ್ಲಿ ಕಾನೂನು ಉಲ್ಲಂಘನೆ ಯಾಗಿದೆ ಎಂಬುದಾಗಿ ಹೇಳಿದ್ದಕ್ಕೆ, ಅದಕ್ಕೆ ಸನ್ಮಾನ್ಯ ರಂಗನಾಥ್‌ರವರು ವಿವರಣೆಯನ್ನು ಕೇಳಿದರು. ಅದು ಪೂರ್ಣವಾಗಲೇ ಇಲ್ಲ. To do the selection, was there any Committee? was there any independent body ? Who are all its members and who is the Chairman ? Kindly clarify.

MR. DEPUTY SPEAKER.—The President of the DCC Bank was the President of the Selection Committee. That is what the Hon'ble Minister has said.

ಶ್ರೀ ಆರ್. ಎಲ್. ಜಾಲಪ್ಪ.—ಏನು ಇದೆ ಎಂಬುದನ್ನು ಒದಗಿಸಿಕೊಡುತ್ತೇನೆ. ಸ್ವಲ್ಪ ನಿಧಾನ ಮಾಡಿ ತರಿಸಿಕೊಡುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಮಂತ್ರಿಗಳು ತಮ್ಮ ಉತ್ತರಕ್ಕೆ ಅನುಕೂಲ ಸಿಂಧು ಯಾವುದು ಇದೆಯೋ ಅದನ್ನು ಮಾತ್ರ ಉಪಯೋಗ ಮಾಡಿಕೊಂಡು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಇದರಲ್ಲಿ ಅನುಕೂಲ ಸಿಂಧೂ ಏನೂ ಇಲ್ಲ. ಸ್ವಲ್ಪ ನಿಧಾನ ಮಾಡಿ ತರಿಸಿಕೊಡಿಸೋಣ. ರೋಸ್ಟರ್ ಸಿಸ್ಟಂನ್ನು ಅಂದರೆ ೧೮ ಪರ್ಸೆಂಟ್‌ನ್ನು ಸರ್ಕಾರದಿಂದ ಅನುಮಾನ ತೆಗೆದುಕೊಳ್ಳತಕ್ಕಂತಹ ಸಹಕಾರಿ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕೆಂಬ ಆದೇಶವನ್ನು ಕೊಟ್ಟಿದ್ದೀರಾ ಎಂಬುದಾಗಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಪಿ. ಒಡೆಯರಾಜ್ ರವರು ಕೇಳಿದ್ದಾರೆ. ಇದು ಹಳೆಯ ವಿಷಯ. ದಿವಂಗತ ದೇವರಾಜ ಅರಸ್ ರವರ ಕಾಲದಲ್ಲೇ ಇದನ್ನು ಮಾಡಬೇಕೆಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ನಮ್ಮಿಂದೇನೂ ಹೊಸದಾಗಿ ಹೊರಡಿಸಿಲ್ಲ. ಆ ಸುತ್ತೋಲೆಯನ್ನು ತಮಗೆ ತರಿಸಿಕೊಡುವುದಕ್ಕಾಗುವುದಿಲ್ಲವೇ, ನಿಧಾನ ಮಾಡಿ ತರಿಸಿಕೊಡಿಸೋಣ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸಭೆಗೆ ತರಿಸಿಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಅಸೆಂಬ್ಲಿ ಎಂಬುದು ನಮಗೆ ಗೊತ್ತಿಲ್ಲವೇ ? ತರಿಸಿ ಕೊಡಿಸೋಣ. ದಿವಗಂತ ದೇವರಾಜ್ ಅರಸ್ ರವರು ಇದನ್ನು ಅನುಷ್ಠಾನಕ್ಕೆ ತರಬೇಕೆಂಬ ಬಗ್ಗೆ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದರ ಬಗ್ಗೆ ಈ ಸರ್ಕಾರ ಮಾಡಿದೆ ಎಂಬ ಭಾವನೆ ಬೇಕಾಗಿಲ್ಲ ಸರ್ಕಾರಿ ಆರ್ಡರ್‌ನ ಕಾಪಿಯನ್ನೇ ತಮಗೆ ಒದಗಿಸಿಕೊಡಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮಂತ್ರಿಗಳು ನೇಮಕಾತಿಯಲ್ಲಿ ಕಾನೂನು ಉಲ್ಲಂಘನೆಯಾಗಿದೆ ಅಂತ ಹೇಳಿದರು. ಈ ಸಮಿತಿಯ ಅಧ್ಯಕ್ಷರು ಯಾರು ? ಸದಸ್ಯರು ಯಾರು ? ಎಂಬುದನ್ನು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮೂರನೆ ದರ್ಜೆಯ ಗುಮಾಸ್ತರನ್ನು, ಹಾಗೂ ಸೂಪರ್ ವೈಸರ್ಸನ್ನು ನೇಮಕಾತಿ ಮಾಡುವಂತಹ ಸಂದರ್ಭದಲ್ಲಿಯೂ ಆಯಾಯ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರ ನೇತೃತ್ವದಲ್ಲೇ ಸಮಿತಿ ಇರುತ್ತದೆ. ಬರೇ ಡೈರೆಕ್ಟರ್ಸ್ ಒಬ್ಬರೋ ಅಥವಾ ಇಬ್ಬರೋ ಇರುತ್ತಾರೆ. ಜೊತೆಗೆ ಡೆಪ್ಯೂಟಿ ರಿಜಿಸ್ಟ್ರಾರ್ ಅಥವಾ ಅಸಿಸ್ಟೆಂಟ್ ರಿಜಿಸ್ಟ್ರಾರ್ ಸದಸ್ಯರಾಗಿರುತ್ತಾರೆ. ಆ ಬ್ಯಾಂಕಿನ ಕಾರ್ಯದರ್ಶಿಯೊಬ್ಬರು ಸದಸ್ಯರು ಇರುತ್ತಾರೆ. ಇದರಲ್ಲಿ ಯಾವುದನ್ನೇ ಮುಚ್ಚಿಡಬೇಕಾದ ವಿಷಯ ಅಲ್ಲ. The Chairman of the Recruitment Committe is the President of the District Bank. ಇದರ ಬಗ್ಗೆ ನಿರ್ವಿವಾದ. ಆಮೇಲೆ ಮತ್ತೊಂದು ವಿಷಯದಲ್ಲಿ ಈ ಸಹಕಾರಿ ಕ್ಷೇತ್ರದಲ್ಲಿ ಪಕ್ಷದ ರಾಜಕಾರಣ ಮಾಡುವುದು ಬೇಡ ಅಂತ ಅವರೂ ಹೇಳುತ್ತಾರೆ. ನಾವೂ ಹೇಳುತ್ತೇವೆ. ಸಹಕಾರಿ ಚಳುವಳಿಯಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಬಾರದೆಂಬುದನ್ನು ಒಪ್ಪಿಕೊಳ್ಳೋಣ. ಯಾವುದೇ ಒಂದು ಸಹಕಾರಿ ಸಂಸ್ಥೆಯಲ್ಲಿ ಅಕ್ರಮ ನಡೆದಿದೆಯೋ ಅಲ್ಲಿ ಕೆಲವು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವ ಬಗ್ಗೆ ಚರ್ಚೆ ಬಹಳ ಕಟುವಾಗಿ ಎರಡೂ ಕಡೆಯೂ ವಾದ ವಿವಾದ ನಡೆಯುತ್ತಿದೆ. ಈ ಒಂದು ವಿಷಯಕ್ಕೆ ಇಷ್ಟೊಂದು ಮಾಡುತ್ತಿರುವುದು ನನಗೆ ಅರ್ಥವಾಗುವುದಿಲ್ಲ. ಇಂತಹ ಸುಮಾರು ಅಂಕಿಗಳು ಇದ್ದಾವೆ. ನಾನು ಯಾರನ್ನೂ ಟೀಕೆ ಮಾಡುವುದಕ್ಕೆ ಹೋಗುತ್ತಿಲ್ಲ. ನಾನಾ ಸಹಕಾರಿ ಸಂಸ್ಥೆಗಳಲ್ಲಿ Defalcation ಮತ್ತು Misappropriation ನಡೆದಂತಹ ಸಂಸ್ಥೆಗಳ ಮೇಲೆ, ತಾವು ಇದ್ದಂತಹ ಕಾಲದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳು ಹೇಳಿದಾಗ, ಯಾವ ಅಸ್ತಕ್ಷೇಪ ಇರಲಿಲ್ಲ, ವಿರೋಧ ಪಕ್ಷದ ಒತ್ತಡ ಇರಲಿಲ್ಲ. ಏಕೆ ಕ್ರಮ ತೆಗೆದುಕೊಳ್ಳಲಿಲ್ಲ. ತಾವು ಕೇಳಿರತಕ್ಕಂತಹ ಮಾಹಿತಿಯನ್ನು ಒಂದು ಗಂಟೆಯೊಳಗೆ ತರಿಸಿಕೊಡುತ್ತೇನೆ. ಸಭೆಯ ಮುಂದೆ ಇಡುತ್ತೇನೆ. ಅಧಿಕಾರಿಗಳು ಹೇಳಿದಾಗಲೂ ನೇರವಾಗಿ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂಬುದಾಗಿ ಸ್ಟೇ ಕೊಟ್ಟಿರತಕ್ಕಂತಹ ಕೇಸುಗಳು ಎಷ್ಟು ಇವೆ ? ಎಂಬುದನ್ನೂ ಸಭೆಯ ಗಮನಕ್ಕೆ ಇವತ್ತೇ ಇಡೋಣ. ಅದೇ ರೀತಿ ಈ ೭ ತಿಂಗಳಲ್ಲಿ ಎಷ್ಟು ಕೇಸುಗಳಲ್ಲಿ ಸ್ಟೇ ಕೊಟ್ಟಿದ್ದಾರೆ? ಅಧಿಕಾರಿಗಳು ಎಲ್ಲಿ ಅಕ್ರಮ ನಡೆದಿದೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ, ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕಂತಹ ಕಾಲದಲ್ಲಿ ಸ್ಟೇಯನ್ನು ನಮ್ಮ ಸಹಕಾರಿ ಸಚಿವರು ಕೊಟಿದ್ದಾರೆ ? ಅಂತಹ ಕೇಸುಗಳು ಎಷ್ಟು ? ಅದೇರೀತಿ ಒಂದೆ ಎಷ್ಟು ಸ್ಟೇಯನ್ನು ಕೊಟ್ಟಿದ್ದಾರೆ ಅದು ೧ ಆಗಿರಬಹುದು, ೫೦೦ ಆಗಿರಬಹುದು, ೮೦೦ ಆಗಿರಬಹುದು, ಕೊನೆಗೆ ೧ ಸಾವಿರ ಇರಬಹುದು. ಆ ಕೆಲಸವನ್ನು ನಾವು ಮಾಡಿದ್ದೇವೆಯೋ ಎಂಬುದನ್ನು ನಮ್ಮ ಮಂತ್ರಿಗಳು ಆದದ್ದೂ ತರಿಸಿಕೊಡುತ್ತಾರೆ. ಯಾರು ಇದರ ಬಗ್ಗೆ ರಾಜಕೀಯ ಮಾಡುತ್ತಿದ್ದಾರೆಂಬುದು ದೇಶಕ್ಕೆ ತಿಳಿಯಲಿ.

ಒಬ್ಬ ಮಾನ್ಯ ಸದಸ್ಯರು.—ಸೇಮ್–ಸೇಮ್.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರಲ್ಲಿ ಶೇಮ್ ಏನೂ ಇಲ್ಲ. ಹಸ್ತಕ್ಷೇಪದ ವಿಚಾರವನ್ನು ಸನ್ಮಾನ್ಯ ಸಚಿವರಾಗಿರತಕ್ಕಂತಹ ದೇವೇಗೌಡರು ಹೇಳಿದ್ದಾರೆ. ಏನು ಹಿಂದೆ ಎಷ್ಟು ಸ್ಟೇ ಮಾಡಿದ್ದಾರೆ ? ಈಗ ಎಷ್ಟರಲ್ಲ ಸ್ಟೇ ಮಾಡಿದ್ದಾರೆ ಅವುಗಳೆಲ್ಲವನ್ನೂ ಸಭೆಯಮುಂದೆ ಇಡುತ್ತೇನೆಂದು ಹೇಳಿದ್ದಾರೆ. ಅದು ಅಲ್ಲಿಗೆ ಹಸ್ತಕ್ಷೇಪದ ವಿಚಾರ ಮುಗಿಯಲಿಲ್ಲ. ಈಗ ತಾವು ಎ.ಪಿ.ಎಂ.ಸಿ. ಹಾಗೂ ಅನೇಕ ಸೊಸೈಟಿಗಳಿಗೆ ನೇಮಕಾತಿಗಳನ್ನು ಮಾಡುತ್ತಿದ್ದೀರಿ. ಆ ನೇಮಕಾತಿಯಲ್ಲಿ ನಿಮ್ಮ ಪಕ್ಷದ ಅಧಿಕಾರಿಗಳ ಸೊಸೈಟಿಗಳನ್ನು ಒತ್ತಾಯದಮೇಲೆ ಮಾಡಿದ್ದೀರಿ ? ಹಿಂದೆ ಏನು ಮಾಡಿದ್ದೆವು. ಅದಕ್ಕೆ ಒತ್ತಡ ಇರಲಿಲ್ಲವೇ ? ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಇರತಕ್ಕಂತಹ ಸೊಸೈಟಿಗಳಿಗೆ ಎಷ್ಟು ನೋಟೀಸನ್ನು ಕೊಟ್ಟಿದ್ದೀರಿ ? ಎಷ್ಟು ಹಸ್ತಕ್ಷೇಪ ಮಾಡಿದ್ದೀರಿ ಅದನ್ನೆಲ್ಲಾ ಸಭೆಯಲ್ಲಿ ಇಡಿ. ತಾವು ಮೊದಲು ಸಭೆಯಲ್ಲಿ ಇಟ್ಟು ಆ ಮೇಲೆ ಮಾತನಾಡಿ. ಸುಮ್ಮನೆ ಗೌಣವಾಗಿ ಇಲ್ಲಿ ಮಾತನಾಡುವುದನ್ನು ಬಿಟ್ಟು ಮೊದಲು ಇಟ್ಟು ಆ ಮೇಲೆ ಮಾತನಾಡಿ.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲ ಇಡೋಣ. ಆ ಮೇಲೆ ಮಾತನಾಡೋಣ. ಸ್ವಲ್ಪ ನಿಧಾನ ಮಾಡಿ. ಸಹಕಾರಿ ಸಂಸ್ಥೆಗಳನ್ನು ನಡೆಸತಕ್ಕಂತಹ ವ್ಯವಸ್ಥೆಯೇ ಇದು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಏನನ್ನು ಹೇಳಿದ್ದಿರಿ. ಈಗ ಏನು ನಡೆಯುತ್ತಿದೆ ಎಂಬುದು ಗೊತ್ತಾಗಲಿ. ಅದನ್ನೂ ಇಡಿ.

ಶ್ರೀ ಆರ್. ಎಲ್. ಜಾಲಪ್ಪ.—ಶ್ರೀಮಾನ್ ಒಡೆಯರಾಜ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಯನ್ನು ಇಲ್ಲಿ ಓದಿಬಿಡುತ್ತೇನೆ.—

"Govt. of karnataka RDC 20 CLM 77, Karnataka Govt. Secretariat, Vidhana Soudha, Bangalore, Dated 29th June 1977.

ORDER

In excercise of the powers conferred by section 3 of Section 128(1) of the Karnataka Co-operative Societies Act 1959, Karnataka Act 11 of 1959 and in superssion of Order No. RDC 16 CLM 76 dated 28th September 1976, the Government of Karnataka hereby directs that all co-operative societies in the State...Shall while making recruitment to the posts in the Society make provision in the rcruitment in favour of the following backward classes of citizens to the extent indicated against them"

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಕೇಳುವುದು ಏನೆಂದರೆ, ಸರ್ಕಾರದ ಸಹಾಯವನ್ನು ಪಡೆಯತಕ್ಕ ಸಹಕಾರಿ ಸಂಘಗಳ ವಲಯದಲ್ಲಿ ಮೀಸಲಾತಿಯನ್ನು ಅನುಸರಿಸುತ್ತಿದ್ದಾರೆಯೇ? ಎಷ್ಟು ಸಂಘಗಳಲ್ಲಿ ಇದನ್ನು ಅನುಸರಿಸಲಾಗಿದೆ, ಎನ್ನುವುದನ್ನು ಸಭೆಗೆ ತಾವು ತಿಳಿಸಬೇಕು. ಈ ಆರ್ಡರ್ ಮಾನ್ಯ ದೇವರಾಜ ಅರಸ್ ಅವರ ಕಾಲಕ್ಕೆ ಆದದ್ದು ನಮಗೆ ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಇದಕ್ಕೊಂದು ಪ್ರಶ್ನೆಯನ್ನು ಹಾಕಿದರೆ ನಾನು ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನುಸೂಚಿತ ಜಾತಿಯವರಿಗೆಂದು ಪ್ರಾವಿಷನ್ ಮಾಡಿ ಹರಿಜನರಿಗೆಂದು ಏನೂ ನೀವು ಮಾಡಬೇಕಾಗಿಲ್ಲ. ಎಲ್ಲರೂ ದೇವರ ಮಕ್ಕಳೇ.

ಶ್ರೀ ಆರ್. ಎಲ್. ಜಾಲಪ್ಪ.—ಇದು ನನ್ನ ಅಭಿಪ್ರಾಯವಲ್ಲ. ನೀವು ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ರೇಗಬೇಕು, ನಮ್ಮ ಮೇಲೆ ರೇಗಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಾತಿಯಲ್ಲ ಒಂದೇ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಎಲ್ಲಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕುಗಳ ಮ್ಯಾನೇಜಿಂಗ್ ಕಮಿಟಿಗಳು ಏನು ಇವೆ ಇವುಗಳಲ್ಲಿ ಸರ್ಕಾರದ ಪತಿಯಿಂದ ಡೆಪ್ಯುಟಿ ರಿಜಿಸ್ಟ್ರಾರ್ಸ್ ನಾಮಿನೇಷನ್ಸ್ ಇರುತ್ತದೆ. ಇಲ್ಲಿ ಯಾವಾಗ ನೇಮಕಾತಿಗಳು ಆದವು, ಅಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ಸ್ ಯಾರಿದ್ದರು ಅವರು ಇದರ ಬಗ್ಗೆ ಡಿಸೆಂಟ್ ನೋಟ್ ಹಾಕಿದ್ದರೇ ಇದನ್ನು ಸರ್ಕಾರದ ಗಮನಕ್ಕೆ ಅವರು ತಂದಿದ್ದಾರೆಯೇ ಎನ್ನುವುದನ್ನು ತಾವು ತಿಳಿಸಬೇಕು. ಒಂದು ವೇಳೆ ಇದನ್ನು ತಮಗೆ ತಿಳಿಸದೇ ಇದ್ದರೆ ಅವರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು ?

ಶ್ರೀ ಆರ್.ಎಲ್. ಜಾಲಪ್ಪ.—ತಾವು ಕೇಳುವಂಥ ಡೀಟೇಲ್ಸ್ ನನ್ನಲ್ಲಿಲ್ಲ. ನಾನು ಯಾರನ್ನೂ ಸ್ಪೇರ್ ಮಾಡುವುದಿಲ್ಲ. ಆಕ್ಷನ್ ತೆಗೆದುಕೊಳ್ಳುತ್ತೇನೆ, ಇದನ್ನು ತಾವು ನಂಬಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಡೀಟೇಲ್ಸ್ ಇಲ್ಲದಿದ್ದರೆ ನೇರವಾಗಿ ಆಪಾದನೆ ಮಾಡುವುದಕ್ಕೆ ಏಕೆ ಹೋದಿರಿ ?

ಶ್ರೀ ಆರ್.ಎಲ್. ಜಾಲಪ್ಪ.—ಆ ವಿವರಗಳೆಲ್ಲವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ನೇಮಕಾತಿ ಬಗ್ಗೆ ಕೇಳಿದ ವಿವರಗಳು ಇಲ್ಲವೆಂದು ಹೇಳಿದ್ದೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಯಾವುದೇ ಬೋರ್ಡ್ ಮೀಟಿಂಗ್ ಆಗಬೇಕಾದರೆ ಇನ್‌ವೇರಿಯಬಲಿ, ಇಬ್ಬರು ಸರ್ಕಾರದ ನಾಮಿನೀಸ್ ಇರುತ್ತಾರೆ. Inveriably there will be two nominees of the Government participating in the meeting. Whether they have given any dissent note. ಇಲ್ಲದೇ ಹೋದರೆ ಅದನ್ನು ತಾವು ತರಿಸಿಕೊಳ್ಳಬೇಕು. ಅಲ್ಲಿ ಬೇರೆ ಏನಾದರೂ ಅನಾಹುತ ನಡೆದರೂ ಸಹ ಅದನ್ನು ಅಲ್ಲಿಯ ಅಧ್ಯಕ್ಷರ ತಲೆಯ ಮೇಲೆ ಏಕೆ ಹಾಕಬೇಕು ? ಉದ್ದೇಶಪೂರ್ವಕವಾಗಿ ಈ ರೀತಿಯಾಗಿ ಮಾಡುವುದಾದರೆ ಆ ಮಾತು ಬೇರೆ.

SRI R.L. JALAPPA.—I don't have information right now.

SRI M. VEERAPPA MOILY.—While referring to a particular bank, he must have full information pertaining to it.

(INTERRUPTIONS)

SRI R.L. JALAPPA.—I am not coming in your way...

(INTERRUPTIONS)

SRI MANIK RAO PATIL.—Let this House know what is the part played by those two Government nominees. Whether they have written any dissent note for having not observed the directions of the Government. All these factors should be observed.

ಶ್ರೀ ಆರ್.ಎಲ್. ಜಾಲಪ್ಪ.—ಇದನ್ನೆಲ್ಲಾ ಗಮನಿಸಿ, ನಾವು ಓಿರ ಎನ್‌ಕ್ವಯರಿಯನ್ನು ಗೊತ್ತುಮಾಡಿದ್ದೇವೆ. ಯಾವುದೇ ಪ್ರಕರಣವಾಗಲೀ ಇದರಲ್ಲಿ ನಮ್ಮ ಅಧಿಕಾರಿಗಳು ಎಷ್ಟರಮಟ್ಟಿಗೆ ಜವಾಬ್ದಾರರು ಎನ್ನುವುದನ್ನು ತಿಳಿದುಕೊಳ್ಳಬೇಕು. The Board sets its own Committee. In this case also it has set up a Committee with the president as the Chairman. I am not going to shield anybody. I will assure you that. Whether he may be an officer or anybody else. ಎನ್‌ಕ್ವಯರಿಯನ್ನು ಮಾಡಿದ ತಕ್ಷಣ ದೇಶವೆಲ್ಲಾ ಮುಳುಗಿ ಹೋಗಲಿಲ್ಲ, ಬ್ಯಾಂಕೆಲ್ಲಾ ಮುಳುಗಿ ಹೋಗಲಿಲ್ಲ. ಮಾಜಿ ಮಂತ್ರಿಗಳು ಕೆ.ಹೆಚ್. ಪಾಟೀಲ್ ಅವರ ಸಂಸ್ಥೆಗಳ ಮೇಲೆ ಎನ್‌ಕ್ವಯರಿಗೆ ಹಾಕಿದರು. ಹುಲುಕೋಟಿಗೆ ರಾಜ್ಯದೊಳಗೆ ಇರತಕ್ಕ ಎಲ್ಲಾ

ಆಡಿಟರ್ಸ್ ಕಳುಹಿಸಿ ಎನ್‌ಕ್ವಯರಿ ಮಾಡಿಸಿದರು. ಎನ್‌ಕ್ವಯರಿ ರಿಪೋರ್ಟ್ ನೋಡಿದರೆ he did not take any action. That does not mean to say that simply we have ordered for the enquiry. If there are mistakes, you should take action.

ಶ್ರೀ ಕೆ.ಹೆಚ್. ರಂಗನಾಥ್.—He is accusing me.

SRI R.L. JALAPPA.—I am not accusing anybody or attributing anything with *mala fide* intention. I only said, it is common.

ಶ್ರೀ ಕೆ.ಹೆಚ್. ರಂಗನಾಥ್.—ನಾನು ಯಾವುದನ್ನೂ ಮುಚ್ಚಬೇಕಾಗಿಲ್ಲ. ಏತಕ್ಕೋಸ್ಕರ ಎನ್‌ಕ್ವಯರಿಗೆ ಕಳುಹಿಸಬೇಕಾಯಿತು ಎನ್ನತಕ್ಕದ್ದಕ್ಕೆ ಫೈಲ್ ಇದೆ, ಅದನ್ನು ತರಿಸಿಕೊಂಡು ತಾವು ನೋಡಬೇಕು. ಇದರ ರಿಸಲ್ಟ್ ಏನಾಯಿತು ಎನ್ನುವುದರ ಬಗ್ಗೆ ಲಿಖಿತ ಮೂಲಕ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದು ಆಯಿತು. ಆಕ್ಷನ್ ತೆಗೆದುಕೊಳ್ಳುವುದಕ್ಕೆ ಡಿಸೆಂಬರ್ ೩೧, ೧೯೭೭ರಂದು ಸರ್ಕಾರವೇ ಉರುಳಿ ಹೋಯಿತು. ಅದಾದ ಮೇಲೆ ನಾನು ಮಂತ್ರಿಯಾಗಿರಲಿಲ್ಲ. ನಾನು ಆಕ್ಷನ್ ತೆಗೆದುಕೊಳ್ಳಲಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನಾನು ಇದ್ದಿದ್ದರೆ ಆ ಮಾತು ಬೇರೆಯಾಗುತ್ತಿತ್ತು.

SRI R.L. JALAPPA.—As a Minister he has got every right to order for an enquiry. I am not attributing anything about him.

(INTERRUPTIONS)

ಶ್ರೀ ಮುತ್ತಿನಪೆಂಡಿಮಠ್.—ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವ ಸಮಯಕ್ಕೆ ಆಗಿನ ಲೀಡರ್ ಆಗಿದ್ದಂಥ ದೇವರಾಜ ಅರಸ್ ಅವರೊಂದಿಗೆ ಕೆ. ಹೆಚ್. ಪಾಟೀಲರು ರಾಜಿ ಮಾಡಿಕೊಂಡಿದ್ದರಿಂದ ಅದೆಲ್ಲಾ ನಿಕಾಲಿ ಮಾಡಿಕೊಂಡರು.

ಶ್ರೀ ಆರ್.ಎಲ್. ಜಾಲಪ್ಪ.—ಇಷ್ಟು ವಿಷಯಗಳನ್ನು ನಾನು ಹೇಳಿ, ಮಾನ್ಯ ಸದಸ್ಯರು ಇದರ ಬಗ್ಗೆ ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರಿಗೆ ಬಹಳ ಅಭಾರಿಯಾಗಿದ್ದೇನೆ. ಇದರ ಜೊತೆಗೆ ಅವರ ಸಲಹೆಗಳು ಏನು ಇವೆ, ಅವುಗಳ ಬಗ್ಗೆ ಸರ್ಕಾರ ನ್ಯಾಯಸಮ್ಮತವಾಗಿ ಏನು ಮಾಡಬಹುದು ಎಂದು ಯೋಚನೆ ಮಾಡುತ್ತೇವೆಂದು ಸಭೆಗೆ ವಚನ ಕೊಟ್ಟು ನನ್ನ ಇಲಾಖೆಯ ಬೇಡಿಕೆಗಳನ್ನು ಅಪ್ರೂವ್ ಮಾಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಸರ್ಕಾರ ರೈತರ ಬಗ್ಗೆ ರೈತರ ಪರವಾಗಿದೆ, ರೈತರಿಗೆ ವಿಶೇಷವಾದಂಥ ಸಹಾಯ ಮಾಡುತ್ತೇವೆಂದು ಹೇಳಿಕೊಳ್ಳತಕ್ಕವರು, ರೈತರ ಪ್ರತಿನಿಧಿಗಳು ಏನು ಬೇಡಿಕೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ಸುಸ್ತಿ ಬಡ್ಡಿಯ ರಿಯಾಯಿತಿಯನ್ನು ಸುಮಾರು ೨೮ ಕೋಟಿ ರೂಪಾಯಿಗಳವರೆಗೂ ಕೊಟ್ಟಿದ್ದೀರಿ. ರಾಜ್ಯದ ಸುಮಾರು ೧೬ ಜಿಲ್ಲೆಗಳಲ್ಲಿ ಬರಗಾಲ ಇತ್ತು, ಬರಗಾಲ ಇದ್ದ ಜಿಲ್ಲೆಗಳಲ್ಲಿ ಸಾಲವನ್ನು ಮರುಪಾವತಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ದಟ್ಟ ದಾರಿದ್ರ್ಯರಾದ ರೈತರು ಯಾರಿದ್ದಾರೆ ಬರಗಾಲ ಪೀಡಿತ ಪ್ರದೇಶದಲ್ಲಿ ಇವರು ಯಾರಿದ್ದಾರೆ ಅವರಿಗೆ ಇದರ ಪ್ರಯೋಜನ ಸಿಕ್ಕಲಿಲ್ಲ. ಇದನ್ನು ಜನವರಿಯವರೆಗೆ ವಿಸ್ತರಿಸಬೇಕು ಎಂದು ರೈತರು ಬೇಡಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಏನನ್ನೂ ಹೇಳಲಿಲ್ಲ. ರೈತರ ಮೇಲೆ ಕಳಕಳಿ ಇದ್ದಂಥ ಸರ್ಕಾರದವರು ಇದಕ್ಕೆ ಉತ್ತರ ಕೊಡಲಿಲ್ಲ. ಜಾತಿ ವಾತ್ಸಲ್ಯದಿಂದ ಬರೀ ಸಹಕಾರ ಸಂಘಗಳ ವ್ಯವಹಾರದಲ್ಲಿ ಉತ್ತರವನ್ನು ಕೊಟ್ಟರೆ ಹೊರತು ರೈತರ ವಿಚಾರವನ್ನು ಏನೂ ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ನಾನು ಇದರ ಬಗ್ಗೆ ಉತ್ತರ ಕೊಟ್ಟಾಗ ಮಾನ್ಯ ಮೊಯಿಲಿ ಯವರು ಇರಲಿಲ್ಲ. ನಾನು ದೊಡ್ಡ ರೈತರು, ಸಣ್ಣ ರೈತರಿಂದ ಎಷ್ಟು ಹಣ ವಸೂಲಿಯಾಗಿದೆ ಎಂದು ಹೇಳಿದ್ದೇನೆ.

ಅಲ್ಪಾವಧಿ ಸಾಲ : ದೊಡ್ಡ ರೈತರಿಂದ ವಸೂಲಾಗಬೇಕಾಗಿರುವುದು ೭೫.೬೭ ಕೋಟಿ; ವಸೂಲು ಆಗಿರುವುದು ೫೩.೯೫ ಅಥವಾ ೫೪ ಕೋಟಿ. ಸಣ್ಣ ರೈತರಿಂದ ವಸೂಲು ಆಗಬೇಕಾಗಿರುವುದು ೪೫.೭೮ ಕೋಟಿ, ವಸೂಲಾಗಿರುವುದು ೨೯.೨೮ ಕೋಟಿ.

ಮಧ್ಯಮಾವಧಿ ಸಾಲ : ದೊಡ್ಡ ರೈತರಿಂದ ವಸೂಲಾಗಬೇಕಾಗಿರುವುದು ೧೮.೭೭ ಕೋಟಿ, ವಸೂಲಾಗಿರುವುದು ೬.೨೩ ಕೋಟಿ, ಸಣ್ಣ ರೈತರಿಂದ ಮಧ್ಯಮಾವಧಿ ಸಾಲ ವಸೂಲು ಆಗಬೇಕಾಗಿರುವುದು ೧೧.೫೬ ಕೋಟಿ, ವಸೂಲಾಗಿರುವುದು ೪.೭೨ ಕೋಟಿ.

ಧೀರ್ಘಾವಧಿ ಸಾಲ : ದೊಡ್ಡ ರೈತರಿಂದ ಬರಬೆ ಕಾಗಿರುವುದು ೧೮.೫೬ ಕೋಟಿ, ವಸೂಲು ಆಗಿರುವುದು ೧೧.೮೬ ಕೋಟಿ. ಧಿ ರ್ಘಾವಧಿ ಸಾಲ ಸಣ್ಣ ರೈತರಿಂದ ವಸೂಲಾಗಬೇಕಾಗಿರುವುದು ೨೪.೧೪ ಕೋಟಿ ವಸೂಲಾಗಿರುವುದು ೧೫.೮೨ ಕೋಟಿ. ಧೀರ್ಘಾವಧಿ ಸಾಲದಲ್ಲಿ ದೊಡ್ಡ ರೈತರಿಂದ ರಿಕವರಿ ಆಗಿರುವುದು ಒಟ್ಟು ೬೩.೩೫ ಪರ್ಸೆಂಟ್, ಸಣ್ಣ ರೈತರಿಂದ ರಿಕವರಿ ಆಗಿದ್ದು ೬೫.೫೦ ಪರ್ಸೆಂಟ್.

ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರಾದ ಮೊಯ್ಲಿಯವರು ಬಹಳ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಇದರಲ್ಲಿ ಬಹಳಷ್ಟು ದೊಡ್ಡ ರೈತರಿಗೆ ಸಹಾಯವಾಗಿದೆ, ಬಡರೈತರಿಗೆ ಸಹಾಯವಾಗಿಲ್ಲ, ೧೦ ಪರ್ಸೆಂಟ್ ಹೆಚ್ಚು ಕಡಿಮೆ ಇದೆ ಎಂದು ಹೇಳಿದರು. ಧೀರ್ಘಾವಧಿ ಸಾಲವನ್ನು ಸಣ್ಣ ರೈತರೂ ಉಪಯೋಗಿಸಿಕೊಂಡಿದ್ದಾರೆ. ಇದಕ್ಕೆ ನಾನು ಹಲವಾರು ಸಾರಿ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಹೇಳಿದ್ದೇನೆ. ನಬಾರ್ಡ್‌ನವರು ಬಹಳ ಸೀರಿಯಸ್ ಅಬ್ಜಕ್ಷನ್ ತೆಗೆದುಕೊಂಡಿದ್ದಾರೆ. ಈ ರೀತಿ ಮಾಡುವುದು ಸರಿಯಲ್ಲ, ಕನ್ಸೇಷನ್ ಕೊಡುವುದಕ್ಕೆ ಬರುವುದಿಲ್ಲ, ನೀವು ಕನ್ಸೇಷನ್ ಕೊಟ್ಟಿದ್ದೀರಿ, "You are violating the discipline imposed by the World Bank. You will be cut off from the line of the Credit". They were also telling when the Managing Director was here, that the World Bank has already written to NABARD to cut off us, from the line of credit. ನಾನು ಸದನದಲ್ಲಿ ಭರವಸೆ ಕೊಟ್ಟಿದ್ದೇನೆ ಈ ಒಂದು ಅಧಿವೇಶನ ಮುಗಿದ ಮೇಲೆ ನಬಾರ್ಡ್‌ನವರ ಹತ್ತಿರ ಹೋಗಿ ಅಂಕಿಅಂಶಗಳನ್ನು ಅವರ ಮುಂದಿಟ್ಟು ಪ್ರಸ್ತಾಪ ಮಾಡುತ್ತೇವೆ, ಚೇರ್ಮನ್ ರಾಮಕೃಷ್ಣ ಅವರೂ ಬಂದಿದ್ದರು. ನಾವು ಕನ್ಸೇಷನ್ ಕೊಡುತ್ತಿದ್ದೇವೆ, ಒನ್ ಟೈಂ ಆಪರೇಷನ್ ಎಂದು ಹೇಳಿದೆವು. ಅದರ ಮೇಲೆ ಫರ್ದರ್ ಎಕ್ಸ್‌ಟೆಂಡ್ ಮಾಡುವುದಕ್ಕೆ ಹೋದರೆ ರಾಜ್ಯಕ್ಕೆ ತೊಂದರೆಯಾದೀತು.

ಶ್ರೀ ಕೆ.ಹೆಚ್. ರಂಗನಾಥ್.—ಮುಂಗಾರು ಫಸಲು ಬರುವವರಿಗಾದರೂ ಮುಂದುವರಿಸಿ

ಶ್ರೀ ಆರ್.ಎಲ್. ಜಾಲಪ್ಪ.—ಒಂದು ಆಶಾಕಿರಣ ಇದೆ. ಅದು ಏನೆಂದರೆ, ಕೇಂದ್ರದ ಮಂತ್ರಿಗಳಾದ ರಾವ್ ಬೀರೇಂದ್ರಸಿಂಗ್‌ರವರು ಅವರ ಖಾತೆಯ ಕನ್‌ಸಲ್ಟೇಟೀವ್ ಕಮಿಟಿಯಲ್ಲಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಹೇಳುತ್ತೇನೆ.
I quote from the newspaper :

"Adressing the Parliamentary Consultative Committee for the Agriculture Ministry, he said, he proposes to discuss with the Finance Ministers and other Ministers concerned, the question of Subsidy schemes for the farmers. Further, the discussions were intended to review the working of credit systems in the rural areas aud device measures to tone it up. Mr. Rao said, the Centre would get in touch with the States to persuade them to lower the rate of interest on co-operative credit. States which had done well in the recovery of loans and in the reduction of interest rates, might be given preference in the disbursement of funds by the Centre for short term loans to rural borrowers". ಈ ಒಂದು ಆಶಾಕಿರಣ ನಮ್ಮಲ್ಲಿದೆ. ಇದನ್ನು ನಾವು ನಂಬಿಕೊಂಡಿದ್ದೇವೆ.

೨೮ನೇ ತಾರೀಖು ರಾವ್ ಬೀರೇಂದ್ರಸಿಂಗ್‌ರವರು ಇಲ್ಲಿ ಬರುತ್ತಾ ಇದ್ದಾರೆ. ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ. ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ತಾವೂ ಕೂಡ...

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಪ್ರಶ್ನೆ ಪ್ರತ್ಯೇಕ. ೩೦ನೇ ತಾರೀಖು ಎಂದು ಸುಸ್ತಿ ಬಡ್ಡಿ ವಿಚಾರದಲ್ಲಿ ಇಂಟರ್‌ಡ್ಯೂಸ್ ಮಾಡಿದಿರಿ. ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸ್ಕೀಂ. ತಮಗೆ ಗೊತ್ತಿದೆ, ಇದು ನಬಾರ್ಡ್‌ಗೆ ಸಂಬಂಧಪಟ್ಟದ್ದಲ್ಲ. ವರ್ಲ್ಡ್ ಬ್ಯಾಂಕ್‌ನವರು ಆಕ್ಷೇಪಣೆ ಎತ್ತಿದ್ದಾರೆ, ಆ ಒಂದು ರೂಲ್ಸ್ ಪ್ರಕಾರ ಮಾಡಬೇಕು ಎಂದು. ಆದರೆ ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸ್ಕೀಂ. ಡ್ರಾಟ್ ಸ್ಟ್ರಿಕನ್ ಏರಿಯ ಇದೆ. ಬಡ ರೈತರಿಗೆ ಮುಂಗಾರು ಬೆಳೆಯಾಗುವ ವರೆಗಾದರೂ ಇದನ್ನು ವಿಸ್ತರಿಸತಕ್ಕ ಪ್ರಯತ್ನ ಮಾಡುತ್ತೀರಾ. "out of your own scheme". ಇದನ್ನು ತಾವು ಮಾಡಲಿಕ್ಕೆ ಮನಸ್ಸು ಮಾಡುತ್ತೀರಾ.

ಡಾ|| ವಿ.ಎಸ್. ಆಚಾರ್ಯ.—ವರ್ಲ್ಡ್ ಬ್ಯಾಂಕ್‌ನವರು ನಬಾರ್ಡ್‌ನವರಿಗೆ ಎಚ್ಚರಿಕೆ ಕೊಡುವುದು, ನಬಾರ್ಡ್‌ನವರು ನಮಗೆ ಎಚ್ಚರಿಕೆ ಕೊಡುವುದು ಇದೆ. ನೀವು ಫೈನಾನ್‌ಷಿಯಲ್ ಸಂಸ್ಥೆಗಳಿಗೆ ಧಕ್ಕೆ ಬರುವುದಾದರೆ ಆಕ್ಷೇಪಣೆ ಮಾಡಬಹುದು. ಇದು ರೀಎಂಬರ್ಸ್ ಮಾಡತಕ್ಕ ಸ್ಕೀಂ ಇದೆ ಮತ್ತು ಬಡ್ಜೆಟ್‌ನಲ್ಲಿದೆ. ಮಾರ್ಚಿ ೧೮ ರಿಂದ ಜೂನ್ ೩೦ರವರೆಗೆ ಯಾವುದೇ ಫಸಲು ಕೈಗೆ ಬರುವಂಥಾದ್ದು ಸಾಮಾನ್ಯವಾಗಿ ಇಲ್ಲ. ೧೪೫ ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಇದೆ, ರಾಜ್ಯದ ಸ್ಕೀಮಿನಲ್ಲಿ, ರಾಜ್ಯದ ಬೊಕ್ಕಸದಿಂದ ಪರಿಹಾರ ಕೊಡುತ್ತೇವೆ. ಆದ್ದರಿಂದ ಅವರಿಗೆ ಹೇಳುವುದರಲ್ಲಿ ತಪ್ಪಿದ್ದಾರೆ ಎಂದು ನನ್ನ ಭಾವನೆ. ರೈತಾಪಿ ಜನರ ಪರವಾಗಿ ಎಲ್ಲಾ ರಾಜಕೀಯ ಪಕ್ಷಗಳು ಸರ್ಕಾರವನ್ನು ಕೇಳಿದ್ದರು. ಫೈನಾನ್‌ಸಿಂಗ್ ಇನ್‌ಸ್ಟಿಟ್ಯೂಷನ್‌ಗೆ ಕೊರತೆಯಾಗುತ್ತದೆ, ಕಷ್ಟ ಬೀಳುತ್ತದೆ, ಅಸಲು ಮಾತ್ರ ಕೊಡಿ, ಬಡ್ಡಿ ನಷ್ಟವನ್ನು ತುಂಬಿ ಕೊಡುತ್ತೇವೆ ಎಂದು ಹೇಳುವುದರ ಬದಲು ಸರ್ಕಾರದ ಪರವಾಗಿ ಪ್ರಕಟ ಮಾಡುತ್ತಿದ್ದಾರೆ, ನಬಾರ್ಡ್‌ನವರ ಆಕ್ಷೇಪ ಉಂಟು, ಇದಕ್ಕೆ ಆಕ್ಷೇಪ ಉಂಟು ಎಂದು ಹೇಳುವುದು ಸರಿಯಾದಂಥ ಧೋರಣೆಯಾಗುವುದಿಲ್ಲ. ರಾಜ್ಯ ಸರ್ಕಾರದವರು ಮಾರ್ಚಿ ೧೮ನೇ ತಾರೀಖು ಬಡ್ಜೆಟ್ಟಿನಲ್ಲಿ ನಮಗೆ ತಿಳಿಸಿದ್ದಾರೆ, ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಬಡ್ಡಿ ಮಾಫಿ ಬಗ್ಗೆ ಸರಿಯಾದ ಸ್ಪಷ್ಟೀಕರಣ ಕೊಟ್ಟಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಕೇಂದ್ರದ ಮಂತ್ರಿಗಳಾದ ರಾವ್ ಬೀರೇಂದ್ರ ಸಿಂಗ್ ಅವರು ಬರುತ್ತಾರೆ, ಪ್ರಯತ್ನ ಪಡುತ್ತೇವೆ ಅಂದರೆ ಆಗುವುದಿಲ್ಲ. ಬಡ ರೈತರಿಗೆ ಅನುಕೂಲವಾಗಬೇಕಾದರೆ ಸರ್ಕಾರ ಏನಾದರೂ ಮಾಡಬೇಕು. ವರ್ಲ್ಡ್ ಬ್ಯಾಂಕ್ ಅಬ್ಜಕ್ಷನ್ ಓವರ್‌ಕಂ ಮಾಡಿ ದೊಡ್ಡ ದೊಡ್ಡ ಮಾಲೀಕರಿಗೆ ಟಾಟಾ, ಬಿರ್ಲಾ, ಮುಂತಾದ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಸಬ್ಸಿಡಿ ಕೊಡುತ್ತೀರ. ಅದೇ ರೀತಿ ಸರ್ಕಾರ ಏನಾದರೂ ಮಾಡಿ ಬಡರೈತರಿಗೆ ಜನವರಿ ಫಸಲು ಬರುವವರೆಗೆ ಸಹಾಯ ಮಾಡಬೇಕು, ಇದಕ್ಕೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕು, ಇಲ್ಲದೇಹೋದರೆ ರೈತರು ನಾಶವಾಗುತ್ತಾರೆ.

ಶ್ರೀ ಪಂಪಾಪತಿ.—ದಾವಣಗೆರೆಯಲ್ಲಿ ಅಲ್ಪಸಂಖ್ಯಾತರು ಒಂದು ಮಿಲಟ್‌ಬ್ಯಾಂಕ್ ಎಂದು ಮಾಡಿಕೊಂಡಿದ್ದಾರೆ. ಅದು ನಮ್ಮ ಅಲ್ಪಸಂಖ್ಯಾತರದು. ಆ ಬ್ಯಾಂಕಿನಲ್ಲಿ ಸುಮಾರು ೧೩೦೦ ಸದಸ್ಯರಿದ್ದಾರೆ. ೪ಲಕ್ಷ ೫೦ ಸಾವಿರ ಷೇರು ಬಂಡವಾಳ ಇದೆ. ಆ ಬ್ಯಾಂಕು ಚೆನ್ನಾಗಿ ನಡೆಯುತ್ತಾ ಇತ್ತು. ೧೯೮೧-೮೨ರಲ್ಲಿ ಅದನ್ನು ಸೂಪರ್‌ಸೀಡ್ ಮಾಡಿದರು. ಅದು ಪ್ರಾರಂಭದ ವರ್ಷದಲ್ಲಿ ಚೆನ್ನಾಗಿ ನಡೆದು ೪೭ ಸಾವಿರ ರೂಪಾಯಿ ಲಾಭ ಗಳಿಸಿದೆ. ಅಲ್ಲಿಗೆ ಆಡಳಿತಾಧಿಕಾರಿಯನ್ನು ಹಾಕಿದ ಮೇಲೆ ೧೯೮೨-೮೩ರಲ್ಲಿ ೯ ಸಾವಿರಕ್ಕೆ ಬಂದಿದೆ, ಲಾಭ ಕಡಿಮೆಯಾಗಿದೆ. ಈ ಬ್ಯಾಂಕ್‌ನವರು ಆಡಳಿತ ನಡೆಸುತ್ತಾ ಇರುವ ಸಂದರ್ಭದಲ್ಲಿ ಸಣ್ಣ ವರ್ಗದವರಿಗೆ ಅಂದರೆ ಮಂಡಕ್ಕಿ ನೌಕರರಿಗೆ, ಗಾಡಿ ಎಳೆಯುವವರಿಗೆ, ಆಟೋರಿಕ್ಷಾದವರಿಗೆ ಮುಂತಾದ ಸಾಮಾನ್ಯ ಜನರಿಗೆಲ್ಲಾ ಸಾಲ ಕೊಡುತ್ತಿದ್ದರು. ಆದುದರಿಂದ ಈ ಬ್ಯಾಂಕ್ ಚೆನ್ನಾಗಿ ನಡೆಯುತ್ತಿತ್ತು. ಈ ಬ್ಯಾಂಕಿನ ಮೇಲೆ ಅವ್ಯವಹಾರ ನಡೆದಿದೆ ಎಂದು ಆಪಾದನೆ ಹೊರಿಸಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಕಳಿಸಿದರು. ಈಗ ಎಲ್ಲಾ ಪರಿಶೀಲನೆ ನಡೆದಿದೆ. ಏನೂ ಆಪಾದನೆ ಇಲ್ಲ ಎಂದು ರುಜುವಾತಾಗಿದೆ. ಆದುದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ ಮೊದಲು ಯಾರು ಈ ಬ್ಯಾಂಕಿನ ಆಡಳಿತವನ್ನು ನಡೆಸುತ್ತಿದ್ದರು ಅವರಿಗೆ ವಹಿಸಿಕೊಡಲಿ, ಇಲ್ಲದೇಹೋದರೆ ಚುನಾವಣೆ ನಡೆಸಲಿ, ಆಡಳಿತಾಧಿಕಾರಿಗಳು, ಚುನಾವಣಾ ಪ್ರತಿನಿಧಿಗಳು ವ್ಯವಹಾರ ನಡೆಸುವುದಕ್ಕೆ ವ್ಯತ್ಯಾಸವಿದೆ, ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಬ್ಯಾಂಕಿನ ಬಗ್ಗೆ ಗಮನಿಸಬೇಕು ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಸಹಕಾರ ಸಚಿವರು ಸದನದ ಮುಂದೆ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಬೇಡಿಕೆಯನ್ನು ಇಟ್ಟಿದ್ದಾರೋ, ಅವರ ಜವಾಬ್ದಾರಿಯನ್ನು ಮರೆತಿದ್ದಾರೋ, ರೆಗ್ಯುಲೇಟೆಡ್ ಮಾರ್ಕೆಟ್ಟಿನ ಅಭಿವೃದ್ಧಿ ಕಾರ್ಯಕ್ರಮವನ್ನು ನಂಬಿಲ್ಲವೇ ಎಂದು ಕೇಳುತ್ತೇನೆ.

ಚಳ್ಳಕೇರಿ, ಮೊಳಕಾಲ್ಮೂರು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದೀರಿ. ಆದರೆ ಸಣ್ಣ ರೈತರಿಂದ ಸಾಲ ವಸೂಲಿ ಮಾಡತಕ್ಕದ್ದನ್ನು ಜನವರಿಯವರೆಗೆ ಮುಂದುವರಿಸಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಸಹಕಾರಿ ಇಲಾಖೆಯ ಬಗ್ಗೆ ಪರಿಪೂರ್ಣವಾದ ಚರ್ಚೆಯಾಗಲಿಲ್ಲ. ಇವತ್ತು ಸಾಕಷ್ಟು ಸದಸ್ಯರು ರೆಗ್ಯುಲೇಟೆಡ್ ಮಾರ್ಕೆಟ್‌ನ ಬಗ್ಗೆ ಮಾತನಾಡುವುದು ಇತ್ತು ಮತ್ತು ಮಾನ್ಯ ಸಚಿವರೂ ಸಹ ಅದರ ಬಗ್ಗೆ ಏನೂ ಉತ್ತರದಲ್ಲಿ ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದು ಮುಖ್ಯವಾದ ವಿಷಯವೇನೆಂದರೆ ೨೦ ಅಂಶದ ಕಾರ್ಯಕ್ರಮದಲ್ಲಿ ಬರತಕ್ಕ ಡೆಬ್ಟ್ ರಿಲೀಫ್ ಆಕ್ಟನ್ನು ಇಂಪ್ಲಿಮೆಂಟ್ ಮಾಡತಕ್ಕದ್ದು ಬರುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳವರು ಒಂದು ಚೂರು ಹೇಳಲಿಲ್ಲ. ಲಕ್ಷಾಂತರ ಜನರಿಗೆ ಬಡವರಿಗೆ ಅದರಿಂದ ಅನುಕೂಲವಾಗುತ್ತದೆ ಅದರ ಬಗ್ಗೆ ಹೇಳಲಿಲ್ಲ, ಇನ್ನು ರೆಗ್ಯೂಲೇಟೆಡ್ ಮಾರ್ಕೆಟ್ ಬಗ್ಗೆ ಒಂದು ಚೂರು ಹೇಳಲಿಲ್ಲ. ಮಾನ್ಯ ಸಚಿವರು ಬರೀ ಬ್ಯಾಟರಾಯನಪುರದ ಡಿ.ಸಿ.ಸಿ.ಬ್ಯಾಂಕ್‌ನ ಬಗ್ಗೆ ಮಾತ್ರ ಹೇಳಿದರು. ಡೆಬ್ಟ್ ರಿಲೀಫ್ ಆಕ್ಟ್‌ನ ಪ್ರಕಾರವಾಗಿ ಎಷ್ಟು ಜನಕ್ಕೆ ರಿಲೀಫ್ ಕೊಟ್ಟಿದ್ದೀರಿ? ಎಷ್ಟು ಜನ ಅದರಿಂದ ಸಹಾಯ ಪಡೆದುಕೊಂಡಿದ್ದಾರೆ? ಅದನ್ನು ಎಷ್ಟರ ಮಟ್ಟಿಗೆ ಇಂಪ್ಲಿಮೆಂಟ್ ಮಾಡಿದ್ದೀರಿ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ ಟಿ. ಎಚ್. ಹನುಮಂತರಾಯಪ್ಪ.—ಕೆಲವು ರೈತರು ಜೂನ್ ತಿಂಗಳೊಳಗೆ ಚಡಿ ಸಾಲವನ್ನು ಪೂರ್ಣವಾಗಿ ವಾಪಸ್ಸು ಮಾಡಿದ್ದಾರೆ, ಅಂತವರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟರೆ ಮುಂದೆ ಅವರು ಸಾಲ ತೆಗೆದುಕೊಳ್ಳಲು ಅನುಕೂಲವಾಗುತ್ತದೆ ಇದರ ಬಗ್ಗೆ ಮಾನ್ಯ ಮಂತ್ರಿಯವರು ಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ.—೩೦-೬-೮೨ ರೊಳಗೆ ಯಾರು ರೈತರು ಬಡ್ಡಿ ಸುಸ್ತಿ ಬಡ್ಡಿಯನ್ನು ಪ್ರಮಾಣಿಕವಾಗಿ ಕಟ್ಟಿದ್ದಾರೆ ಅಂಥವರಿಗೆ ಸಹಕಾರೀ ಸಂಘದಿಂದ ಸಾಲ ಕೊಡುತ್ತಿಲ್ಲ. ಯಾರು ಬಡ್ಡಿಯನ್ನು ಅಸಲನ್ನೂ ಕಟ್ಟಿಲ್ಲವೋ ಅಂಥವರಿಗೆ ಮತ್ತೆ ಸಾಲವನ್ನು ಕೊಡುತ್ತಿದ್ದಾರೆ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಗಮನ ಹರಿಸಿ ರೈತರಿಗೆ ಸೂಕ್ತವಾದ ನ್ಯಾಯವನ್ನು ಒದಗಿಸಿಕೊಡಬೇಕೆಂದು ಹೇಳ ಬಯಸುತ್ತೇನೆ.

ಶ್ರೀ ಎಫ್. ಎ. ಕೊಪ್ಪದ.—ಬಾವಿಗೋಸ್ಕರವಾಗಿ ಕೆಲವು ರೈತರು ಸಾಲವನ್ನು ತೆಗೆದುಕೊಂಡಿದ್ದರು, ಅಂಥವರಲ್ಲಿ ಕೆಲವರ ಬಾವಿ ಫೇಲ್ಯೂರ್ ಆಗಿದೆ, ಅಂಥವರಿಗೆ ಪರಿಹಾರವನ್ನು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಂಡಿದ್ದೆ, ಆದುದರಿಂದ ಅದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ನಿನ್ನೆ ಮಾನ್ಯ ಸದಸ್ಯರು ಇದರ ಬಗ್ಗೆ ಒಂದು ಅರ್ಜಿಯನ್ನು ತಂದುಕೊಟ್ಟಿದ್ದರು ಅವರಿಗೆ ನಾನು ಬುಧುವಾರ ಸಾಯಂಕಾಲ ೫ ಗಂಟೆಗೆ ಬನ್ನಿ ಎಂದು ಹೇಳಿದ್ದೇನೆ. ಅಧಿಕಾರಿಗಳಿಗೆ ಹೇಳಿ ಸಾಧ್ಯವಾದಷ್ಟು ಎಲ್ಲವನ್ನೂ ಮಾಡಿಸಿ ಕೊಡುತ್ತೇನೆ. ಇನ್ನು ಡಾ||ಆಚಾರ್ಯರವರು ಮತ್ತು ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರುಗಳು ಸಾಲವನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದಾರೆ. ತಮ್ಮ ಅಭಿಪ್ರಾಯದಲ್ಲಿ ಏನೆಂದರೆ ನಾವು ಸಬ್ಸಿಡಿ ಕೊಡುವುದಕ್ಕೆ ಆಗುತ್ತಿಲ್ಲ, ದಿಗಿಲು ಬೀಳುತ್ತಿದ್ದಾರೆಂದು ಎಂದು ತಾವು ಅಂದುಕೊಂಡಿರಬಹುದು ಆದರೆ ಖಂಡಿತವಾಗಿಯೂ ಹಾಗೆ ಏನೂ ಇಲ್ಲ. ಆದರೆ ನಬಾರ್ಡ್‌ನವರು ನಮಗೆ ಪತ್ರ ಬರದಿದ್ದಾರೆ ಅದರಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಬೇಕಾದರೆ ಅದನ್ನು ಮಾನ್ಯ ಸದಸ್ಯರೆಲ್ಲರಿಗೂ ತೋರಿಸುತ್ತೇನೆ. ಹಾಗೂ ಕೇಂದ್ರ ಸರ್ಕಾರದವರ ಆದೇಶದಂತೆ ಡಿಸಿಪ್ಲೀನ್ ಮೆನ್‌ಟೇನ್ ಮಾಡಬೇಕಾಗಿರುತ್ತದೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಬರೀ ಪತ್ರ ತೋರಿಸಿದರೆ ತೃಪ್ತಿಯಾಗುವುದಿಲ್ಲ ಸ್ವಾಮಿ, ರೈತರಿಗೆ ಸಾಲವನ್ನು ಕೊಡಿಸುವ ಬಗ್ಗೆ ವ್ಯವಸ್ಥೆ ಮಾಡಿ.........

ಶ್ರೀ ಆರ್. ಎಲ್. ಜಾಲಪ್ಪ.—ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡದಿದ್ದರೆ ಪುನಃ ಎಲ್ಲಿಂದ ಸಾಲವನ್ನು ಕೊಡುವುದು ? ಮಾನ್ಯ ಶ್ರಿ ಚೌಡಯ್ಯನವರಿಗೆ ಎಲ್ಲಾ ವಿಷಯ ಗೊತ್ತಿದೆ......

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀಮಂತ ರೈತರಿಗೆ ರಿಯಾಯಿತಿ ಕೊಡುವಾಗ ನೀವು ಕೇಂದ್ರದವರನ್ನು ಕೇಳಲಿಲ್ಲ. ರಿಜರ್ವ್ ಬ್ಯಾಂಕ್‌ನವರನ್ನೂ ಕೇಳಲಿಲ್ಲ. ಈಗ ಬಡ ರೈತರಿಗೆ ರಿಯಾಯಿತಿ ಕೊಡಿ ಎಂದು ಕೇಳಿದರೆ ಕೇಂದ್ರದವರು ಪರವಾನಿಗಿ ಕೊಡಬೇಕಾಗುತ್ತದೆ, ನಬಾರ್ಡ್‌ನವರು ಅಬ್ಜಕ್ಷನ್ ಮಾಡುತ್ತಾರೆಂದು ಹೇಳುತ್ತಿದ್ದೀರಿ...

ಶ್ರೀ ಆರ್. ಎಲ್. ಜಾಲಪ್ಪ.—ಈಗ ಏನು ತಮಗೆ ರೈತರ ಬಗ್ಗೆ ಔದಾರ್ಯ ಬಂದಿದೆ, ಏನು ಹೇಳುತ್ತಿದ್ದೀರಿ ಸ್ವಾಮಿ, ಇದು ಒಂದೂ ನನಗೆ ಅರ್ಥವಾಗುತ್ತಿಲ್ಲ...

ಡಾ|| ವಿ.ಎಸ್. ಆಚಾರ್ಯ.—೩೦-೬-೮೩ರ ಅವಧಿಯೊಳಗೆ ಸಾಲವನ್ನು ವಾಪಸ್ಸು ಕೊಟ್ಟಿರುವವರಿಗೆ ಮಾತ್ರ ಈಗ ಲಾಭವಾಗಿರುತ್ತದೆ. ಮಿಕ್ಕ ರೈತರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಕೇಂದ್ರದವರು ಆಕ್ಷೇಪಣೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ...

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಮಗೆ ಸರಿಯಾದ ಪರ್ಯಾಯ ಉತ್ತರ ಸಿಗಬೇಕು. ಬರೀ ಉತ್ತರ ಕೇಳಿಕೊಂಡು ಹೋಗುವುದಕ್ಕೆ ನಾವು ತಯಾರಿಲ್ಲ. ಅವರ ಕಷ್ಟ ಪರಿಹಾರವಾಗುವುದು ಬೇಡವೇ. ಸರ್ಕಾರ ಇದರ ಬಗ್ಗೆ ಮನಸ್ಸು ಮಾಡಿ ಕೆಲಸ ಮಾಡಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಪಿ.ಎಲ್.ಡಿ. ಬ್ಯಾಂಕಿನಿಂದ ಏತ ನೀರಾವರಿ ಯೋಜನೆಗೆಂದು ಮಂಜೂರಾಗಿರತಕ್ಕದ್ದು ೪೦ ಲಕ್ಷ ರೂಪಾಯಿಗಳು. ಆಮೇಲೆ ಯಾವ ರೀತಿ ಆಗಿದೆ ಎಂದು ಹೇಳುತ್ತೇನೆ. ಅದು ಈಗ ೮೦ ಲಕ್ಷಕ್ಕೆ ಬಂದಿದೆ. ಪಿ.ಎಸ್.ಎಲ್.ಡಿ.ಬಿ. ಯವರು ಸ್ಯಾಂಕ್ಷನ್ ಮಾಡುವಾಗ ಸ್ಯಾಂಕ್ಷನ್ ಮೆಮೋ ಹಾಕುತ್ತಾರೆ. ಅಲ್ಲಿರತಕ್ಕ ಅಧ್ಯಕ್ಷರು ಮಾಡಿರತಕ್ಕ ಅವ್ಯವಹಾರ ಯಾವ ರೀತಿ ಇದೆ ಎಂದರೆ ಅಲ್ಲಿ ಹಾಕಿರುವುದೇ ಬೇರೆ ಇವರು ಪರ್ಚೇಸ್ ಮಾಡಿರುವುದೇ ಬೇರೆ. ಕಂಡೀಷನ್ಸ್ ಹಾಕತಕ್ಕ ಸಂದರ್ಭದಲ್ಲಿ ಪ್ರಿಲಿಮಿನರಿ ವರ್ಕ್ಸ್‌ಗೆ ಸಂಬಂಧಪಟ್ಟದ್ದು ಎಂದು ಹಾಕಿರುತ್ತಾರೆ. ಅಂದರೆ ಸಿಮೆಂಟ್, ವೈರ್, ಐರನ್, ಮೆಷಿನ್ ಇತ್ಯಾದಿಗಳನ್ನು ಪರ್ಚೇಸ್ ಮಾಡುವ ಬಗ್ಗೆ ಕಂಡೀಷನ್‌ನಲ್ಲಿ ಹಾಕಿರುತ್ತಾರೆ. ಎರಡು ವರ್ಷಗಳ ಹಿಂದೆ ಮೆಷಿನ್ ಪರ್ಚೇಸ್ ಮಾಡಿರತಕ್ಕ ರೈತರು ೫ ಸಾವಿರ ರೂಪಾಯಿ ಬಡ್ಡಿ ಕೊಡಬೇಕಾಗಿದೆ. ೫ ವರ್ಷದಲ್ಲಿ ಬಡ್ಡಿ ಎಲ್ಲ ಸೇರಿ ೫೦ ಲಕ್ಷ ರೂಪಾಯಿ ಆಗಿದೆ. ಆದರೂ ಲಿಫ್ಟ್ ಇರಿಗೇಷನ್ ಯೋಜನೆ ಕಾರ್ಯರೂಪದಲ್ಲಿ ಬಂದಿಲ್ಲ. ರೈತರು ಗೋಳಾಡಲಿಕ್ಕೆ ಹತ್ತಿದ್ದಾರೆ. ಅಲ್ಲಿರತಕ್ಕ ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರು ತಮ್ಮ ಸಂಬಂಧಿಕರಿಗೇ ಕಾಂಟ್ರಾಕ್ಟ್ ಕೊಟ್ಟು ಮಾಡಿಸುತ್ತಿದ್ದಾರೆ. ಹೆಸರು ಮಾತ್ರ ಬೇರೆ ಹಾಕುತ್ತಾರೆ, ಕೆಲಸ ಮಾಡತಕ್ಕವರು ಸಂಬಂಧಿಕರೆ. ಅಲ್ಲಿರತಕ್ಕ ಫೈಲ್ಸ್, ಪೇಪರ್ಸ್ ಇತ್ಯಾದಿಗಳನ್ನು ನೋಡಿ ಒಂದು ಶೆಲ್ ಮುಖಾಂತರ ವಿಚಾರಣೆ ಮಾಡಿಸಿದರೆ ಅನೇಕ ವ್ಯವಹಾರಗಳು ಬಯಲಿಗೆ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ನಿರ್ದಾಕ್ಷಿಣ್ಯವಾಗಿ ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರು ಮತ್ತು ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ೫ ನಿಮಿಷಗಳ ಕಾಲ ಮಾತ್ರ ಮಾತನಾಡಿದ್ದೆ. ಈಗ ಮಂತ್ರಿಗಳು ಸದನದಲ್ಲಿ ಒಂದು ಬ್ಯಾಂಕು ಮತ್ತು ಒಂದು ಸೊಸೈಟಿಯ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಕೂಡ ಮಾತನಾಡಬೇಕಾಗಿದೆ. ಸಹಕಾರ ಕ್ಷೇತ್ರದಲ್ಲಿ ಯಾರೇ ಹಣ ದುರುಪಯೋಗ ಮಾಡಲಿ ಅವರನ್ನು ಶಿಕ್ಷಿಸುವ ಸಲುವಾಗಿ ಸಹಕಾರಿ ಜೈಲನ್ನು ತೆರೆಯಬೇಕೆಂದು ಹೇಳಿದ್ದೆ. ಈ ಸಹಕಾರಿ ಮಂತ್ರಿಗಳನ್ನು ಇವತ್ತು ಕೇಳಬಯಸುವುದೇನೆಂದರೆ, ನಿಮಗೆ ಈ ಸಹಕಾರಿ ಕ್ಷೇತ್ರದಲ್ಲಿ ಅಚಲವಾದ ನಂಬಿಕೆ ಇದೆಯೇ ? ಇದರ ಬಗ್ಗೆ ನಿಮ್ಮ ಸ್ಪಷ್ಟವಾದ ನಿಲುವು ಏನು ? ತಪ್ಪಿತಸ್ಥರಿಗೆ ಶಿಕ್ಷೆ ನೀಡತಕ್ಕದ್ದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ? ದೂರು ಬಾರದಿದ್ದರೂ ತಪ್ಪಿತಸ್ಥರನ್ನು ಕಂಡುಹಿಡಿದು ಏನು ಕ್ರಮ ತೆಗೆದುಕೊಂಡಿದ್ದೀರಿ ? ಜನತಾ ಸರ್ಕಾರದ ನೀತಿ-ನಿಲುವು ಏನು ? ತಪ್ಪಿತಸ್ಥ ಅಧಿಕಾರಿ

ಗಳನ್ನು ಕಠಿಣ ಶಿಕ್ಷೆಗೆ ಗುರಿ ಮಾಡಬೇಕು. ಈಗಿರತಕ್ಕ ಸಹಕಾರ ಕಾಯಿದೆಯಲ್ಲಿ ಶಿಕ್ಷೆ ಇಲ್ಲ. ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಒಂದು ವಸ್ತುವನ್ನು ಕದ್ದವನಿಗೆ ೩ ತಿಂಗಳು ಸಜ ಮಾಡಬಹುದು. ಸಹಕಾರ ಕ್ಷೇತ್ರದಲ್ಲಿ ಇದಕ್ಕೆ ಕಠಿಣ ಶಿಕ್ಷೆ ಕೊಡಬೇಕು. ಸಹಕಾರ ಮಂತ್ರಿಗಳು ಬೆಂಗಳೂರು ಜಿಲ್ಲಾ ಬ್ಯಾಂಕಿನಲ್ಲಿ ೧೮ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ, ರಿಸರ್ವ್ ಬ್ಯಾಂಕಿನವರು ಸಹ ಬೆಂಗಳೂರು ಜಿಲ್ಲಾ ಬ್ಯಾಂಕಿನ ವಿಷಯದಲ್ಲಿ ಟೀಕೆ ಮಾಡಿದ್ದಾರೆ. ಅಲ್ಲಿ ಇವರು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಸ್ವಜನ ಪಕ್ಷಪಾತ ಮಾಡಿ ಒಬ್ಬರನ್ನು...

ಶ್ರೀ ಆರ್.ಎಲ್. ಜಾಲಪ್ಪ.—ಅದು ಹಳೇ ಕಥೆ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ಇದರ ಬಗ್ಗೆ ಪ್ರಸ್ತಾಪಿಸಲು ದಯವಿಟ್ಟು ಅವಕಾಶ ಕೊಡಬೇಕು. ಇವತ್ತು ಅವರು ಅಧಿಕಾರದಲ್ಲಿದ್ದಾರೆ, ಮಂತ್ರಿಗಳಾಗಿದ್ದಾರೆ. I will read the relevant portion. On 6-12-72 the R.B.I. addressed a letter to Registrar of Co-operative Societies.

(INTERRUPTIONS)

MR. RAME GOWDA AND MR. JALAPPA......

ಉಪಾಧ್ಯಕ್ಷರು.—ವಿವರಣೆ ಕೇಳಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ಕೇಳಿ. ಅದನ್ನೆಲ್ಲಾ ಈಗ ಓದುವುದಕ್ಕೆ ಹೋಗಬೇಡಿ.

SRI N. CHIKKE GOWDA.—Sir, letter is addressed to Registrar of Co-operative Societies...

(INTERRUPTION)

SRI P. RAMDEV.—Sir, he can't read the whole letter.

(INTERRUPTIONS)

ಉಪಾಧ್ಯಕ್ಷರು.—ವಿವರಣೆ ಕೇಳಿ ಅಂದರೆ ನೀವು ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ವಿವರಣೆ ಕೇಳಲಿಕ್ಕೆ ಮಾತ್ರ ಅವಕಾಶ ಕೊಡುತ್ತೇನೆ. ಗಂಟೆಗಟ್ಟಲೆ ಓದಿಕೊಂಡು ಕಾಲಿತುಕೊಳ್ಳುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ತಾವು ಹಿರಿಯ ಸದಸ್ಯರು ಮತ್ತು ಮಂತ್ರಿಗಳಾಗಿದ್ದವರು.

ಶ್ರೀ ಎನ್. ಚಿಕ್ಕೇಗೌಡ.—ಹಿರಿಯ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಅವಕಾಶ ಕೊಡಿ, ಆದರೆ ಎಲ್ಲ ಸದಸ್ಯರೂ ಅದನ್ನು ಮುಂದು ವರಿಸುವುದು ಬೇಡ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ರಿಸರ್ವ್ ಬ್ಯಾಂಕಿನವರು...

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ಈ ಸರ್ಕಾರಿ ಮಂತ್ರಿಗಳು ಸಹಕಾರ ಸಂಸ್ಥೆಯಲ್ಲಿ ಕೆಲಸ ಮಾಡಿ ಅಲ್ಲಿ ಅವ್ಯವಹಾರ ನಡೆಸಿ, ಕಾಯಿದೆಗೆ ವಿರುದ್ಧವಾಗಿ ಹೋಗಿ ಇವತ್ತಿನ ದಿವಸ ಇಲ್ಲಿ ಸಹಕಾರ ಮಂತ್ರಿಗಳಾಗಿರುವುದು ಅನುಚಿತ.

MR. DEPUTY SPEAKER.—There is a separate forum to bring that matter. It is not by way of clarification. Do not use this House and this time for that purpose. You seek clarification. I will call Sri Byre Gowda now.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ರಿಸರ್ವ್ ಬ್ಯಾಂಕ್‌ನಿಂದ ಲೆಟರ್ ಬಂದಿದೆ. ೨೮–೩–೬೯ರಲ್ಲಿ, ೯–೮–೭೦ರಲ್ಲಿ, ೨೯–೫–೭೭ರಲ್ಲಿ, ೧೦–೧೧–೭೭ರಲ್ಲಿ, ೬–೧೨–೭೮ರಲ್ಲಿ ಲೆಟರ್‌ಗಳು ಬಂದಿವೆ.

ಶ್ರೀ ಆರ್.ಎಲ್. ಜಾಲಪ್ಪ.—ಅವರೂ ಮಂತ್ರಿಗಳಾಗಿದ್ದವರು. ಅವರಿಗೇ ಗೊತ್ತುಂಟು. ನಾನು ಮಾಡಬಾರದ ಅನ್ಯಾಯವನ್ನೇನೂ ಮಾಡಲಿಲ್ಲ. ನಾನು ಡಿಫಾಲ್ಟರ್ ಆಗಿದ್ದೆ ಅಷ್ಟೇ. ಆದರೆ ನಾನು ಗ್ರೋವರ್ ಆಯೋಗದ ಮುಂದೆ ಹೋಗಿರಲಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನಾನು ಈಲ್ಡ್ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಿರಿಯ ಸದಸ್ಯರು ನಮಗೆ ಮಾರ್ಗದರ್ಶಕರಾಗಬೇಕು. ಇವರೇ ಈ ರೀತಿ ನಡೆದುಕೊಂಡರೆ ಹೇಗೆ ?

ಶ್ರೀ ಎನ್. ಚಿಕ್ಕೇಗೌಡ.—ಬ್ಯಾಟರಾಯನಪುರ ಸೊಸೈಟಿ ಬಗ್ಗೆ ನಾನು ಹೇಳುತ್ತಿದ್ದೆ. ನಾನು ವಿಷಯವನ್ನು ಹೇಳುತ್ತಿದ್ದೆ. ಮಾನ್ಯ ಮಂತ್ರಿಗಳು ಈ ರೀತಿ ಹೇಳುವುದಾದರೆ ಎನ್‌ಕ್ವೈರಿ ಹೇಗೆ ಆಗುತ್ತದೆ. ಈ ಬಗ್ಗೆ ನಾನು ನೇರವಾಗಿ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಆ ಬಗ್ಗೆ ಮಾನ್ಯ ಮೊಯಿಲಿಯವರು ಹೇಳಿದ್ದಾರೆ ಬಿಡಿ.

ಶ್ರೀ ಎನ್. ಚಿಕ್ಕೇಗೌಡ.—ಬ್ಯಾಟರಾಯನಪುರದಲ್ಲಿ ಮೇನೇಜ್‌ಮೆಂಟ್ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ನಾನು ಇಲ್ಲಿ ಓದುತ್ತೇನೆ.

ಉಪಾಧ್ಯಕ್ಷರು.—ನಿಮ್ಮ ಅನುಮಾನ ಏನಿದೆ ಅಷ್ಟನ್ನು ಕೇಳಿ. ಓದುವುದು ಬೇಡ. ಕ್ಲಾರಿಫಿಕೇಷನ್ ಕೇಳುವುದಿದ್ದರೆ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನದೊಂದು ಕ್ರಿಯಾಲೋಪ ಇದೆ. ಕ್ಲಾರಿಫಿಕೇಷನ್ನಿನ ವ್ಯಾಪ್ತಿ ಏನು ? ಇದರ ಅಡಿಯಲ್ಲಿ ಎಷ್ಟು ಕೇಳಬಹುದೆಂಬುದನ್ನು ತಾವು ನಿಗದಿ ಮಾಡಿ ಸರಿಯಾದ ಆದೇಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಭಾವನೆಯಲ್ಲಿ ಕ್ಲಾರಿಫಿಕೇಷನ್‌ಗೆ ಎಷ್ಟು ಅವಕಾಶವನ್ನು ತೆಗೆದುಕೊಳ್ಳಬೇಕೋ ಅದಕ್ಕಿಂತಾ ಜಾಸ್ತಿ ತೆಗೆದುಕೊಂಡಿದಾರೆಂದು ಹೇಳುತ್ತೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಬೇಡಿಕೆಗಳ ಮೇಲೆ ದೀರ್ಘ ಉತ್ತರವನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಚಿಕ್ಕೇಗೌಡರು ಕಾನೂನುಗಳನ್ನು, ಸರ್‌ಕ್ಯುಲರ್‌ಗಳನ್ನು ಇಟ್ಟುಕೊಂಡು ಇವುಗಳ ಮೇಲೆ ಕ್ಲಾರಿಫಿಕೇಷನ್ ಕೊಡಿ ಎಂದು ಪುಂಕಾನು ಪುಂಕವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿ ಇದಕ್ಕೆಲ್ಲಾ ಕ್ಲಾರಿಫಿಕೇಷನ್ ಕೊಡಿ ಎಂದು ಹೇಳಿದರೆ ಇದು ಕ್ಲಾರಿಫಿಕೇಷನ್ ವ್ಯಾಪ್ತಿಯಲ್ಲಿ ಬರುವುದಿಲ್ಲ. ತಾವು ಪದೇಪದೇ ಈ ಬಗ್ಗೆ ಹೇಳುತ್ತಿದ್ದೀರಿ. ಆದರೂ ಅವರು ನಿಲ್ಲಿಸಿಲ್ಲ. ನಾವು ಮುಂದಿನ ಬೇಡಿಕೆಗೆ ಹೋಗಬೇಕಾಗಿದೆ. ಮುಂದೆ ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು ಇವೆ. ಕ್ಲಾರಿಫಿಕೇಷನ್‌ಗೆ ಮಿತಿ ಇರಬೇಕು. ಈ ಬಗ್ಗೆ ಕಾಲವನ್ನು ನಿಗದಿ ಮಾಡಬೇಕೆಂದು ತಮ್ಮನ್ನು ಬೇಡಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಒಬ್ಬ ಮಾನ್ಯ ಸದಸ್ಯರು.—ಯಾವ ಕ್ಲಾಸ್ ಕೆಳಗೆ ಸ್ವಾಮಿ ?

SRI A. LAKSHMISAGAR.—Under rule 333, of the Rules of Procedure. There is an ambit under 333 to the manner in which the proceedings of this House shall be conducted I submit to the Chair that the manner in which the clarif.

cations are being sought and answers are being given are not in conformity with the rules of procedure, in conformity with clarification.

ಶ್ರೀ ಧರ್ಮಸಿಂಗ್.—ಇವರು ಲಾ ಕಾಲೇಜಿನಲ್ಲಿ ಪಾಠ ಹೇಳುವ ಹಾಗೆ ನಮಗೆ ಪಾಠ ಹೇಳುತ್ತಿದ್ದಾರಾ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈಲ್ಡ್ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್ ರವರೇ ಒಂದೊಂದು ಸಾರಿ ಮರೆತು ಹೋಗುತ್ತದೆ. ಗಮನಕ್ಕೆ ತರಲಿ ಬಿಡಿ.

SRI A. LAKSHMISAGAR.—My submission is verv small and it is raised under rule 333 of the rules of procedure, the ambit of clarification is very small and narrow. In the guise of seeking a clarification another debate on the demand cannot be opened. Therefore my submission is that this must be strictly regulated and the ambit within which it should be regulated is my submission.

ಶ್ರೀ ಪಿ. ರಾಮ್‌ದೇವ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ೩೧೧ನೇ ನಿಯಮದ ಪ್ರಕಾರ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಚಿಕ್ಕೇಗೌಡರು ಮಂತ್ರಿಗಳ ಮೇಲೆ ಕೆಲವು ನೇರ ಅಪಾದನೆ ಮಾಡಿ, ಆ ಬಗ್ಗೆ ಓದುತ್ತಿದ್ದಾರೆ.

ಅಧ್ಯಕ್ಷರು.—ಆ ಬಗ್ಗೆ ನೋಟೀಸ್ ಕೊಟ್ಟು ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಪಿ. ರಾಮ್‌ದೇವ್.—ನಿಯಮ ೩೧೧ರ ಪ್ರಕಾರ ಪೂರ್ತಿ ಮಾಹಿತಿಯನ್ನು ಅವರು ಕೊಡಬೇಕಾಗುತ್ತದೆ. ಅದನ್ನು ಅವರು ಕೊಟ್ಟಿಲ್ಲ. ಇವರು ಏನು ಅಪಾದನೆಯನ್ನು ಮಾಡುತ್ತಿದ್ದಾರೆ ಅದರಿಂದ ಸಾರ್ವಜನಿಕರ ಹಿತಾಸಕ್ತಿಗಳಿಗೆ ಬಾಧಕವಾಗುತ್ತದೆ.

MR. SPEAKER.—Both the Points of Orders are in order.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಕಾನೂನು ಮಂತ್ರಿಗಳು ಕ್ರಿಯಾಲೋಪ ತೆಗೆದರು. ಯಾವ ಸಂದರ್ಭದಲ್ಲಿ ಕ್ರಿಯಾಲೋಪವನ್ನು ಎತ್ತಬೇಕು ಎಂದು ನಿಯಮ ೩೩೩ರಲ್ಲಿ ಸ್ಪಷ್ಟವಾಗಿದೆ. ಬಹುಶಃ ಇದನ್ನು ಈ ಸದನದಲ್ಲಿ ಅನ್ವಯ ಮಾಡಿದರೆ ಸನ್ಮಾನ್ಯ ಸದಸ್ಯರಾದ ರಾಮ್‌ದೇವ್ ಅವರು, ಲಕ್ಷ್ಮಯ್ಯನವರು ಕ್ರಿಯಾಲೋಪವನ್ನು ಎತ್ತುವುದನ್ನೇ ನಿಲ್ಲಿಸಿಬಿಡಬೇಕಾಗುತ್ತದೆ. ಈ ಕಾನೂನು ಈ ಬಗ್ಗೆ ಸ್ಪಷ್ಟವಾಗಿದೆ. ಈ ರೂಲನ್ನು ಅನ್ವಯಮಾಡಿದರೆ ಈ ಕ್ರಿಯಾಲೋಪಗಳು ನಿಂತು ಸದನದಲ್ಲಿ ಕೆಲಸಕಾರ್ಯಗಳು ಸುಗಮವಾಗುತ್ತದೆ. ನಿಯಮ ೩೩೩ರ ಸಬ್ ಕ್ಲಾಸ್ (೨) ಈ ರೀತಿ ಹೇಳುತ್ತದೆ.

SRI P. RAMDEV.—Are you on a Point of Order

SRI M. VEERAPPA MOILY.—I am explaining what is the Point of Order raised by the Parliamentary Affairs Minister. It is not a Point of Order I am submitting.

MR. SPEAKER.—May I bring to the notice of the Hon. Leader of Opposition that I have already given my ruling that both the Points of Orders are in order.

SRI M. VEERAPPA MOILY.—Both the Points of Orders are in order ?

MR. SPEAKER.—I have a Point of Order, because we have almost taken four hours for the reply.

ಶ್ರೀ ಎಂ. ವೀರಪ್ಪ ಮೊಯಿಲಿ.—೪ ಗಂಟೆಗಳ ಪ್ರಸ್ತಾಪ ಆಯಿತು. ಬರೀ ಬ್ಯಾಟರಾಯನಪುರದ ಸೊಸೈಟಿ ಮತ್ತು ಬೆಂಗಳೂರು ಡಿ.ಸಿ.ಸಿ. ಬ್ಯಾಂಕ್ ವಿಷಯ ಬಿಟ್ಟು ಬೇರೆ ವ್ಯಾಪ್ತಿಗೆ ವಿಷಯ ಹೋಗಲೇ ಇಲ್ಲ.

MR. SPEAKER.—I would only bring it to the notice of the Members to the precise. ಬ್ಯಾಟರಾಯನಪುರ ಸೊಸೈಟಿಯಲ್ಲಿ ಎಂಪ್ಲಾಯಿಸ್ ಹಣ ದುರುಪಯೋಗ ಮಾಡಿದ್ದು ಮ್ಯಾನೇಜ್‌ಮೆಂಟಿನವರು ಕ್ರಮ ತೆಗೆದುಕೊಳ್ಳದಿರುವುದರಿಂದ ಸೂಪರ್‌ಸೀಡ್ ಮಾಡಿದ್ದೇವೆ ಎಂದು ಮಂತ್ರಿಗಳು ಹೇಳಿದರು.

> "Ultimately the present enquiry under section 64 of the Karnataka Co-operative Societies Act conducted by the Co-operation Department, during 1977 one Sri R.L. Jalappa was the President............

SRI S.R. BOMMAI:—I rise to a point of order.

ಶ್ರೀ ಆರ್.ಎಲ್. ಜಾಲಪ್ಪ.—ನಾನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದರೆ ಇವರ ಸ್ನೇಹಿತರು ಅದನ್ನು ವಾಪಸ್ ತೆಗೆದುಕೊಂಡರು.

ಶ್ರೀ ಎನ್. ಚಿಕ್ಕೇಗೌಡ.—ನಾನು ಜಾಲಪ್ಪನವರ ಬಗ್ಗೆ ಏನೂ ಹೇಳುವುದಿಲ್ಲ. ಅವರು ನನ್ನ ಸ್ನೇಹಿತರು. ನಾನು ಹೇಳುವುದನ್ನು ಶಾಂತವಾಗಿ ಕೇಳಿ ಉತ್ತರ ಕೊಡಿ.

ಶ್ರೀ ಆರ್.ಎಲ್. ಜಾಲಪ್ಪ.—ನಿಮ್ಮದೂ ಈಚೆಗೆ ಬರಲಿ, ನಾನು ತೆಗೆಯುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಇವರು ಅಧ್ಯಕ್ಷರಾಗಿದ್ದಾಗ ಆಗಿರುವುದನ್ನು ಹೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ.

ಶ್ರೀ ಪಂಪಾಪತಿ.—ಇವರದೂ ತೆಗೆಯಲಿ, ಅವರದೂ ತೆಗೆಯಲಿ. ಎಲ್ಲಾ ಹೊರಗೆ ಬರಲಿ ನೋಡೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪ ಎತ್ತಿದ್ದೇನೆ. ಕ್ಲಾರಿಫಿಕೇಷನ್ ಯಾವ ವಿಚಾರದಲ್ಲಿ ಕೇಳಬಹುದು ಎಂಬ ಬಗ್ಗೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಇಲ್ಲಿ ನಡೆದಂಥ ಚರ್ಚೆ ಮತ್ತು ಮಂತ್ರಿಗಳ ಉತ್ತರದ ಬಗ್ಗೆ ಮಾತ್ರ ಕ್ಲಾರಿಫಿಕೇಷನ್ ಕೇಳಬೇಕು. ಅದು ಬಿಟ್ಟು ಚಿಕ್ಕೇಗೌಡರು ಮಂತ್ರಿಗಳ ಮೇಲೆ ಹಿಂದೆ ನಡೆದಂಥ ನಡವಳಿಕೆಗಳ ಬಗ್ಗೆ ಓದುತ್ತಿದ್ದಾರೆ. ಮೊದಲನೆಯದಾಗಿ ಆ ರೀತಿ ಓದುವುದಕ್ಕಾಗುವುದಿಲ್ಲ. ಎರಡನೆಯದಾಗಿ ಕ್ಲಾರಿಫಿಕೇಷನ್ ಬಿಟ್ಟು ಬೇರೆ ವಿಚಾರ ಪ್ರಸ್ತಾಪ ಮಾಡುವುದಕ್ಕಾಗುವುದಿಲ. ಮಾನ್ಯ ಸದಸ್ಯರು ಈ ಬಗ್ಗೆ ನೋಟೀಸ್ ಕೊಟ್ಟರೆ ಉತ್ತರ ಕೊಡಬಹುದು.

ಅಧ್ಯಕ್ಷರು.—ನಾಲ್ಕು ಗಂಟೆಗಳ ಕಾಲ ವಿಸ್ತೃತವಾಗಿ ಚರ್ಚೆ ನಡೆದು ಮಂತ್ರಿಗಳು ಧೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ಈಗ ಇದನ್ನು ಮುಗಿಸೋಣ.

ಕೆಲವು ಸದಸ್ಯರು.—ಕ್ಲಾರಿಫಿಕೇಷನ್‌ಗೆ ಅವಕಾಶ ಬೇಕು.

ಅಧ್ಯಕ್ಷರು.—ಎಷ್ಟು ಹೊತ್ತು ಕ್ಲಾರಿಫಿಕೇಷನ್ ಕೇಳುತ್ತೀರಿ? ಕ್ಲಾರಿಫಿಕೇಷನ್ ಹೆಸರಿನಲ್ಲಿ ಭಾಷಣ ಮಾಡುತ್ತಾ ಹೋದರೆ ಹೇಗೆ? ನಾವು ಕೆಲವು ನಿಯಮಗಳನ್ನು ಹಾಕಿಕೊಂಡಿದ್ದೇವೆ. ಅದರ ಇತಿಮಿತಿಯನ್ನು ಅರಿತುಕೊಂಡರೆ ಒಳ್ಳೆಯದು. ಒಂದು ಬೇಡಿಕೆ ಮೇಲೆ ಹೆಚ್ಚುಕಡಿಮೆ ನಾಲ್ಕು ಗಂಟೆಗೂ ಹೆಚ್ಚು ಚರ್ಚೆಯಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಚರ್ಚೆಯಲ್ಲ, ಉತ್ತರ.

ಅಧ್ಯಕ್ಷರು.—ನಾಲ್ಕು ಗಂಟೆ ಉತ್ತರ ಆಗಿದೆ.

ಶ್ರೀ ಎಚ್.ಡಿ. ಚೌಡಯ್ಯ.—ಒಂದೆರಡು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ.

ಶ್ರೀ ಎನ್. ಚಿಕ್ಕೇಗೌಡ.—ನಾನಿನ್ನೂ ಮುಗಿಸಿಲ್ಲ. ಅವರು ಕ್ರಿಯಾಲೋಪ ಎತ್ತಿದರು, ಅದಕ್ಕಾಗಿ ಕುಳಿತುಕೊಂಡೆ. ಜಾಲಪ್ಪನವರು ಅಧ್ಯಕ್ಷರಾಗಿದ್ದಾಗ ಅವರ ಮೇಲೆ ಆಪಾದನೆಗಳಿವೆ. ಇಷ್ಟೊಂದು ಆಪಾದನೆಗಳು ಅವರ ಮೇಲೆ ಇವೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದ್ದಿದ್ದರೆ ಅವರು ಇವರನ್ನು ಸಹಕಾರ ಮಂತ್ರಿಗಳನ್ನಾಗಿ ಮಾಡುತ್ತಿರಲಿಲ್ಲ. ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ. ಆ ಸಹಕಾರ ಸಂಘದಲ್ಲಿ ಇಷ್ಟೆಲ್ಲಾ ಅನ್ಯಾಯ ಮಾಡಿ, ಡಿಫಾಲ್ಟರ್ ಆಗಿರುವುದರಿಂದ ಇವರಿಗೆ ಖಾತೆ ಬದಲಾಯಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದಕ್ಕಿಂತ ದೊಡ್ಡ ಖಾತೆಯನ್ನು ಬೇಕಾದರೆ ಕೊಡಲಿ, ಆದರೆ ಸಹಕಾರ ಖಾತೆ ಕೊಡುವುದು ಉಚಿತವಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಗ್ರೋವರ್ ಆಯೋಗದ ಮುಂದೆ ಹೋಗಿದ್ದವರು ಇವರು. ಇವರಿಗೇನು ಯೋಗ್ಯತೆ ಇದೆ ಸ್ವಾಮಿ ಹೇಳುವುದಕ್ಕೆ?

ಶ್ರೀ ಎಚ್.ಡಿ. ಚೌಡಯ್ಯ.—ಮಾನ್ಯ ಸಹಕಾರಿ ಮಂತ್ರಿಗಳು ಅವರ ಉತ್ತರದಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಸಾಕಷ್ಟು ಗೊಬ್ಬರ ಇದೆ ಎಂದು ಹೇಳಿದರು. ಇದು ವ್ಯವಸಾಯದ ಕಾಲ. ವ್ಯವಸಾಯಕ್ಕೋಸ್ಕರ ನಾವು ಕಾದಿರುತ್ತೇವೆಯೋ ಹೊರತು ವ್ಯವಸಾಯ ನಮಗೋಸ್ಕರ ಕಾದಿರುವುದಿಲ್ಲ. ನಾವು ಬೆಂಗಳೂರಿಗೆ ಬರಬೇಕಾದರೆ ಬಸ್ ಸ್ಟ್ಯಾಂಡಿನಲ್ಲಿ ಅಥವಾ ರೈಲ್ವೆ ಸ್ಟೇಷನ್‌ನಲ್ಲಿ ಯಾವ ರೀತಿ ೧೦ ನಿಮಿಷ ಬೇಗ ಬಂದು ಕಾದಿರುತ್ತೇವೋ ಅದೇ ರೀತಿ ವ್ಯವಸಾಯಕ್ಕೆ ನಾವು ಕಾದಿರಬೇಕು. ಅದಕ್ಕೆ ಬೇಕಾದ ವ್ಯವಸಾಯ ಸಾಮಗ್ರಿಗಳು, ಮತ್ತೊಂದು, ಎಲ್ಲವನ್ನೂ ಸಕಾಲದಲ್ಲಿ ಒದಗಿಸಬೇಕು. ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ ಮಂಡ್ಯ ಜಿಲ್ಲೆಯಲ್ಲಿ ಕಾಂಪ್ಲೆಕ್ಸ್ ಗೊಬ್ಬರವಾಗಲೀ, ಯೂರಿಯಾ ಆಗಲಿ ಸಿಗುತ್ತಿಲ್ಲ. ಬ್ಲಾಕ್‌ಮಾರ್ಕೆಟ್‌ನಲ್ಲಿ ೨೦ ದಿವಸಗಳಿಂದ ಯೂರಿಯಾ ಮತ್ತು ಕಾಂಪ್ಲೆಕ್ಸ್ ಗೊಬ್ಬರವನ್ನು ಖಾಸಗಿ ವ್ಯಾಪಾರಸ್ಥರು ಮಾರಾಟ ಮಾಡುತ್ತಿದ್ದಾರೆ. ಸಹಕಾರ ಸಂಘಗಳು ಮತ್ತು ಖಾಸಗಿ ವ್ಯಾಪಾರಸ್ಥರ ಮಧ್ಯೆ ಪೈಪೋಟಿ ನಡೆಯುತ್ತಿದೆ. ಒಂದು ಮೂಟೆಗೆ ಮೂರು ರೂಪಾಯಿ ನಾಲ್ಕು ರೂಪಾಯಿ ಹೆಚ್ಚು ಹಣ ಕೊಡಬೇಕಾಗಿದೆ ಸರ್ಕಾರ ಈ ವಿಷಯದಲ್ಲಿ ಖಚಿತವಾದ ತೀರ್ಮಾನವನ್ನು ಕೈಗೊಂಡಿಲ್ಲ. ದಯಮಾಡಿ ಖಾಸಗಿ ವ್ಯಾಪಾರಸ್ಥರು ಮತ್ತು ಸಹಕಾರ ಸಂಘಗಳ ನಡುವೆ ಬೆಲೆಗಳಲ್ಲಿ ಅಂತರ ಏನಿದೆ ಅದನ್ನು ಸರಿದೂಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ವ್ಯವಸಾಯ ಮಂತ್ರಿಗಳು ತಮ್ಮ ಪಕ್ಕದಲ್ಲೇ ಇದ್ದಾರೆ. ಇದೇ ರೀತಿ ಗೊಬ್ಬರಕ್ಕೆ ಅಭಾವ ಬೇರೆ ಜಿಲ್ಲೆಗಳಲ್ಲೂ ಇರಬಹುದು. ಇದಕ್ಕೆ ನಾಳೆ ನಾಡಿದ್ದು ಎಂದರೆ ಆಗುವುದಿಲ್ಲ. ಏನೋ ದೈವವಶಾತ್ ಮಳೆ ಚೆನ್ನಾಗಿ ಆಗುತ್ತಿದೆ. ರಿಸರ್ವಾಯರ್‌ನಲ್ಲಿ ನೀರಿದೆ, ದಯವಿಟ್ಟು ಕೂಡಲೇ ಗೊಬ್ಬರವನ್ನು ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮಂಡ್ಯ ಜಿಲ್ಲೆಯಿಂದ ಅಧಿಕಾರಿಗಳು ಇಲ್ಲಿ ಬಂದಿದ್ದಾರೆ. ಜಿಲ್ಲಾ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಬಂದಿದ್ದಾರೆ, ಡೆಪ್ಯುಟಿ ರಿಜಿಸ್ಟ್ರಾರ್ ಬಂದಿದ್ದಾರೆ ಜಾಯಿಂಟ್ ರಿಜಿಸ್ಟ್ರಾರ್ ಎಲ್ಲಾ ಇಲ್ಲಿ ಬಂದಿದ್ದಾರೆ. ೧೯೮೧–೮೨ ಮತ್ತು ೮೨–೮೩ರ ಅಡ್ವಾನ್ಸ್ ರಿಕವರಿ ಏನು ಎಂಬ ಬಗ್ಗೆ ಹೇಳಿದ್ದಾರೆ ನಾನು ಬ್ಯಾಂಕ್‌ನ್ನಾಗಲೀ ಸರ್ಕಾರವನ್ನಾಗಲೀ ಟೀಕೆ ಮಾಡುವುದಿಲ್ಲ. ಕಳೆದ ಸಾರಿ ಮಂಡ್ಯ ಜಿಲ್ಲೆಯಲ್ಲಿ...............

ಅಧ್ಯಕ್ಷರು.—ತಾವು ಭಾಷಣವನ್ನೇ ಮಾಡುತ್ತಿದ್ದೀರಲ್ಲ?

ಶ್ರೀ ಎಚ್.ಡಿ. ಚೌಡಯ್ಯ.—ಇದು ಎಲ್ಲರ ಸಮಸ್ಯೆ. ಆದ್ದರಿಂದ ಹೆಚ್ಚು ಹೇಳಬೇಕಾಗಿದೆ. ಸಾಲದ ಬಟವಾಡೆ ವಿಷಯದಲ್ಲಿ ಹೇಳುತ್ತಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ೧೧ ಕೋಟಿ ೧೨ ಕೋಟಿ ರೂಪಾಯಿ ಸಾಲ ಕೊಟ್ಟಿದ್ದೀರಿ. ತಮಗೆ ಗೊತ್ತಿರುವ ಹಾಗೆ ಆಹಾರದ ಬೆಳೆಗೆ ಬೆಲೆ ಆಗತಕ್ಕ ಕಾಲ ಮುಗಿದುಹೋಗಿದೆ. ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯ ಸಹಕಾರ ಸಂಘಗಳ ಮೂಲಕ ಕೊಟ್ಟಿರತಕ್ಕದ್ದು ೧ ಕೋಟಿ ೭ ಲಕ್ಷ ರೂಪಾಯಿಗಳು. ಕಬ್ಬಿನ ಬೆಳೆ ಬಗ್ಗೆ ಹೇಳುವುದಾದರೆ ಒಪ್ಪಿಗೆ ಕಬ್ಬು ನಾನು–ಒಪ್ಪಿಗೆ ಕಬ್ಬು ಎರಡಕ್ಕೂ ಸೇರಿ ಕೊಟ್ಟಿರತಕ್ಕದ್ದು ೭ ಲಕ್ಷ ರೂಪಾಯಿಗಳು. ಜೂನ್ ಜುಲೈ, ಆಗಸ್ಟ್, ಸೆಪ್ಟೆಂಬರ್ ಈ ಮೂರುವರೆ ತಿಂಗಳಲ್ಲಿ ಕಬ್ಬು ನಾಟಿ ಮಾಡಿದ್ದಾರೆ. ರೈತನಿಗೆ ಎ ಕಾಂಪೊನೆಂಟಾಗಲೀ, ಬಿ ಕಾಂಪೊನೆಂಟಾಗಲೀ ಕೊಟ್ಟಿಲ್ಲ ಎಂದರೆ ರೈತರು ಏನು ಮಾಡಬೇಕು?

ಹೋದವರ್ಷವೂ ಇದೇ ಪ್ರಶ್ನೆ ಬಂತು. ಸನ್ಮಾನ್ಯ ಮಂತ್ರಿಗಳಿಗೆ ನನಗೆ ಉತ್ತರ ಹೇಳುವುದಕ್ಕೆ ಸಾಧ್ಯವಾಗದೇ ಇದ್ದರೂ ಕೂಡ ಅಧಿಕಾರಿಗಳ ಜೊತೆ ಸಭೆ ಮುಗಿದಮೇಲೆ ಚರ್ಚೆ ಮಾಡಿ ಇವೆರಡು ವಿಷಯದಲ್ಲಿ ತುರ್ತು ಕ್ರಮ ತೆಗೆದುಕೊಳ್ಳಬೇಕು. ನಾನೂ ಅಂಕಿಅಂಶ ತಂದಿದ್ದೇನೆ. ನನ್ನನ್ನು ಕರೆದರೆ ನಾನು ಕೊಡುತ್ತೇನೆ. ವಸ್ತುಸ್ಥಿತಿಯನ್ನು ನಾನು ಹೇಳುತ್ತಿದ್ದೇನೆಯೇ ವಿನಹ ಟೀಕೆ ಮಾಡುವುದಕ್ಕೆ ಹೇಳುತ್ತಿಲ್ಲ. ತಾವು ಅಧಿಕಾರಕ್ಕೆ ಬಂದಮೇಲೆ ಆರು ತಿಂಗಳೊಳಗೆ ಎರಡು ಸಾರಿ ಸಹಕಾರ ಸಂಘಗಳ ಜನರಲ್ ಬಾಡಿ ಮೀಟಿಂಗನ್ನು ಮುಂದೂಡಿದ್ದೀರಿ. ಸಹಕಾರ ಕ್ಷೇತ್ರದಲ್ಲಿ ಆಳವಾಗಿ ಅನುಭವವನ್ನು ಪಡೆದಿರುವ ತಾವು ಏತಕ್ಕೆ ಮುಂದೂಡಿದಿರಿ? ಆಗಸ್ಟ್, ಸೆಪ್ಟೆಂಬರ್ ಅಕ್ಟೋಬರ್ ಒಳಗಡೆ ವಿಲೇಜ್ ಲೆವೆಲ್, ಡಿಸ್ಟ್ರಿಕ್ಟ್ ಲೆವೆಲ್, ಮತ್ತು ತಾಲ್ಲೂಕ್ ಲೆವೆಲ್ ಜನರಲ್ ಬಾಡಿ ಮೀಟಿಂಗ್ ಮಾಡಬೇಕೆಂದು ಕೆಲವರು ದಿನ ನಿಗದಿ ಮಾಡಿ ಪುಸ್ತಕಗಳನ್ನೂ ಕೂಡ ಪ್ರಿಂಟ್ ಮಾಡಿದ್ದರು. ಆದರೆ ತಮ್ಮಿಂದ ಆದೇಶ ಹೋದಮೇಲೆ ಎಲ್ಲಾ ಮುಂದೂಡಿದರು. ಯಾವುದೋ ಸಂದರ್ಭದಲ್ಲಿ ಪಿ. ಎಲ್. ಡಿ. ಬ್ಯಾಂಕಿನಲ್ಲಿ ಓಪನ್ ಮೆಂಬರ್‌ಷಿಪ್‌ನಿಂದ ಏನು ಅನಾಹುತವಾಗುತ್ತಿದೆ ಎಂದು ಹೇಳಿದಿರಿ. ಇಲ್ಲಿ ಅದು ಈಗ ಆಗುತ್ತಿದೆ. ಕಾಯಿದೆ ತಿದ್ದುಪಡಿ ಮಾಡುವುದಕ್ಕೂ ಜನರಲ್ ಬಾಡಿ ಮೀಟಿಂಗ್‌ಗೂ ಸಂಬಂಧವಿಲ್ಲ.

ಸ್ವಾಮಿ, ಇಡೀ ರಾಷ್ಟ್ರದಲ್ಲಿಯೇ ಗೊಬ್ಬರದ ಕೊರತೆ ಇದೆ. ಕರ್ನಾಟಕದಲ್ಲಿರುವ ಮಂಗಳೂರು ಗೊಬ್ಬರದ ಕಾರ್ಖಾನೆ ಕೆಲಸ ಮಾಡಲಿಲ್ಲ, ಹೊರಗಡೆಯಿಂದ ಬರತಕ್ಕ ಗೊಬ್ಬರ ಕೂಡ ಕಾಲಕ್ಕೆ ಸರಿಯಾಗಿ ಬರಲಿಲ್ಲ. ಈ ಸೀಸನ್‌ನಲ್ಲಿ ೩೭,೦೦೦ ಟನ್ ವ್ಯಾಪಾರ ಮಾಡಿದ್ದೇವೆ ಸ್ಟಿಕ್ ಸಂಸ್ಥೆಯಿಂದ ಸುಮಾರು ೩೦,೦೦೦ ಟನ್ ಗೊಬ್ಬರ ಬರಬೇಕಾಗಿತ್ತು, ಈಗ ತಾನೇ ೧೫,೦೦೦ ಟನ್ ಬಂದಿದೆ. ಇನ್ನು ಸ್ವಲ್ಪ ದಿವಸದಲ್ಲಿ ೧೫,೦೦೦ ಟನ್ ಬರುವುದರಲ್ಲಿದೆ. ಬಂದ ಕೂಡಲೇ ಬೇಗ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಇನ್ನು ಸಾಲದ ಬಗ್ಗೆ ಹೇಳಿದ್ದಾರೆ, ನಿಮ್ಮ ಜಿಲ್ಲೆಯಲ್ಲಿ ೬೦ ಪರ್ಸೆಂಟ್ ಸಾಲ ವಸೂಲಾಗಿದೆ. ಅಧಿಕಾರಿಗಳೊಂದಿಗೆ ಮಾತನಾಡಿ, ಹಣ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.— ಸಭೆ ಮುಗಿದ ಮೇಲೆ, ನಮ್ಮನ್ನು ಕರೆಯಿರಿ ವಿಷಯಗಳನ್ನು ತಿಳಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಆಗಬಹುದು, ಸ್ವಾಗತಿಸುತ್ತೇನೆ. ಇನ್ನು ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದಕ್ಕೆ ನಾನಾ ಕಾರಣಗಳು ಇದ್ದವು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಚುನಾವಣೆ ಮಾಡಿದರೆ ನಮ್ಮ ಭಾಗದ ಪ್ರತಿನಿಧಿಗಳಿಗೆ ತೊಂದರೆಯಾಗುತ್ತದೆಂದು ಮನವಿ ಮಾಡಿದರು. ಮೂರು ವರ್ಷಕ್ಕೆ ಒಂದು ಸಾರಿ ಎಲೆಕ್ಷನ್ ಲಾಟ್ ಎತ್ತುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಮೂರು ವರ್ಷಕ್ಕೊಂದು ಸಾರಿ ಚುನಾವಣೆ ಒಂದು ವರ್ಷಕ್ಕೊಂದು ಸಾರಿ ಆಫೀಸ್ ಬೇರರ್ಸ್‌ನ್ನೂ ನೇಮಕ ಮಾಡುವಂತಾದ್ದು ಮಾಡಲಾಗಿದೆ. ಇದರ ಜೊತೆಗೆ ಒಂದು ಕಾಗದವನ್ನು ಕೂಡ ಕಳುಹಿಸಿದ್ದೇವೆ. According to the calendar of events they must hold elections, and they are holding it.

SRI H. D. CHOWDAIAH.— I have seen that circular and I have read it. It is not mandatory.

ಅಧ್ಯಕ್ಷರು.— ಪ್ರಸ್ತಾವವು ಹೀಗಿದೆ.

ಅಭಿಯಾಚನೆ ಕ್ರಮಾಂಕ ೫೪—ಸಹಕಾರ

೩೧—೩—೧೯೭೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೪೭,೧೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೯,೭೮,೩೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೫—ಕ್ರಮಪಡಿಸಿದ ಮಾರುಕಟ್ಟೆಗಳು

೩೧—೨—೧೯೭೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ

೫,೬೫ ೬೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವು ಅಂಗೀಕೃತವಾಗಿದೆ.

(ಕಾಂಗ್ರೆಸ್ ಸದಸ್ಯರೆಲ್ಲರೂ ಈ ಸಂದರ್ಭದಲ್ಲಿ ವಾಕೌಟ್ ಮಾಡಿದರು)

ಶ್ರೀ ಆರ್. ಎಲ್. ಜಾಲಪ್ಪ.— ಸ್ವಾಮಿ, ಈ ರಾಜ್ಯದಲ್ಲಿ ರೈತರ ಆಂದೋಳನ ಆದಾಗ ೧೨೮–೧೩೦ ಜನ ರೈತರನ್ನು ಕೊಂದವರು ಇಂದು ವಿನಾಕಾರಣ ವಾಕೌಟ್ ಮಾಡುತ್ತಿದ್ದಾರೆ. ಜನಗಳನ್ನು ಮೆಚ್ಚಿಸಬೇಕೆಂದು ಹೊರಟಿದ್ದಾರೇನೋ ಗೊತ್ತಿಲ್ಲ. ಅವರು ಮಾಡಿದಂಥ ಟೀಕೆಗಳನ್ನು ಒಂದೊಂದಾಗಿ ತೆಗೆದುಕೊಂಡು ತೇಜೋವಧೆ ಮಾಡಿದ್ದನ್ನು ಅರಗಿರಿಸಿ ಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ವಾಕೌಟ್ ಮಾಡುತ್ತಿದ್ದಾರೆ.

STATEMENT BY MINISTER

(*i*) *re*: **Collapse of a Seven storeryed building at Subedar Chatram Road, Bangalore.**

SRI RAMA KRISHNA HEGDE (Chief Minister).—

ದಿನಾಂಕ ೧೨–೯–೮೩ರಂದು ಬೆಂಗಳೂರು ನಗರದ ಸುಭೇದಾರ್ ಛತ್ರಂ ರಸ್ತೆಯಲ್ಲಿರುವ ಕಪಾಲಿ ಸಿನಿಮಾ ಮಂದಿರದ ಪಕ್ಕದಲ್ಲಿನ ಇನ್ನೂ ನಿರ್ಮಾಣದ ಹಂತದಲ್ಲಿದ್ದ ಬಹು ಅಂತಸ್ತಿನ ಕಟ್ಟಡವು ಮಧ್ಯಾಹ್ನ ಸುಮಾರು ೩–೩೦ ಗಂಟೆಯ ಸಮಯದಲ್ಲಿ ಕುಸಿದುಬಿದ್ದು ದುರ್ಘಟನೆ ಸಂಭವಿಸಿತು. ಈ ಬಹು ಅಂತಸ್ತಿನ ಕಟ್ಟಡವನ್ನು ಕಪಾಲಿ ಚಿತ್ರಮಂದಿರಕ್ಕೆ ಹೊಂದಿಕೊಂಡಂತೆ ಕಟ್ಟಲಾಗುತ್ತಿತ್ತು. ಈ ಕಟ್ಟಡವು ಕುಸಿದು ''ಬೆಂಗಳೂರು ಬುಕ್ ಬ್ಯೂರೋ'' ಎಂಬ ನಾಮಾಂಕಿತ ಪುಸ್ತಕದ ಮಳಿಗೆಯ ಎರಡು ಅಂತಸ್ತಿನ ಕಟ್ಟಡದ ಮೇಲೆ ಬಿದ್ದುದರ ಪರಿಣಾಮವಾಗಿ ಅಪಾರವಾದ ಆಸ್ತಿ ಮತ್ತು ಪ್ರಾಣಹಾನಿ ಉಂಟಾಗಿದೆ. ಇತ್ತೀಚಿನ ವರದಿಯ ಪ್ರಕಾರ ಈ ದುರ್ಘಟನೆಯಲ್ಲಿ ಮಡಿದವರ ಸಂಖ್ಯೆ ೧೧ ಮತ್ತು ಗಾಯಗೊಂಡವರ ಸಂಖ್ಯೆ ೧೧೨ ಇರುತ್ತದೆ. ಎಲ್ಲ ಗಾಯಗೊಂಡವರನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸಾಗಿಸಲಾಗಿದ್ದು ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅಗ್ನಿಶಾಮಕ ದಳ, ಪೋಲೀಸ್ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಮತ್ತು ಕಾರ್ಪೊರೇಷನ್ ಸಿಬ್ಬಂದಿಯವರ ಸಹಾಯದಿಂದ ಕಟ್ಟಡ ಕುಸಿತದಲ್ಲಿ ಸಿಕ್ಕಿದವರನ್ನು ಹೊರ ತೆಗೆಯಲಾಗುತ್ತಿದೆ. ದುರ್ಘಟನೆಯು ನಡೆದ ಕೂಡಲೇ ಪ್ರಾರಂಭವಾದ ಕೆಲಸ ಇಡೀ ರಾತ್ರಿಯೆಲ್ಲಾ ನಡೆದು ಇನ್ನೂ ಸಾಗುತ್ತಿದೆ. ಹಿರಿಯ ಪೋಲೀಸ್ ಅಧಿಕಾರಿಗಳು, ಸಬ್ ಏರಿಯಾ ಕಮಾಂಡರು ಹಾಗೂ ಬಿ.ಇ.ಎಂ.ಎಲ್. ಇಂಜಿನಿಯರ್‌ಗಳು ಇವರ ಮೇಲ್ವಿಚಾರಣೆಯಲ್ಲಿ ಕೆಲಸ ನಡೆಯುತ್ತಿದೆ. ರಾಜ್ಯಪಾಲರು, ನಾನು ಹಾಗೂ ನನ್ನ ಸಂಪುಟದ ಸಹೋದ್ಯೋಗಿಗಳು ಸ್ಥಳಕ್ಕೆ ಭೇಟಿಯನ್ನು ಇತ್ತಿದ್ದೇವೆ. ವಿರೋಧಪಕ್ಷದ ನಾಯಕರುಗಳು ಹಾಗೂ ಅನೇಕ ಸದಸ್ಯರುಗಳು ಸ್ಥಳಕ್ಕೆ ಭೇಟಿ ಇತ್ತು ಅಪಘಾತಕ್ಕೆ ತುತ್ತಾದವರ ರಕ್ಷಣಾ ಕಾರ್ಯವನ್ನು ವೀಕ್ಷಿಸಿದ್ದಾರೆ. ನಗರಾಭಿವೃದ್ಧಿ ಸಚಿವರು ನಗರ ಸಭೆಯ ಮೇಯರ್ ಹಾಗೂ ಉಪ ಮೇಯರ್‌ರವರು ಸ್ಥಳದಲ್ಲಿ ಇದ್ದು ಪರಿಹಾರ ಕಾರ್ಯಕ್ರಮಕ್ಕೆ ನೆರವನ್ನು ಇತ್ತಿದ್ದಾರೆ. ವಾರ್ತಾ ಸಚಿವ ಶ್ರೀ ಎಂ. ರಘುಪತಿಯವರು ಮತ್ತು ಕ್ಷೇತ್ರದ ವಿಧಾನಸಭಾ ಸದಸ್ಯ ಶ್ರೀ ನಾರಾಯಣರಾವ್‌ರವರು ಇಡೀ ರಾತ್ರಿ ಸ್ಥಳದಲ್ಲಿದ್ದು ಇದರ ಮೇಲ್ವಿಚಾರಣೆಯನ್ನು ವಹಿಸಿದರು. ನಗರಾಭಿವೃದ್ಧಿ ಸಚಿವರಾದ ಶ್ರೀ ಎಂ. ಚಂದ್ರಶೇಖರ್ ಮತ್ತು ವಾರ್ತಾ ಸಚಿವರಾದ ಶ್ರೀ ರಘುಪತಿಯವರು ಈ ದಿವಸ ಬೆಳಿಗ್ಗೆಯೂ ಸಹ ಸ್ಥಳಕ್ಕೆ ಭೇಟಿ ಇತ್ತು ಮುಂದಿನ ಕಾರ್ಯಕ್ರಮಕ್ಕೆ ಸಲಹೆಗಳನ್ನು ಇತ್ತಿದ್ದಾರೆ. ಇದರ ಜೊತೆಗೆ ಎರಡು ಆಸ್ಪತ್ರೆಗಳ ವೈದ್ಯರನ್ನು ಕರೆಸಿ ಪ್ರತ್ಯೇಕವಾಗಿ ಒಂದು ಟೀಂನ್ನು ಇಟ್ಟಿದ್ದೇವೆ. ಜೊತೆಗೆ ಆಂಬುಲೆನ್ಸ್ ವ್ಯಾನುಗಳು ಇವೆ. ಏನಾದರೂ ತಕ್ಷಣ ಚಿಕಿತ್ಸೆ ಮಾಡುವಂಥ ಅಗತ್ಯ ಬಿದ್ದರೂ ಕೂಡ ಹಗಲೂ ರಾತ್ರಿ ಅಲ್ಲಿ ಕೆಲಸ ಮಾಡಲಿಕ್ಕೆ ಸಿದ್ಧರಾಗಿ ಕೂತಿದ್ದಾರೆ. ಇದರ ಜೊತೆಗೆ ಹೋಂಗಾರ್ಡ್ಸ್, ಪೋಲೀಸ್ ಇಲಾಖೆ, ಮಿಲಿಟರಿಯವರು ಅಹೋರಾತ್ರಿ ಒಂದು ಕ್ಷಣವೂ ಬಿಡದೆ ಕೆಲಸ ಮಾಡುತ್ತಿದ್ದಾರೆ, ಅವರು ಮಾಡುತ್ತಿರುವಂಥ ಕೆಲಸಕ್ಕೆ ಶ್ಲಾಘನೆಯನ್ನು ಸೂಚಿಸುತ್ತಾ, ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಮೃತರ ಕುಟುಂಬದವರಿಗೆ ೨,೦೦೦ ರೂಪಾಯಿ ಪರಿಹಾರ ಧನವನ್ನು ಮತ್ತು ಗಾಯಗೊಂಡವರಿಗೆ ೫೦೦ ರೂಪಾಯಿ ಪರಿಹಾರ ಧನವನ್ನು ಕೊಡಲಾಗುವುದು.